ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 10 ಸೋಮವಾರ 2022

ಸಂಪುಟ: 43 | ಸಂಚಿಕೆ: 174 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಭಕ್ತಸಾಗರದ ನಡುವೆ ಚಾಮುಂಡೇಶ್ವರಿ ಭವ್ಯ ರಥೋತ್ಸವ



ಮೈಸೂರು, ಅ.9(ಎಂಟಿವೈ)– ಚಾಮುಂಡಿಬೆಟ್ಟದಲ್ಲಿ ಅಪಾರ ಸಂಖ್ಯೆಯ ಭಕ್ತರ ಸಮ್ಮುಖದಲ್ಲಿ ನಾಡಿನ ಅಧಿದೇವತೆ ಶ್ರೀ ಚಾಮುಂಡೇಶ್ವರಿಯ ಉತ್ಸವ ಮೂರ್ತಿಯ ಮೆರವಣಿಗೆಯೊಂದಿಗೆ ಭವ್ಯ ರಥೋತ್ಸವ ನಡೆಯಿತು. ನಾಡಹಬ್ಬ ದಸರಾ ಮಹೋತ್ಸವದ ಜಂಬೂಸವಾರಿ ಮೆರವಣಿಗೆ ನಡೆದ ಬಳಿಕ ಚಾಮುಂಡಿಬೆಟ್ಟದಲ್ಲಿ ಆಶ್ವಯುಜ ಶುಕ್ಲ ಪೂರ್ಣಿಮೆ ಉತ್ತರಾಭಾದ್ರ ನಕ್ಷತ್ರದ ದಿನ ಮಹಾರಥೋತ್ಸವ ನಡೆಸುವ ಪದ್ಧತಿಯಿದ್ದು, ಅದರಂತೆ ಭಾನುವಾರ ಬೆಳಗ್ಗೆ 7.50ರಿಂದ 8.10 ಗಂಟೆ ಒಳಗೆ ಸಲ್ಲುವ ಶುಭ ಮುಹೂರ್ತದಲ್ಲಿ ಮಹಾರಥೋತ್ಸವವನ್ನು ಅಪಾರ ಸಂಖ್ಯೆ ಭಕ್ತರ ಹರ್ಷೋದ್ಗಾರದ ನಡುವೆ ಶ್ರದ್ಧಾಭಕ್ತಿಯಿಂದ ನೆರವೇರಿಸಲಾಯಿತು.

ರಾಜವಂಶಸ್ಥರಿಂದ ಚಾಲನೆ: ಚಾಮುಂಡಿ ಬೆಟ್ಟದಲ್ಲಿ ನಡೆದ ರಥೋತ್ಸವಕ್ಕೆ ಇಂದು ಬೆಳಗ್ಗೆ ರಾಜವಂಶಸ್ಥರಾದ ಪ್ರಮೋದಾ ದೇವಿ ಒಡೆಯರ್ ಹಾಗೂ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ತ್ರಿಷಿಕಾ ಕುಮಾರಿ ಒಡೆಯರ್ ಅವರು ಪೂಜೆ ಸಲ್ಲಿಸಿ, ರಥ ಎಳೆಯುವ ಮೂಲಕ ಚಾಲನೆ ನೀಡಿದರು. ಇದಕ್ಕೂ ಮುನ್ನ ದೇವಾಲಯದಲ್ಲೇ ಪ್ರಧಾನ ಆಗಮಿಕ ಡಾ.ಎನ್. ಶಶಿಶೇಖರ್ ದೀಕ್ಷಿತ್ ನೇತೃತ್ವದಲ್ಲಿ ನಡೆದ ವಿಶೇಷ ಪೂಜಾ ಕಾರ್ಯದಲ್ಲಿ ರಾಜವಂಶಸ್ಥರು ಭಾಗಿಯಾಗಿದ್ದರು. ನಂತರ ಮಂಗಳವಾದ್ಯ, ಛತ್ರಿ–ಚಾಮರ ಹಾಗೂ ವಿವಿಧ ಬಿರುದು ಬಾವಲಿಯೊಂದಿಗೆ ಉತ್ಸವ ಮೂರ್ತಿಯನ್ನು ದೇವಾಲಯದ ಹೊರಗೆ ತಂದು, ರಥದಲ್ಲಿ ಪ್ರತಿಷ್ಠಾಪಿಸಲಾಯಿತು. ಬಳಿಕ ಮಂಗಳವಾದ್ಯ, ವಿವಿಧ ಸಾಂಸ್ಕೃತಿಕ ಕಲಾತಂಡ, ಪೊಲೀಸ್ ಬ್ಯಾಂಡ್ ವಾದನ ತಂಡದೊಂದಿಗೆ ದೇವಾಲಯದ ಸುತ್ತಲೂ ಒಂದು ಸುತ್ತು ದೊಡ್ಡ ರಥ ಎಳೆಯುವ ಮೂಲಕ ನಾಡದೇವಿಯ ಉತ್ಸವವನ್ನು ವೈಭವದಿಂದ ಆಚರಿಸಲಾಯಿತು.

ಸಿಡಿಮದ್ದು ಸಿಡಿತ: ಪ್ರತಿವರ್ಷದಂತೆ ರಥೋತ್ಸವದ ವೇಳೆ ನಗರ ಸಶಸ್ತ್ರ ಮೀಸಲು ಪಡೆಯ ಫಿರಂಗಿ ದಳದ ಸಿಬ್ಬಂದಿ ವಿಜಯದ ಸಂಕೇತವಾಗಿ ಸಿಡಿಮದ್ದು ಸಿಡಿಸಿದರು. ರಥೋತ್ಸವಕ್ಕೆ ಚಾಲನೆ ದೊರೆಯುತ್ತಿದ್ದಂತೆಯೇ ಫಿರಂಗಿ ▶ 8ನೇ ಪುಟಕ್ಕೆ

ಎರಡು ವರ್ಷ ಆಗಿದ್ದೇ ತಿಳಿಯಲಿಲ್ಲ

ಕೊರೊನಾ ಹಿನ್ನೆಲೆಯಲ್ಲಿ ಎರಡು ವರ್ಷದಿಂದ ರಥೋತ್ಸವ ಸಾಂಪ್ರದಾಯಿಕವಾಗಿ ಆಚರಿಸಲಾಗಿತ್ತು. 2019ರಲ್ಲಿ ರಥೋತ್ಸವ ವಿಜೃಂಭಣೆಯಿಂದ ನಡೆಸಲಾಗಿತ್ತು. ಇಷ್ಟು ಬೇಗ ಎರಡು ವರ್ಷ ಆಗಿದೆ ಎಂದು ತಿಳಿಯದಾಗಿದೆ. ಇಂದು ನಡೆದ ಪೂಜಾ ಮಹೋತ್ಸವದಲ್ಲಿ ನಾಡಿಗೆ ಒಳಿತಾಗಲಿ. ಕಾಲ ಕಾಲಕ್ಕೆ ಮಳೆ ಬಂದು, ರೈತರಿಗೆ ಉತ್ತಮ ಬೆಳೆ ಬರಲೆಂದು ವಿಶೇಷ ಪೂಜೆ ಸಲ್ಲಿಸಲಾಗಿದೆ.

–ಪ್ರಮೋದಾದೇವಿ ಒಡೆಯರ್, ರಾಜವಂಶಸ್ಥರು

ಹಿಂದೂ ವಿರೋಧಿ ಹೇಳಿಕೆ

ರಾಜೇಂದ್ರ ಗೌತಮ್ ರಾಜೀನಾಮೆ



ರಾಜೇಂದ್ರ ಗೌತಮ್

ನವದೆಹಲಿ, ಅ.9– ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಸಂಪುಟದ ಸಚಿವರಾಗಿದ್ದ ರಾಜೇಂದ್ರ ಪಾಲ್ ಗೌತಮ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಅವರು 'ನಾನು ಹಿಂದೂ ದೇವತೆಗಳನ್ನು ಪೂಜಿಸುವುದಿಲ್ಲ' ಎಂದು ಹೇಳುವ ಮೂಲಕ ವಿವಾದ ಸೃಷ್ಟಿಸಿದ್ದರು.

ಇದಾದ ಬಳಿಕ ಬಿಜೆಪಿ ಮತ್ತು ಎಎಪಿ ನಡುವೆ ಸಾಕಷ್ಟು ವಾಗ್ವಾದಗಳು ನಡೆದಿದ್ದವು. ಇನ್ನು, ಬಿಜೆಪಿ ಸಹ ರಾಜೇಂದ್ರ ಪಾಲ್‌ರನ್ನು ಸಂಪುಟದಿಂದ ಕೈಬಿಡುವಂತೆ ಒತ್ತಾಯಿಸಿತ್ತು. ಇದೀಗ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು ಈ ಬಗ್ಗೆ ಟ್ವೀಟ್ ಮಾಡಿರುವ ಅವರು, ಇಂದು ಮಹರ್ಷಿ ವಾಲ್ಮೀಕಿ ಅವರ ದ್ಯೋತಕ ದಿನ. ಮತ್ತೊಂದೆಡೆ ಇದು ಮಾನ್ಯವರ್ ಕಾನ್ಶಿರಾಮ್ ಸಾಹೇಬ್ ಅವರ ಪುಣ್ಯತಿಥಿ. ಇದು ಕಾಕತಾಳೀಯವೋ ಏನೋ. ಇಂದು ನಾನು ಅನೇಕ ಸಂಕೋಲೆಗಳಿಂದ ಬಿಡುಗಡೆ ಹೊಂದಿದ್ದೇನೆ. ಇಂದು ನಾನು ಮತ್ತೆ ಹುಟ್ಟಿದ್ದೇನೆ. ಈಗ ನಾನು ▶ 8ನೇ ಪುಟಕ್ಕೆ

ಮುಲಾಯಂ ಸಿಂಗ್ ಯಾದವ್ ಸ್ಥಿತಿ ಗಂಭೀರ




ದೆಹಲಿ: ಸಮಾಜವಾದಿ ಪಕ್ಷದ ಸಂಸ್ಥಾಪಕ ಮತ್ತು ಉತ್ತರ ಪ್ರದೇಶದ ಮಾಜಿ ಸಿಎಂ ಮುಲಾಯಂ ಸಿಂಗ್ ಯಾದವ್ ಅವರ ಆರೋಗ್ಯ ಸ್ಥಿತಿ ಗಂಭೀರವಾಗಿದೆ. ಅವರಿಗೆ ಜೀವರಕ್ಷಕ ಔಷಧಿಗಳನ್ನು ನೀಡಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ವೈದ್ಯರು ತಿಳಿಸಿದ್ದಾರೆ.

ಗುರುಗ್ರಾಮ್‌ನ ಮೇದಾಂತ ಆಸ್ಪತ್ರೆ ವೈದ್ಯಕೀಯ ನಿರ್ದೇಶಕ ಡಾ.ಸಂಜೀವ್ ಗುಪ್ತಾ ಮಾಹಿತಿ ನೀಡಿ, ಸಮಗ್ರ ತಜ್ಞರ ತಂಡದಿಂದ ಚಿಕಿತ್ಸೆ ನೀಡಲಾಗುತ್ತಿದೆ ಎಂದಿದ್ದಾರೆ. ಇದನ್ನು ಸಮಾಜವಾದಿ ಪಕ್ಷ ತಮ್ಮ ಅಧಿಕೃತ ಟ್ವಿಟರ್‌ನಲ್ಲಿ ಹಂಚಿಕೊಂಡಿದೆ. ಆ.22ರಿಂದ ಮೇದಾಂತದಲ್ಲಿ ಮುಲಾಯಂ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಹಿಂದೆ ಅವರು ಜುಲೈನಲ್ಲಿ ಆಸ್ಪತ್ರೆಗೆ ದಾಖಲಾಗಿದ್ದರು. ಮುಲಾಯಂ ಅವರ ಆರೋಗ್ಯ ಸ್ಥಿತಿ ಹದಗೆಟ್ಟಿರುವ ಬಗ್ಗೆ ಸಮಾಜವಾದಿ ಪಕ್ಷ ಭಾನುವಾರ ಮಾಹಿತಿ ನೀಡಿದ ನಂತರ, ಮೋದಿ ಮತ್ತು ಉತ್ತರಪ್ರದೇಶ ಸಿಎಂ ಯೋಗಿ ಆದಿತ್ಯನಾಥ ಅವರು ಅಖಿಲೇಶ್ ಅವರಿಗೆ ಕರೆ ಮಾಡಿ ಮುಲಾಯಂ ಅವರ ಆರೋಗ್ಯದ ಬಗ್ಗೆ ವಿಚಾರಿಸಿದ್ದಾರೆ. ಮೋದಿ, ಮುಲಾಯಂ ಅವರಿಗೆ ಸಾಧ್ಯವಿರುವ ಎಲ್ಲ ನೆರವು ಮತ್ತು ಸಹಾಯದ ಭರವಸೆ ನೀಡಿದ್ದಾರೆ.

ಗುಜರಾತ್‌ನ ಮೋಢೇರಾ ಭಾರತದ ಮೊದಲ ಸೌರಶಕ್ತಿ ಚಾಲಿತ ಗ್ರಾಮ

ಪ್ರಧಾನಮಂತ್ರಿ ನರೇಂದ್ರ ಮೋದಿ ಘೋಷಣೆ



ಮೋಢೇರಾ(ಗುಜರಾತ್), ಅ.9–ಗುಜರಾತ್‌ನ ಮೆಹ್ಸಾನಾ ಜಿಲ್ಲೆಯ ಮೋಢೇರಾ ಗ್ರಾಮವನ್ನು ಭಾರತದ ಮೊದಲ 24X7 ಸೌರಶಕ್ತಿ ಚಾಲಿತ ಗ್ರಾಮ ಎಂದು ಪ್ರಧಾನಿ ನರೇಂದ್ರ ಮೋದಿ ಘೋಷಿಸಿದ್ದಾರೆ.


ಪ್ರಧಾನಿ ಮೋದಿ ಭಾನುವಾರ ಮೋಢೇರಾದಲ್ಲಿ ಅನೇಕ ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ಮಾಡಿದ್ದಾರೆ. ಇದಾದ ನಂತರ ಮೆಹ್ಸಾನಾದ ಮೋಢೇರಾದಲ್ಲಿ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಸೂರ್ಯ ದೇವಾಲಯದೊಂದಿಗೆ ಸಂಬಂಧ ಹೊಂದಿರುವ ಮೋಢೇರಾ ಸೌರಶಕ್ತಿಯ ದಾಪುಗಾಲುಗಳಿಗೂ ಹೆಸರುವಾಸಿಯಾಗಿದೆ. ಸೌರಶಕ್ತಿಯನ್ನು ಬಳಸಿಕೊಳ್ಳುವತ್ತ ದೊಡ್ಡ ಹೆಜ್ಜೆ ಇಟ್ಟಿರುವುದರಿಂದ ಮೋಢೇರಾಗೆ ಇದು ವಿಶೇಷ ದಿನ. ಉದ್ಘಾಟನೆಗೊಂಡ ಯೋಜನೆಗಳು ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತವೆ. ಡೈರಿ ಕ್ಷೇತ್ರ ಮತ್ತು ಪಾರಂಪರಿಕ ಪ್ರವಾಸೋದ್ಯಮಕ್ಕೆ ಉತ್ತೇಜನ ಸಿಗುತ್ತದೆ ಎಂದರು. ಇಂದು ಶರದ್ ಪೂರ್ಣಿಮೆ ಮತ್ತು ಮಹರ್ಷಿ ವಾಲ್ಮೀಕಿ ಜಯಂತಿ ನಡೆಯುತ್ತಿರುವುದು ಕಾಕತಾಳೀಯವಾಗಿದೆ ಎಂದು ಹೇಳಿದರು.

ಕಳೆದ ಕೆಲವು ದಿನಗಳಿಂದ ದೇಶಾದ್ಯಂತ 'ಮೋಢೇರಾ ಮಾದರಿ' ಬಗ್ಗೆ ಚರ್ಚೆಯಾಗುತ್ತಿದೆ. ಹಿಂದೆ, ಸೂರ್ಯ ದೇವಾಲಯದಿಂದಾಗಿ ಜಗತ್ತು ಮೋಢೇರಾವನ್ನು ತಿಳಿದಿತ್ತು. ಆದರೆ ಇನ್ನು ಮುಂದೆ ಇದನ್ನು 'ಸೂರ್ಯಗ್ರಾಮ' ಎಂದೂ ಕರೆಯಲಾಗುವುದು ಎಂದು ಮೋದಿ ಹೇಳಿದ್ದಾರೆ. ಈ ದೇವಾಲಯವನ್ನು ನಾಶಮಾಡಲು ಹಲವಾರು ಪ್ರಯತ್ನಗಳನ್ನು ಮಾಡಲಾಯಿತು. ಇಂದು ಸೂರ್ಯ ದೇವಾಲಯ ಇಡೀ ವಿಶ್ವಕ್ಕೆ ಮಾದರಿಯಾಗಿದೆ. ಜಗತ್ತಿನಲ್ಲಿ ಸೌರಶಕ್ತಿಯ ಕುರಿತು ಜನರು ಚರ್ಚಿಸಿದಾಗ ಲೆಲ್ಲಾ, ಮೋಢೇರಾ ಅವರ ಚರ್ಚೆಯಲ್ಲಿ ಬರುತ್ತದೆ ಇಂತಹ ಯಶಸ್ವಿ ಪ್ರಯತ್ನಗಳು ದೇಶದಾದ್ಯಂತ ಹೆಚ್ಚಾಗಬೇಕು ಎಂದರು.

ಮೋಢೇರಾದ ಜನರು ವಿದ್ಯುತ್ ಗ್ರಾಹಕರು ಮತ್ತು ಉತ್ಪಾದಕರು. ಸರ್ಕಾರ ಹೆಚ್ಚುವರಿಯಾಗಿ ಉತ್ಪಾದಿಸಿದ ವಿದ್ಯುತ್ ಖರೀದಿಸುತ್ತಿದೆ. ಈಗ ನಾವು ವಿದ್ಯುತ್‌ಗೆ ಹಣ ಪಾವತಿಸುವುದಿಲ್ಲ. ಆದರೆ ಅದನ್ನು ಮಾರಾಟ ಮಾಡಲು ಪ್ರಾರಂಭಿಸುತ್ತೇವೆ ಮತ್ತು ಅದರಿಂದ ▶ 8ನೇ ಪುಟಕ್ಕೆ

ಜಗವಿರುವವರೆಗೂ ವಾಲ್ಮೀಕಿ, ರಾಮಾಯಣ ಚಿರಸ್ಥಾಯಿ

ವಾಲ್ಮೀಕಿ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಶಾಸಕ ಜಿ.ಟಿ.ದೇವೇಗೌಡ



ಮೈಸೂರಿನ ಕಲಾಮಂದಿರದಲ್ಲಿ ಏರ್ಪಡಿಸಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮವನ್ನು ಶಾಸಕ ಜಿ.ಟಿ.ದೇವೇಗೌಡ, ವಾಲ್ಮೀಕಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿದರು. ಚಿತ್ರದಲ್ಲಿ ಶಾಸಕರಾದ ಎಲ್.ನಾಗೇಂದ್ರ, ತನ್ವೀರ್ ಸೇಠ್, ವಿಧಾನಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ, ಡಾ.ಡಿ.ತಿಮ್ಮಯ್ಯ, ಮೇಯರ್ ಶಿವಕುಮಾರ್ ಇನ್ನಿತರರಿದ್ದಾರೆ.

ಮೈಸೂರು,ಅ.9(ಆರ್‌ಕೆಬಿ)– ಮಹರ್ಷಿ ವಾಲ್ಮೀಕಿ ಅವರು ರಾಮಾಯಣ ಮಹಾಕಾವ್ಯವೆಂದೇ ಖ್ಯಾತಿ ಪಡೆದಿರುವ ಮೊದಲ ಸಂಸ್ಕೃತ ಕಾವ್ಯವನ್ನು (ಆದಿಕಾವ್ಯ) ರಚಿಸಿದವರು. ವಾಲ್ಮೀಕಿ ಶ್ರೀರಾಮನ ಕಥೆಯನ್ನು ಹೇಳುವ ರಾಮಾಯಣವನ್ನು ಬರೆದ ಮಹಾನ್ ಋಷಿ ಎಂದು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಬಣ್ಣಿಸಿದ್ದಾರೆ.

ಮೈಸೂರು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಮೈಸೂರು ನಗರ ಮತ್ತು ತಾಲೂಕು ನಾಯಕ ಜನಾಂಗಗಳ ಸಂಘಗಳ ಆಶ್ರಯದಲ್ಲಿ ಮೈಸೂರಿನ ಕಲಾಮಂದಿರದಲ್ಲಿ ಭಾನುವಾರ ಏರ್ಪಡಿಸಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಜಗತ್ತು ಇರುವವರೆಗೂ ರಾಮಾಯಣ ಬದುಕುತ್ತದೆ ಎಂದ ಅವರು, ಮಹರ್ಷಿ ವಾಲ್ಮೀಕಿ ಅವರು ಜನಮಾನಸದಲ್ಲಿ ಚಿರಸ್ಥಾಯಿಯಾಗಿರುವ ಅಮರ ಋಷಿ ಎಂದು ಹೇಳಿದರು.

ಎಸ್ಸಿ/ಎಸ್ಟಿ ಮೀಸಲಾತಿ ಹೆಚ್ಚಳಕ್ಕೆ ಆಗ್ರಹಿಸಿ ಅನಿರ್ದಿಷ್ಟಾವಧಿ ಧರಣಿ ನಡೆಸಿದ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ ಹಾಗೂ ಇತರ ಎಲ್ಲ ಧರ್ಮ ಗುರುಗಳನ್ನು ಶ್ಲಾಘಿಸಿದ ಅವರು, ವಾಲ್ಮೀಕಿಯವರ ಜೀವನ ಚರಿತ್ರೆಯನ್ನು ಸಂಕ್ಷಿಪ್ತವಾಗಿ ಓದಿದರು. ಅಧ್ಯಕ್ಷತೆ ವಹಿಸಿದ್ದ ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ, ಎಸ್ಟಿ ಮೀಸಲಾತಿಯನ್ನು ಶೇ.3ರಿಂದ 7ಕ್ಕೆ ಹಾಗೂ ಎಸ್ಸಿ ಮೀಸಲಾತಿಯನ್ನು ಶೇ.15ರಿಂದ 17ಕ್ಕೆ ಏರಿಸಿರುವ ಮುಖ್ಯಮಂತ್ರಿಗಳಿಗೆ ಕೃತಜ್ಞತೆ ಸಲ್ಲಿಸಿದರು.

ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ ನಾಯಕ ಸಮುದಾಯದ ಮೊದಲ ಮೇಯರ್ ಮೈಸೂರಿಗೆ ಸಿಕ್ಕಿದೆ ಎಂದು ಹೇಳಿದ ನಾಗೇಂದ್ರ, ಬುಡಕಟ್ಟು ಸಮುದಾಯದ ಮಹಿಳೆಯನ್ನು ದೇಶದ ಅತ್ಯುನ್ನತ ಸಾಂವಿಧಾನಿಕ ಹುದ್ದೆಯಾದ ರಾಷ್ಟ್ರಪತಿಯನ್ನಾಗಿ ಮಾಡಿದ ಕೀರ್ತಿಯೂ ಬಿಜೆಪಿಗೆ ಸಲ್ಲುತ್ತದೆ ಎಂದು ತಿಳಿಸಿದರು.

ಸುಮಾರು 1,300 ವರ್ಷಗಳ ಹಿಂದೆ ಚೆನ್ನೈ ಬಳಿ ನಿರ್ಮಿಸಲಾದ ಚೆನ್ನೈ ವಾಲ್ಮೀಕಿ ದೇವಾಲಯವು ▶ 8ನೇ ಪುಟಕ್ಕೆ

ಎಸ್‌ಸಿ/ಎಸ್‌ಟಿಗೆ ಸಮಾನ ಅವಕಾಶ, ಸ್ವಾಭಿಮಾನದ ಬದುಕು ಕಲ್ಪಿಸಲು ಬದ್ಧ

ಮುಖ್ಯಮಂತ್ರಿ ಬಸವರಾಜು ಬೊಮ್ಮಾಯಿ ಅಭಿಮತ



ಬೆಂಗಳೂರು: ತುಳಿತಕ್ಕೆ ಒಳಪಟ್ಟ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಆತ್ಮಗೌರವ, ಆತ್ಮಸನ್ಮಾನ, ಸಮಾನ ಅವಕಾಶ ಹಾಗೂ ಸ್ವಾಭಿಮಾನದ ಬದುಕು ಕಲ್ಪಿಸಲು ಸರ್ಕಾರ ಬದ್ಧವಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ವಾಲ್ಮೀಕಿ ಜಯಂತಿ ಅಂಗವಾಗಿ ವಾಲ್ಮೀಕಿ ಪ್ರತಿಮೆಗೆ ಮಾಲಾರ್ಪಣೆ ನಂತರ ಮಾತನಾಡಿದ ಅವರು, ಪರಿವರ್ತನೆ ಹರಿಕಾರ, ಶ್ರೇಷ್ಠ ಮಾನವತಾವಾದಿ, ರಾಮಾಯಣದ ರಚನೆಕಾರ, ಇಡೀ ಜಗತ್ತಿಗೆ ದಾರಿದೀಪವಾಗಿರುವ ವಾಲ್ಮೀಕಿ ಜಯಂತಿಯನ್ನು ವಿಜೃಂಭಣೆಯಿಂದ ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ. ಮಹರ್ಷಿ ವಾಲ್ಮೀಕಿ ಅವರ ತತ್ವ ಆದರ್ಶಗಳನ್ನು ಸರ್ಕಾರ, ಸಮಾಜದ ಪ್ರತಿಯೊಬ್ಬರೂ ಅಳವಡಿಸಿಕೊಳ್ಳಲು ಅಗತ್ಯವಿರುವ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದೇವೆ ಎಂದು ತಿಳಿಸಿದರು.

ಮಹರ್ಷಿ ವಾಲ್ಮೀಕಿ ಅವರ ರಾಮಾಯಣ ವಿಶ್ವದ ಹತ್ತು ಶ್ರೇಷ್ಠ ಗ್ರಂಥಗಳಲ್ಲಿ ಒಂದಾಗಿದೆ. ರಾಮಾಯಣ ರಚಿಸಿ ಜೀವನದ ಮಾರ್ಗ ಮತ್ತು ಸಾರವನ್ನು ವಾಲ್ಮೀಕಿ ಕೊಟ್ಟಿದ್ದಾರೆ. ರಾಮಾಯಣದ ಎಲ್ಲಾ ಪ್ರಸಂಗಗಳು ಅನುಕರಣೀಯ ಎಂದರು. ಸಚಿವರಾದ ಗೋವಿಂದ ಕಾರಜೋಳ, ಬಿ. ಶ್ರೀರಾಮುಲು, ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದಪುರಿ ಸ್ವಾಮೀಜಿ, ಭೋವಿ ಪೀಠದ ಸಿದ್ದರಾಮೇಶ್ವರ ಸ್ವಾಮೀಜಿ ಇನ್ನಿತರರಿದ್ದರು.



ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾದ ಮಹಾಪ್ರಧಾನ ಕಾರ್ಯದರ್ಶಿ ಈಶ್ವರ್ ಖಂಡ್ರೆ, ಉಪಾಧ್ಯಕ್ಷರೂ ಆದ ನಿವೃತ್ತ ಪೊಲೀಸ್ ಮಹಾನಿರ್ದೇಶಕ ಶಂಕರ ಬಿದರಿ ಅವರು ಭಾನುವಾರ ಮೈಸೂರಿನ ಸುತ್ತೂರು ಮಠಕ್ಕೆ ಭೇಟಿ ನೀಡಿ, ಶಿವರಾತ್ರಿ ದೇಶಿಕೇಂದ್ರ ಶ್ರೀಗಳ ಆಶೀರ್ವಾದ ಪಡೆದರು. ಈ ವೇಳೆ ಮಹಾಸಭೆಯ ಪದಾಧಿಕಾರಿಗಳಾದ ವರುಣಾ ಮಹೇಶ್, ಹಂದನಹಳ್ಳಿ ಸೋಮಶೇಖರ, ಪ್ರದೀಪ್‌ಕುಮಾರ್, ರೇಚಣ್ಣ, ಪ್ರತಿಧ್ವನಿ ಪ್ರಸಾದ್, ಐಲೈಫ್ ಅಧ್ಯಕ್ಷರಾದ ಎಚ್.ಎಸ್.ವೀರೇಶ್, ಜಗದೀಶ, ದಯಾನಂದ್ ಹಾಜರಿದ್ದರು.

ಹಿರಿಯ ಪ್ರಸಾದನ ತಜ್ಞ ಬಿ.ಎಂ.ರಾಮಚಂದ್ರರಿಗೆ ಸನ್ಮಾನ



ಮೈಸೂರು, ಅ.9– ಮೈಸೂರು ಆರ್ಟ್ಸ್ ಗ್ಯಾಲರಿಯಲ್ಲಿ ನಡೆದ 72ನೇ ಸಾಧಕರೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಮೈಸೂರಿನ ಹಿರಿಯ ಪ್ರಸಾದನ ತಜ್ಞ ಬಿ.ಎಂ. ರಾಮಚಂದ್ರ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಇವರು ಸಾಮಾನ್ಯ ಕಾರ್ಯಕರ್ತನಾಗಿ ರಂಗಭೂಮಿಗೆ ಬಂದು ಕ್ರಮೇಣ ನಟರಾಗಿ, ನಿರ್ದೇಶಕರಾಗಿ, ವರ್ಣಾಲಂಕಾರ ಮುತ್ಸದ್ದಿಯಾಗಿ ಹಂತಹಂತವಾಗಿ ಬೆಳೆದು ಚಲನ ಚಿತ್ರ ಕ್ಷೇತ್ರದಲ್ಲೂ ತೊಡಗಿಸಿಕೊಂಡು ಹಂಸಲೇಖ, ದಿ. ಪುಟ್ಟಣ್ಣ ಕಣಗಾಲ್, ಕಣಗಾಲ್ ಪ್ರಭಾಕರ ಶಾಸ್ತ್ರಿ, ಹುಣಸೂರು ಕೃಷ್ಣಮೂರ್ತಿ, ಬಿ.ವಿ.ಕಾರಂತ ಹಾಗೂ ಗಿರೀಶ್ ಕಾರ್ನಾಡ್ ಇನ್ನೂ ಅನೇಕ ಕಲಾ ದಿಗ್ಗಜರ ಚಲನಚಿತ್ರಗಳಿಗೆ ಅವಶ್ಯಕತೆಗೆ ತಕ್ಕಂತೆ ಪರಿಕರ ಒದಗಿಸುವುದರ ಜೊತೆಗೆ ಕಲಾವಿದರಿಗೆ ಪ್ರಸಾದನ ಮತ್ತು ವಸ್ತ್ರಾಲಂಕಾರವನ್ನು ಶ್ರೀ ರಾಜೇಶ್ವರಿ ವಸ್ತ್ರಾಲಂಕಾರ ಸಂಸ್ಥೆಯ ಮೂಲಕ ಅತ್ಯಂತ ಉತ್ಸವಭರಿತರಾಗಿ ಇಂದಿಗೂ ಕಾರ್ಯನಿರ್ವಹಿಸುತ್ತಿದ್ದಾರೆ. ಪತ್ರಕರ್ತ ಎಂ.ಆರ್.ಸತ್ಯನಾರಾಯಣ, ಹಿರಿಯ ಕಲಾ ಪೋಷಕಿ ಹರಿಪ್ರಸಾದ, ಕೆ.ಜೆ.ನಾರಾಯಣ ಕಿಕ್ಕೇರಿ, ರಂಗನಾಥ, ಎನ್.ಎಸ್.ಶ್ರೀಧರ್, ರಂಗಭೂಮಿ ಕಲಾವಿದರು ಭಾಗವಹಿಸಿದ್ದರು. ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಚಂದ್ರಶೇಖರ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಾಂಬಾಮೂರ್ತಿ ಡಾ.ಜಮುನಾರಾಣಿ ಮಿರ್ಲೆ ಇತರರು ಹಾಜರಿದ್ದರು.

'ಗಂಧದಗುಡಿ' ಟ್ರೈಲರ್‌ಗೆ ಮೋದಿ ಮೆಚ್ಚುಗೆ

ಬೆಂಗಳೂರು,ಅ.9–ಪುನೀತ್ ರಾಜ್‌ಕುಮಾರ್ ನಟನೆಯ 'ಗಂಧದ ಗುಡಿ' ಸಿನಿಮಾ ರಿಲೀಸ್ ಡೇಟ್ ಫಿಕ್ಸ್ ಆಗಿದೆ. ಅದಕ್ಕೂ ಮುಂಚೆ ಚಿತ್ರದ ಟ್ರೈಲರ್ ಮೂಲಕ ಅಪ್ಪು ಎಲ್ಲರನ್ನೂ ಮಂತ್ರಮುಗ್ಧರನ್ನಾಗಿಸಿದ್ದಾರೆ. ಇದೀಗ ಈ ಚಿತ್ರದ ಟ್ರೈಲರ್ ನೋಡಿ ಪ್ರಧಾನಿ ಮೋದಿ ಮೆಚ್ಚುಗೆ ಸೂಚಿಸಿದ್ದಾರೆ.



ಅಪ್ಪು ನಟನೆಯ ಕೊನೆಯ ಸಿನಿಮಾ 'ಗಂಧದಗುಡಿ' ಟ್ರೈಲರ್ ರಿಲೀಸ್ ಆಗಿ, ಸಾಮಾಜಿಕ ಜಾಲತಾಣದಲ್ಲಿ ಭರ್ಜರಿ ವಿವ್ಸ್ ಗಿಟ್ಟಿಸಿಕೊಳ್ಳುತ್ತಿದೆ. 'ಗಂಧದಗುಡಿ' ಟ್ರೈಲರ್ ನೋಡಿ ಪ್ರತಿಯೊಬ್ಬರು ಅಪ್ಪುನ ನೋಡಿ ಭಾವುಕರಾಗಿದ್ದಾರೆ. ಅಪ್ಪು ಹೃದಯಕ್ಕೆ ಹತ್ತಿರವಾಗಿರುವ ಈ ಪ್ರಾಜೆಕ್ಟ್ ಬಗ್ಗೆ ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರು ಮೋದಿ ಅವರಿಗೆ ಟ್ರೈಲರ್ ಲಿಂಕ್ ಶೇರ್ ಮಾಡಿ, ಟ್ವೀಟ್ ಮಾಡಿದ್ದರು. ಇದೀಗ ಚಿತ್ರದ ಟ್ರೈಲರ್ ನೋಡಿ ಟ್ವೀಟ್ ಮೂಲಕ ಪ್ರಧಾನಿ ಮೋದಿ ಅವರು ಮೆಚ್ಚುಗೆ ಸೂಚಿದ್ದಾರೆ. ಅಪ್ಪು ಪ್ರಪಂಚದಾದ್ಯಂತ ಲಕ್ಷಾಂತರ ಜನರ ಹೃದಯದಲ್ಲಿ ನೆಲೆಸಿದ್ದಾರೆ. ಅವರು ತೇಜಸ್ಸಿನ ವ್ಯಕ್ತಿಯಾಗಿದ್ದರು, ಶಕ್ತಿಯಿಂದ ತುಂಬಿದ ಅಪ್ಪು ಪ್ರತಿಭೆಗೆ ಯಾರು ಸರಿಸಾಟಿಯಿಲ್ಲ. 'ಗಂಧದಗುಡಿ' ಪ್ರಕೃತಿ ಮಾತೆಗೆ, ಕರ್ನಾಟಕದ ನೈಸರ್ಗಿಕ ಸೌಂದರ್ಯಕ್ಕೆ ಅರ್ಪಣೆ. ಚಿತ್ರತಂಡದ ಪ್ರಯತ್ನಕ್ಕೆ ನನ್ನ ಶುಭಹಾರೈಕೆಗಳು ಎಂದು ಪ್ರಧಾನಿ ಮೋದಿ ಅವರು ಟ್ರೈಲರ್ ನೋಡಿ ಹೊಗಳಿದ್ದಾರೆ. ಟ್ವೀಟ್ ಮೂಲಕ ಶುಭಹಾರೈಸಿದ್ದಾರೆ. ಇನ್ನೂ ಪುನೀತ್ ನಟನೆಯ ಕೊನೆಯ ಸಿನಿಮಾ 'ಗಂಧದಗುಡಿ' ಇದೇ ಅಕ್ಟೋಬರ್ 28ಕ್ಕೆ ಕನ್ನಡ, ಇಂಗ್ಲೀಷ್ ಮತ್ತು ಹಿಂದಿಯಲ್ಲಿ ತೆರೆಕಾಣುತ್ತಿದೆ. ಪವರ್ ಸ್ಟಾರ್ ಆಗಿ ಅಲ್ಲ, ಪುನೀತ್ ರಾಜ್‌ಕುಮಾರ್ ಆಗಿ ಸಾಕ್ಷ್ಯ ಚಿತ್ರದ ಮೂಲಕ ಪ್ರೇಕ್ಷಕರ ಮುಂದೆ ಅಪ್ಪು ಬರಲಿದ್ದಾರೆ.

ಸುಭಾಷ್‌ಗೆ ನೀಡಿರುವ ವಾಲ್ಮೀಕಿ ಪ್ರಶಸ್ತಿ ವಾಪಸಿಗೆ ಆಗ್ರಹಿಸಿ ಪ್ರತಿಭಟನೆ



ಮೈಸೂರು, ಅ.9(ಆರ್‌ಕೆಬಿ)– ಕಲಾಮಂದಿರದಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಆರಂಭಕ್ಕೂ ಮುನ್ನ, ನಾಯಕ ಸಮುದಾಯದ ಮುಖಂಡರು ಕಲಾಮಂದಿರದ ಎದುರು ಪ್ರತಿಭಟನೆ ನಡೆಸಿದರು. ಮೈಸೂರು ಭಾಗದ ಸುಭಾಷ್ ಅವರಿಗೆ ರಾಜ್ಯಮಟ್ಟದ 'ವಾಲ್ಮೀಕಿ ಪ್ರಶಸ್ತಿ' ನೀಡಿರುವುದನ್ನು ವಿರೋಧಿಸಿ ಸುಮಾರು 30ಕ್ಕೂ ಹೆಚ್ಚು ಮಂದಿ ಪ್ರತಿಭಟನೆ ನಡೆಸಿ, ಸುಭಾಷ್ ಅವರು ಸ್ವಾರ್ಥ ಉದ್ದೇಶದಿಂದ ನಾಯಕ ಸಮುದಾಯದವರ ವಿರುದ್ಧ ಕಾನೂನು ಹೋರಾಟ ನಡೆಸುತ್ತಿದ್ದಾರೆ ಎಂದು ಆರೋಪಿಸಿ ಅವರ ವಿರುದ್ಧ ಘೋಷಣೆ ಕೂಗಿದರು. ಸುಬಾಷ್ ಅವರಿಗೆ ನೀಡಿರುವ ಪ್ರಶಸ್ತಿಯನ್ನು ಸರ್ಕಾರ ಹಿಂಪಡೆಯಬೇಕು ಎಂದು ಒತ್ತಾಯಿಸಿದರು.

ನಾಯಕ ಸಮುದಾಯದ ಹಿತಾಸಕ್ತಿಗಳಿಗೆ ವಿರುದ್ಧವಾಗಿ ಸುಭಾಷ್ ವರ್ತಿಸುತ್ತಿದ್ದಾರೆ ಎಂದು ಆರೋಪಿಸಿದ ಅವರು, ಸರ್ಕಾರವು ಅವರನ್ನು ಪ್ರಶಸ್ತಿಗೆ ಹೇಗೆ ಪರಿಗಣಿಸಿದೆ ಎಂದು ಆಶ್ಚರ್ಯ ವ್ಯಕ್ತಪಡಿಸಿದರು. ಸುಭಾಷ್ ಅವರಿಗೆ ಘೋಷಿಸಿರುವ ಪ್ರಶಸ್ತಿ ಹಿಂಪಡೆಯಬೇಕು ಎಂಬ ತಮ್ಮ ಬೇಡಿಕೆಯನ್ನು ಪುನರುಚ್ಚರಿಸಿದ ಅವರು, ಸರ್ಕಾರ ತಮ್ಮ ಬೇಡಿಕೆಯನ್ನು ಈಡೇರಿಸದಿದ್ದರೆ ಹೋರಾಟವನ್ನು ತೀವ್ರಗೊಳಿಸುವುದಾಗಿ ಎಚ್ಚರಿಸಿದರು. ಪ್ರತಿಭಟನೆಯಲ್ಲಿ ನಾಯಕ ಸಮಾಜದ ಮುಖಂಡರಾದ ದ್ಯಾವಪ್ಪನಾಯಕ, ಕೆಂಪನಾಯಕ, ಶ್ರೀಧರ್ ಚಾಮುಂಡಿಬೆಟ್ಟ, ಹುಣಸೂರು ಪ್ರಭಾಕರ್, ಹದಿನಾರು ಪ್ರಕಾಶ್, ಬಂಡಳ್ಳಿ ಕುಮಾರ್, ಜಯಪುರ ಜವರನಾಯಕ ಇನ್ನಿತರರು ಪಾಲ್ಗೊಂಡಿದ್ದರು.

ನಿಧನ

ಪುಟ್ಟಸ್ವಾಮಿ



ಮೈಸೂರು, ಅ.9–ಮೈಸೂರಿನ ಪಡುವಾರಹಳ್ಳಿ ನಿವಾಸಿ, ಕೆಎಸ್‌ಆರ್‌ಟಿಸಿ ನಿವೃತ್ತ ಚಾಲಕರಾದ ಪುಟ್ಟಸ್ವಾಮಿ (65) ಅವರು ಶನಿವಾರ ನಿಧನರಾದರು. ಮೃತರು ಪತ್ನಿ, ಪುತ್ರ ಪತ್ರಿಕಾ ವಿತರಕ ಚಂದ್ರಶೇಖರ್, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಗೋಕುಲಂನ ರುದ್ರಭೂಮಿಯಲ್ಲಿ ಭಾನುವಾರ ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಜಿಲ್ಲಾ ಕದಳಿ ಮಹಿಳಾ ಸಮಾವೇಶ

ದೊಡ್ಡ ಪ್ರಮಾಣದಲ್ಲಿ ಮಹಿಳಾ ಸಮಾನತೆ–ಸ್ವಾತಂತ್ರ್ಯ ಎತ್ತಿಹಿಡಿದವರು ಅಕ್ಕಮಹಾದೇವಿ

ಅದಮ್ಯ ಚೇತನ ಸಂಸ್ಥೆ ವ್ಯವಸ್ಥಾಪಕ ಟ್ರಸ್ಟಿ ಡಾ.ತೇಜಸ್ವಿನಿ ಅನಂತಕುಮಾರ್

ಮೈಸೂರು,ಅ.9(ಪಿಎಂ)– ಆಧ್ಯಾತ್ಮಿಕ ಚಿಂತನೆಯೊಂದಿಗೆ ಮಹಿಳಾ ಸಮಾನತೆ–ಸ್ವಾತಂತ್ರ್ಯವನ್ನು 12ನೇ ಶತಮಾನದಲ್ಲೇ ದೊಡ್ಡ ಪ್ರಮಾಣದಲ್ಲಿ ಎತ್ತಿ ಹಿಡಿದವರು ಅಕ್ಕಮಹಾದೇವಿ. ಪ್ರಸ್ತುತ ಜಗತ್ತಿನ ಬದಲಾವಣೆಗೆ ಪೂರಕವಾಗಿ ದೇಶದ ಮಹಿಳಾ ಸಮುದಾಯ ತನ್ನ ಕ್ಷಮತೆ ವೃದ್ಧಿಸಿಕೊಂಡು ಮುನ್ನಡೆಯಬೇಕಿದೆ ಎಂದು ಬೆಂಗಳೂರಿನ ಅದಮ್ಯ ಚೇತನ ಸಂಸ್ಥೆ ವ್ಯವಸ್ಥಾಪಕ ಟ್ರಸ್ಟಿ ಡಾ.ತೇಜಸ್ವಿನಿ ಅನಂತಕುಮಾರ್ ಅಭಿಪ್ರಾಯಪಟ್ಟರು.

ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಕದಳಿ ಮಹಿಳಾ ವೇದಿಕೆಯ ಮೈಸೂರು ಘಟಕದ ವತಿಯಿಂದ 'ಸಮರ್ಥ; ಗೃಹ ತಪಸ್ವಿನಿಯ ನಡಿಗೆ ಅನುಭಾವ ದೆಡೆಗೆ' ಶೀರ್ಷಿಕೆಯಡಿ ಭಾನುವಾರ ಹಮ್ಮಿಕೊಂಡಿದ್ದ ಪ್ರಥಮ ಮೈಸೂರು ಜಿಲ್ಲಾ ಕದಳಿ ಮಹಿಳಾ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

ಭಾರತದ ಬೃಹತ್ ಯೋಜನೆ 'ಮಂಗಳಯಾನ' ಯಶಸ್ವಿಯಾಯಿತು. ಇದರ 100ನೇ ದಿನವನ್ನು ನಮ್ಮ ಸಂಸ್ಥೆ ವತಿಯಿಂದ ಆಚರಿಸಲಾಯಿತು. ಈ ಬೃಹತ್ ಯೋಜನೆಯಲ್ಲಿ ಅತಿ ಹೆಚ್ಚು ಕೊಡುಗೆ ನೀಡಿದವರು ಮಹಿಳಾ ವಿಜ್ಞಾನಿಗಳು. 210 ಮಹಿಳೆಯರು ಇದರಲ್ಲಿ ಕೆಲಸ ಮಾಡಿದ್ದಾರೆ. ಇದು ಹೆಮ್ಮೆಯ ವಿಚಾರ. ಇಂತಹ ವಿಚಾರಗಳು ಮಹಿಳಾ ಸಮುದಾಯದಲ್ಲಿ ಆತ್ಮವಿಶ್ವಾಸ ಮೂಡಿಸಲಿವೆ. ಸಾಮಾನ್ಯವಾಗಿ ಕೌಶಲ್ಯಾಧಾರಿತ ತರಬೇತಿ ಕಾರ್ಯಕ್ರಮಗಳಲ್ಲಿ ಮಹಿಳೆಯರಿಗೆ ಬ್ಯೂಟಿಪಾರ್ಲರ್ ತರಬೇತಿ ಹಾಗೂ ಪುರುಷರಿಗೆ ಮೊಬೈಲ್ ರಿಪೇರಿ ತರಬೇತಿ ನೀಡುವುದು ರೂಢಿಯಲ್ಲಿದೆ. ಇದು ಬದಲಾಗಬೇಕು ಎಂದರು.



ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಕದಳಿ ಮಹಿಳಾ ಸಮಾವೇಶ ಉದ್ಘಾಟಿಸಿ ಅದಮ್ಯ ಚೇತನ ಸಂಸ್ಥೆ ವ್ಯವಸ್ಥಾಪಕ ಟ್ರಸ್ಟಿ ಡಾ.ತೇಜಸ್ವಿನಿ ಅನಂತಕುಮಾರ್ ಮಾತನಾಡಿದರು.

ವೀರ ನಾರಿಯರನ್ನು ದಾಸಿಯರೆಂದು ಉಲ್ಲೇಖಿಸಿದ ಬ್ರಿಟಿಷ್ ಇತಿಹಾಸ

ಮೈಸೂರು: ಮೈಸೂರು ದಸರಾ ಆಚರಣೆಗೆ ಮೂಲವಾದ ಹಂಪಿಯಲ್ಲಿರುವ ಮಹಾನವಮಿ ದಿಬ್ಬದ ಸುತ್ತಲು ಕೆತ್ತನೆಗಳಿದ್ದು, ಅವುಗಳನ್ನು ಗಮನಿಸಿದರೆ ಖಡ್ಗ ಝಳಪಿಸುತ್ತಿರುವ ವೀರ ನಾರಿಯರ ಚಿತ್ರಗಳು ಗೋಚರಿಸುತ್ತವೆ. ವಿಜಯನಗರ ಸಾಮ್ರಾಜ್ಯದ ಇಡೀ ಆಡಳಿತ ವ್ಯವಸ್ಥೆ ನೋಡಿಕೊಳ್ಳುತ್ತಿದ್ದ ಈ ವೀರ ಮಹಿಳೆಯರನ್ನು ಬ್ರಿಟಿಷರು ಬರೆದಿರುವ ಇತಿಹಾಸದಲ್ಲಿ ಕೃಷ್ಣದೇವರಾಯನ ದಾಸಿಯರೆಂದು ಉಲ್ಲೇಖಿಸಲಾಗಿದೆ ಎಂದು ಡಾ.ತೇಜಸ್ವಿನಿ ಅನಂತಕುಮಾರ್ ಬೇಸರ ವ್ಯಕ್ತಪಡಿಸಿದರು.

ಬ್ರಿಟಿಷರ ಇತಿಹಾಸ ಪುಸ್ತಕಗಳ ಹೊರತಾಗಿ ವಿಜಯನಗರ ಸಾಮ್ರಾಜ್ಯದ ಇತಿಹಾಸ ಅವಲೋಕಿಸಿದರೆ ಇಡೀ ಆಡಳಿತ ವ್ಯವಸ್ಥೆಯನ್ನು ಮಹಿಳೆಯರು ನೋಡಿಕೊಳ್ಳುತ್ತಿದ್ದನ್ನು ಗಮನಿಸಬಹುದು. ಇಂತಹ ಮಹತ್ವದ ಸಂಗತಿಯನ್ನು 'ಮರೆಯಲಾಗದ ಸಾಮ್ರಾಜ್ಯ' ಪುಸ್ತಕದಿಂದ ಮನಗಾಣಬಹುದು. ಆದರೆ ಬ್ರಿಟಿಷರು ಬರೆದಿರುವ ಇತಿಹಾಸದಲ್ಲಿ ಕೃಷ್ಣದೇವರಾಯನಿಗೆ ಸಾವಿರ ದಾಸಿಯರಿದ್ದರು ಎಂದು ಉಲ್ಲೇಖಿಸಲಾಗಿದೆ. ನಿಜ ಸಂಗತಿ ಎಂದರೆ ಆ ಸಾವಿರ ಮಹಿಳೆಯರು ಇಡೀ ಆಡಳಿತ ವ್ಯವಸ್ಥೆ ನೋಡಿಕೊಳ್ಳುತ್ತಿದ್ದವರು. ಮಾತ್ರವಲ್ಲದೆ, ಯುದ್ಧಕ್ಕೆ ಬೇಕಾದ ಯೋಧರನ್ನು ತಯಾರು ಮಾಡುವ ಜವಾಬ್ದಾರಿ ನಿಭಾಯಿಸುತ್ತಿದ್ದರು. ಇಂತಹ ಮಹತ್ವದ ಸಂಗತಿಗಳನ್ನು ಮರೆಮಾಚಲಾಗಿತ್ತು ಎಂದು ಹೇಳಿದರು.

ಇತ್ತೀಚೆಗೆ ಸಂಸತ್ತಿನಲ್ಲಿ ಒಂದು ಮಸೂದೆ ಅನುಮೋದನೆಯಾಗಿದೆ. ಅದರಂತೆ 2030ರಲ್ಲಿ ನಮ್ಮ ದೇಶದಲ್ಲಿ ಬಳಸುವ ಒಟ್ಟು ಪಳಯುಳಿಕೆ ಇಂಧನವನ್ನು ಶೇ.50ರಷ್ಟು ಇಳಿಸಲು ಉದ್ದೇಶಿಸಲಾಗಿದೆ. ಜೊತೆಗೆ 2070ರ ವೇಳೆಗೆ ಕಾರ್ಬನ್ ಹೊರಸೂಸುವಿಕೆಯನ್ನು ಗಣನೀಯ ಮಟ್ಟದಲ್ಲಿ ಕಡಿಮೆ ಮಾಡುವುದಾಗಿ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಭಾರತ ಹೇಳಿಕೊಂಡಿದೆ. ಏಕ ಬಳಕೆ ಪ್ಲಾಸ್ಟಿಕ್ ನಿಷೇಧವಿದ್ದರೂ ಬಳಕೆಯಲ್ಲಿದ್ದು, ಜನತೆ ಪಾಲನೆ ಮಾಡದಿದ್ದಲ್ಲಿ ಯಾವುದೇ ಪ್ರಯೋಜನವಿಲ್ಲ. ಪಳಯುಳಿಕೆ ಇಂಧನ ಮತ್ತು ಕಾರ್ಬನ್ ಹೊರಸೂಸುವಿಕೆ ಇಳಿಕೆ ವಿಚಾರದಲ್ಲೂ ಜನತೆ ಸಹಭಾಗಿತ್ವ ಮುಖ್ಯ. ಈ ನಿಟ್ಟಿನಲ್ಲಿ ನಾವೆಲ್ಲರೂ ಯೋಜನೆ ಮಾಡಬೇಕು. ಒಬ್ಬರು ಉಸಿರಾಡಲು ಏಳು ಜೀವಂತ ಮರಗಳ ಅಗತ್ಯವಿದೆ. ಬೆಂಗಳೂರಿನಲ್ಲಂತೂ 7 ಜನಕ್ಕೆ ಒಂದು ಮರ ಇರುವಂತಾಗಿದೆ. ಆಕ್ಸಿಜನ್‌ಗೆ ಮರಗಳೇ ಮೂಲ. ಇದಕ್ಕೆ ಬೇರ‍್ಯಾವ ಪರ್ಯಾಯವಿಲ್ಲ. ಅದೇ ರೀತಿಯಲ್ಲಿ ಕಾರ್ಬಲ್ ಹೀರಿಕೊಳ್ಳಲು ಮರಗಳೇ ನೈಸರ್ಗಿಕ ಸಂಪನ್ಮೂಲ ಎಂದರು.

ಮೈಕ್ರೋ ಪ್ಲಾಸ್ಟಿಕ್ ಪೆಡಂಭೂತ: ಮೈಕ್ರೋ ಪ್ಲಾಸ್ಟಿಕ್ ಎಂಬ ಪೆಡಂಭೂತ ಇದೀಗ ಆತಂಕ ಹುಟ್ಟಿಸಿದೆ. ಎಲ್ಲಾ ಬ್ರ್ಯಾಂಡಿನ ಉಪ್ಪಿನಲ್ಲೂ ಮೈಕ್ರೋ ಪ್ಲಾಸ್ಟಿಕ್ ಇದೆಯೆಂದು ಮುಂಬೈನ ಐಐಟಿ ಸಂಶೋಧನೆ ಹೇಳಿದೆ. ಕಳೆದ 20 ವರ್ಷಗಳಿಂದ ಸಮುದ್ರದ ನೀರಿನಲ್ಲಿ ಪ್ಲಾಸ್ಟಿಕ್ ಅಂಶವನ್ನು ಗೊತ್ತಿಲ್ಲದೇ ಸೇರ್ಪಡೆ ಮಾಡಿದ ಪರಿಣಾಮವಿದು. ಸಮಸ್ಯೆಗಳನ್ನು ಮಾಡಿಕೊಂಡು ಪರಿಹರಿಸುವ ಬದಲು, ಸಮಸ್ಯೆ ಉಂಟಾಗದಂತೆ ಎಚ್ಚರ ವಹಿಸುವುದು ಮುಖ್ಯ. ದೊಡ್ಡ ಸಮಸ್ಯೆಗಳಿಗೆ ನಮ್ಮಲ್ಲಿನ ಸಣ್ಣ ಬದಲಾವಣೆಯಿಂದ ಪರಿಹಾರ ಕಂಡುಕೊಳ್ಳಬಹುದು ಎಂದರು. ಬಳಿಕ 'ಆಧುನಿಕ ಜೀವನ ಪ್ರವಾಹ; ಮಹಿಳೆ' ಕುರಿತು ಚಿಂತನ ಗೋಷ್ಠಿ ನಡೆಯಿತು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಗೌರವ ಸಲಹೆಗಾರ ಡಾ.ಗೊ.ರು. ಚನ್ನಬಸಪ್ಪ ಸಮಾವೇಶದ ಸ್ಮರಣಿಕೆ 'ಧಾರಿಣಿ' ಬಿಡುಗಡೆ ಮಾಡಿದರು. ಪರಿಷತ್ತಿನ ಅಧ್ಯಕ್ಷ ಪ್ರೊ.ಮಲೆಯೂರು ಗುರುಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಗದಗದ ಶ್ರೀ ತೋಂಟದಾರ್ಯ ಮಠದ ಡಾ.ಶ್ರೀ ತೋಂಟದ ಸಿದ್ಧರಾಮ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ವೇದಿಕೆಯ ರಾಜ್ಯ ಸಂಚಾಲಕಿ ಸುಶೀಲಾ ಸೋಮಶೇಖರ್, ಜಿಲ್ಲಾಧ್ಯಕ್ಷೆ ಶಾರದಾ ಶಿವಲಿಂಗಸ್ವಾಮಿ, ಪರಿಷತ್ತಿನ ನಗರಾಧ್ಯಕ್ಷ ಮ.ಗು.ಸದಾನಂದಯ್ಯ, ಜಿಲ್ಲಾಧ್ಯಕ್ಷ ಡಾ.ಹೆಳವರಹುಂಡಿ ಸಿದ್ದಪ್ಪ ಮತ್ತಿತರರು ಹಾಜರಿದ್ದರು.

ಆಧ್ಯಾತ್ಮ, ಧರ್ಮದ ಆಚರಣೆಗಳು ಕಾಲಕ್ಕೆ ತಕ್ಕಂತೆ ಪರಿಷ್ಕರಣೆಯಾಗಬೇಕು

ಮೈಸೂರು, ಅ.9(ಎಸ್‌ಪಿಎನ್)–ಆಧ್ಯಾತ್ಮ ಮತ್ತು ಧರ್ಮದ ಕೆಲ ಆಚರಣೆಗಳು ಆಯಾಯ ಕಾಲಘಟ್ಟಕ್ಕೆ ರಚಿತವಾಗಿರುವ ಆಚರಣೆಗಳಾಗಿದ್ದು, ಇದು ಪರಿಷ್ಕರಣೆ ಆಗಬೇಕು ಎಂದು ಹಿರಿಯ ಪತ್ರಕರ್ತ ಅಜಿತ್ ಹನುಮಕ್ಕನವರ್ ಅಭಿಪ್ರಾಯಪಟ್ಟರು.

ಮೈಸೂರು ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜು ನವಜ್ಯೋತಿ ಸಭಾಂಗಣದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮತ್ತು ಕದಳಿ ಮಹಿಳಾ ವೇದಿಕೆ ಸಹಯೋಗದೊಂದಿಗೆ ಆಯೋಜಿಸಿದ್ದ ಮೈಸೂರು ಜಿಲ್ಲಾ ಕದಳಿ ಮಹಿಳಾ ಸಮಾವೇಶ–2022ರ ಮುಕ್ತಾಯ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

12ನೇ ಶತಮಾನದ ವಚನ ಚಳವಳಿ ಆಗಿನ ಕಾಲದ ಬದಲಾವಣೆಗೆ ಹಮ್ಮಿಕೊಂಡಿದ್ದ ಚಳವಳಿ. ಈ ಚಳವಳಿಯಲ್ಲಿ 700 ಮಂದಿ ವಚನಕಾರರು ಭಾಗವಹಿಸಿದ್ದರು. ಇದರಲ್ಲಿ 300 ಮಹಿಳಾ ವಚನಕಾರರು ಎಂಬುದು ವಿಶೇಷ. ಉದಾಹರಣೆಗೆ ಶರಣೆ 'ಆಯ್ದಕ್ಕಿ ಲಕ್ಕಮ್ಮ' ವಚನ ಚಳವಳಿಯಲ್ಲಿ ಬಹುಮುಖ್ಯ ಪಾತ್ರವಹಿಸಿದ್ದಾರೆ. ಒಂದು ದಿನ ತನ್ನ ಪತಿ ಅಗತ್ಯಕ್ಕಿಂತ ಹೆಚ್ಚು ಭತ್ತವನ್ನು ಸಂಗ್ರಹಿಸಿ ಮನೆಗೆ ಬರುತ್ತಾರೆ. ಇದನ್ನು ಕಂಡ ಶರಣೆ ಲಕ್ಕಮ್ಮ ಅಗತ್ಯಕ್ಕಿಂತ ಹೆಚ್ಚು ಸಂಗ್ರಹ ನಮಗೆ ಬೇಕಿಲ್ಲ ಎನ್ನುವ ಪ್ರಸಂಗವನ್ನು ಸಭೆಗೆ ವಿವರಿಸಿದರು.

ಬೆಂಗಳೂರಿಂದ ಮೈಸೂರಿಗೆ ಬರಲು ಹಲವು ಮಾರ್ಗಗಳಿವೆ. ಈಗತಾನೆ ಅಭಿವೃದ್ಧಿ ಪಡಿಸುತ್ತಿರುವ 10 ಪಥದ ರಸ್ತೆ, ಇಲ್ಲವೆ ನೆಲಮಂಗಲ ಮತ್ತೊಂದು ಕನಕಪುರ ಮಾರ್ಗದಲ್ಲಿ ಬರಬಹುದು. ಅದು ಸಾಧ್ಯವಾಗದಿದ್ದರೆ, ವಿಮಾನದಲ್ಲಿ ಬರಬಹುದು. ಎಷ್ಟು ಸಮಯದಲ್ಲಿ ಮೈಸೂರಿಗೆ ಬರುತ್ತೇವೆ ಎಂಬುದು ಆಯಾಯ ಮಾರ್ಗದ ವಾಹನ ಸಂಚಾರದ ಒತ್ತಡದ ಮೇಲೆ ನಿರ್ಧಾರವಾಗುತ್ತದೆ. ಹಾಗೆಯೇ

ಪತ್ರಕರ್ತ ಅಜಿತ್ ಹನುಮಕ್ಕನವರ್ ಅಭಿಮತ



ಹಲವು ಪಂಥದ ಭಕ್ತಿ ಮಾರ್ಗಗಳು ಸತ್ಯವನ್ನು ಹುಡುಕುತ್ತಿರುತ್ತವೆ. ಅದೇ ರೀತಿ 12ನೇ ಶತಮಾನದ ವಚನ ಚಳವಳಿ, ವಚನಕಾರರ ಅನುಭವದ ಮೇಲೆ ನಡೆದಿದೆ ಎಂದರು.

ನಾನು ಮೂಲತಃ ಜೈನ. ನನ್ನ ಹೆಂಡ್ತಿ ಪುರೋಹಿತರ ಮಗಳು. ನಮ್ಮ ಸಂಸಾರದಲ್ಲಿ ಧರ್ಮ ಬೇರೆಬೇರೆ ಆದರೂ ನಮ್ಮದು ಸುಖಿ ಕುಟುಂಬ. ನನ್ನ ಧರ್ಮ ಹೇಳುತ್ತದೆ ದೇವರಿಲ್ಲ ಎಂದು. ನನ್ನ ಹೆಂಡತಿಯ ಧರ್ಮ ಹೇಳುತ್ತದೆ ದೇವರಿದ್ದಾನೆ ಎಂದು. ಅಂತೆಯೇ ಮೊನ್ನೆ ಮೊನ್ನೆ ಕರ್ನಾಟಕದ ಘಟನೆಯೊಂದು ನೆನಪಿಸಿಕೊಂಡಾಗ ದಲಿತ ಯುವಕನೊಬ್ಬ ದೇವರ ಕೋಲು ಮುಟ್ಟಿದ ಕಾರಣಕ್ಕೆ ಆತನ ಕುಟುಂಬಕ್ಕೆ ಈ ಸಮಾಜ ಬಹಿಷ್ಕಾರ ಹಾಕಿತ್ತು. ಆಗ ನನ್ನ ಮನಸ್ಸಿಗೆ ಬಂದಿದ್ದು ಈಗಲೂ ದೇವರಿದ್ದಾನಾ? ಎಂಬ ಪ್ರಶ್ನೆ ಮೂಡಿತು. ಮತ್ತೊಮ್ಮೆ ಬಾಲ್ಕನಿಯಲ್ಲಿ ಕುಳಿತು ಕಾಫಿ ಕುಡಿಯುವಾಗ ಸುಂದರ ಅರಳಿದ ಹೂ ನೋಡಿ, ಈ ಸೃಷ್ಟಿಯ ಹಿಂದೆ ದೇವರಿಲ್ಲದೆ ಇದೆಲ್ಲಾ ಸಾಧ್ಯವಾ ಎಂಬ ಪ್ರಶ್ನೆ ಮನಸ್ಸಿನಲ್ಲಿ ಮೂಡಿತು ಎಂದರು.

ಅದೇ ರೀತಿ ಮೈಸೂರಿನ ಚಾಮುಂಡಿಬೆಟ್ಟವನ್ನು ಎಂಟು ದಿಕ್ಕಿನಲ್ಲಿ ನಿಂತು ನೋಡಿದಾಗ ಒಬ್ಬೊಬ್ಬರಿಗೆ ಒಂದು ರೀತಿ ಕಾಣುತ್ತದೆ. ಆದರೆ, ಎರಡು ದಿಕ್ಕಿನಲ್ಲಿ ನಿಂತು ನಾನು ಚಾಮುಂಡಿಬೆಟ್ಟವನ್ನು ನೋಡಿ, ಇನ್ನುಳಿದ ಆರು ದಿಕ್ಕಿನಲ್ಲೂ ಇದೇ ರೀತಿ ಕಾಣಬೇಕು ಅಂದುಕೊಂಡರೆ ಸಾಧ್ಯವಾ?. ಅದೇ ರೀತಿ ಆಧ್ಯಾತ್ಮ ಮತ್ತು ಧರ್ಮದ ಕೆಲ ಆಚರಣೆಗಳು ಆಯಾಯ ಕಾಲಘಟ್ಟಕ್ಕೆ ರಚಿತವಾಗಿರುವ ಆಚರಣೆಗಳು. ಇದು ಪರಿಷ್ಕರಣೆ ಆಗಬೇಕು ಎಂದು ಪ್ರತಿಪಾದಿಸಿದರು.

ಉದಾಹರಣೆಗೆ 100 ವರ್ಷಗಳ ಹಿಂದೆ ಬ್ರಿಟಿಷರು ಭಾರತದಲ್ಲಿ ಅಳವಡಿಸಿಕೊಂಡ ಶೈಕ್ಷಣಿಕ ಪದ್ಧತಿಯನ್ನು ಇಂದಿಗೂ ಅನುಸರಿಸಿ, ಈಗ ಬದಲಾವಣೆ ಬಯಸಿದ್ದೇವೆ. ಅದೇ ರೀತಿ ವೈದ್ಯಕೀಯ ಮತ್ತು ಇತರೆ ಶೈಕ್ಷಣಿಕ ಕ್ಷೇತ್ರದಲ್ಲೂ ಬದಲಾವಣೆಗೆ ಹೊಂದಿಕೊಳ್ಳುತ್ತಿದ್ದೇವೆ. ಅದೇ ರೀತಿ ಆಧ್ಯಾತ್ಮ ಮತ್ತು ಧರ್ಮದಲ್ಲೂ ಕೆಲ ಪದ್ಧತಿಗಳ ಬಗ್ಗೆ ಚಿಂತನ–ಮಂಥನ ನಡೆಸಿ, ಎಲ್ಲಾ ಪಂಥದ ಧರ್ಮದ ಆಚರಣೆಗಳನ್ನು ಬದಲಾವಣೆ ಮಾಡಿ ಮೇಲ್ದರ್ಜೆಗೇರಿಸಲು ಸಮಾಜ ಮುಂದಾಗಬೇಕು ಎಂಬುದು ನನ್ನ ಅನಿಸಿಕೆ ಎಂದರು.

ಪದ್ಮಶ್ರೀ ಪುರಸ್ಕೃತೆ ಸಾಲುಮರದ ತಿಮ್ಮಕ್ಕನವರಿಗೆ ಮೊದಲ ಬಾರಿಗೆ ರಾಜ್ಯೋತ್ಸವ ಪ್ರಶಸ್ತಿ ಬಂದಾಗ ಅವರಿಗೆ ಬಡತನವಿದ್ದರೂ ನಮ್ಮೂರಿಗೆ ಆಸ್ಪತ್ರೆ, ಶಿಕ್ಷಣ, ನೀರು ಕೊಡಿ ಎಂದು ಸರ್ಕಾರದ ಮುಖ್ಯಸ್ಥರ ಬಳಿ ಕೇಳಿದ್ದರು. ಈ ಘಟನೆಯನ್ನು ನೋಡಿದರೆ ಅವರು ಯಾವ ದಾರ್ಶನಿಕರಿಗೆ ಕಡಿಮೆ. ಅವರಿಗೆ ವಿದ್ಯೆ ಇಲ್ಲದಿರಬಹುದು. ಲೌಕಿಕ ಬದುಕಿನ ಒಡನಾಟ ಬಿಟ್ಟು, ಅಲೌಕಿಕ ಬದುಕಿನ ಒಡನಾಟ ಅವರಲ್ಲಿ ಯಾರಿಗಿಂತ ಕಡಿಮೆ ಇದೆ ಎಂದು ನೀವೇ ಊಹಿಸಿಕೊಳ್ಳಿ ಎಂದು ಸಭಿಕರ ಆಯ್ಕೆಗೆ ಬಿಟ್ಟರು. ಈ ವೇಳೆ ಕೃಷಿ ಜಂಕ್ಷನ್ ಸಂಸ್ಥಾಪಕಿ ಡಾ.ಚೈತ್ರ ಭರತ್ ಅವರನ್ನು ಗೌರವಿಸಲಾಯಿತು. ವೇದಿಕೆಯಲ್ಲಿ ಬೆಂಗಳೂರು ಬೇಲಿಮಠದ ಶ್ರೀ ಶಿವರುದ್ರ ಸ್ವಾಮೀಜಿ, ಪರಿಸರ ರಾಯಭಾರಿ ಸಾಲಮರದ ತಿಮ್ಮಕ್ಕ, ಮಾಜಿ ಸಚಿವೆ ಡಾ.ಗೀತಾ ಮಹಾದೇವಪ್ರಸಾದ್, ಸಮಾವೇಶ ಸಮಿತಿಯ ಶಾರದಾ ಶಿವಲಿಂಗಸ್ವಾಮಿ, ಸ್ವಾಗತ ಸಮಿತಿಯ ಮಂಗಳ ಮುದ್ದುಮಾದಪ್ಪ, ಪ್ರಸಾದ ಸಮಿತಿಯ ನೀಲಾಂಬಿಕಾ, ಕಾರ್ಯಕ್ರಮ ಸಮಿತಿಯ ಸುಧಾ ಮೃತ್ಯುಂಜಯಪ್ಪ, ನೋಂದಣಿ ಸಮಿತಿಯ ಜಯಾಗೌಡ, ಸವಿ ಸಂಚಿಕೆ ಸಮಿತಿಯ ವಾಗ್ದೇವಿ, ಹಣಕಾಸು ಸಮಿತಿಯ ಎಂ.ಪಿ.ನೀಲಾಂಬಿಕಾ ನಾಗರಾಜ್, ವೇದಿಕೆ ಸಮಿತಿಯ ವಿಮಲಾಮೂರ್ತಿ, ಸಾಂಸ್ಕೃತಿಕ ಸಮಿತಿ ಉಮಾ ಮಹದೇವಸ್ವಾಮಿ ಉಪಸ್ಥಿತರಿದ್ದರು.

ಡಿಎಂಕೆ ಅಧ್ಯಕ್ಷರಾಗಿ 2ನೇ ಬಾರಿಗೆ ಸ್ಟಾಲಿನ್ ಆಯ್ಕೆ


ಚೆನ್ನೈ, ಅ.9–ಭಾನುವಾರ ಇಲ್ಲಿ ನಡೆದ ಪಕ್ಷದ ಸಾಮಾನ್ಯ ಕೌನ್ಸಿಲ್ ಸಭೆಯಲ್ಲಿ ಡಿಎಂಕೆ ಮುಖಂಡ ಎಂ.ಕೆ.ಸ್ಟಾಲಿನ್ ಅವರನ್ನು ಪಕ್ಷದ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ.



ಹೊಸದಾಗಿ ರಚನೆಯಾದ ಜನರಲ್ ಕೌನ್ಸಿಲ್ ಸಭೆಯಲ್ಲಿ ಅವರನ್ನು ಪಕ್ಷದ ಉನ್ನತ ಹುದ್ದೆಗೆ ಎರಡನೇ ಬಾರಿಗೆ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಪಕ್ಷ ಘೋಷಿಸಿತು. ನಾಮಪತ್ರ ಸಲ್ಲಿಸುವ ಮುನ್ನ ಸ್ಟಾಲಿನ್ ಅವರು ತಮ್ಮ ತಂದೆ ಹಾಗೂ ಡಿಎಂಕೆ ಮಾಜಿ ಅಧ್ಯಕ್ಷ ಎಂ. ಕರುಣಾನಿಧಿ ಅವರ ಗೋಪಾಲಪುರಂ ನಿವಾಸಕ್ಕೆ ಭೇಟಿ ನೀಡಿ ಅವರ ಭಾವಚಿತ್ರಕ್ಕೆ ನಮನ ಸಲ್ಲಿಸಿದರು.

ಮರೀನಾದಲ್ಲಿರುವ ಕರುಣಾನಿಧಿ ಮತ್ತು ಮಾಜಿ ಮುಖ್ಯಮಂತ್ರಿ ಅರಿಗ್ನಾರ್ ಅಣ್ಣಾ ಅವರ ಸ್ಮಾರಕಗಳಿಗೆ ಭೇಟಿ ನೀಡಿ ಪುಷ್ಪ ನಮನ ಸಲ್ಲಿಸಿದರು. ಕರುಣಾನಿಧಿ ಅವರ ನಿಧನದ ನಂತರ 2018ರ ಆಗಸ್ಟ್ 28ರುದು ಸ್ಟಾಲಿನ್ ಡಿಎಂಕೆ ಅಧ್ಯಕ್ಷರಾದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

10.10.2022 ಸೋಮವಾರ, ಮಳೆ ನಕ್ಷತ್ರ: ಹಸ್ತ 27.09.2022 ರಿಂದ 10.10.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಆಶ್ವಯುಜ ಮಾಸ, ಶುಕ್ಲ ಪಕ್ಷ,
ತಿಥಿ: ಪೂರ್ಣಿಮಾ, ನಕ್ಷತ್ರ : ಉಭಾ, ರಾಹುಕಾಲ: ಬೆಳಗ್ಗೆ 7.30 ರಿಂದ 9ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ: ನಾರಾಯಣ ಜಿ, 6.20 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: ಶತಮಾನದ ಸ್ಮರಣೆಗಳು: ಮಂಡ್ಯ ಜಿಲ್ಲೆಯ ಶತಮಾನದ ನೆನಪುಗಳು: ಲೇಖನ ಪ್ರಸ್ತುತಿ–ಡಿ.ಎನ್. ಶ್ರೀಪಾದ್, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ಸಿ.ವಿಶ್ವನಾಥ್, ವ್ಯಾಖ್ಯಾನ–ಡಾ.ಪ್ರದೀಪ್‌ಕುಮಾರ್ ಹೆಬ್ರಿ, 10.00 ಲಯ ಸಂಭ್ರಮ, ಪರಿಕಲ್ಪನೆ ಮತ್ತು ಪ್ರಸ್ತುತಿ–ಎಚ್.ಎಲ್.ಶಿವಶಂಕರಸ್ವಾಮಿ, ನಿರ್ಮಾಣ– ಎಸ್. ಸುಬ್ರಹ್ಮಣ್ಯ. **ಮಧ್ಯಾಹ್ನ:** 12.30 ದೇವರನಾಮ: ಚಂದ್ರಿಕಾ ಆರ್., ಡಾ.ಆರ್.ಎನ್. ಶ್ರೀಲತಾ, 12.45 ನಮ್ಮ ಆರೋಗ್ಯ ಕಾರ್ಯಕ್ರಮ: ವಿಶ್ವ ಮಾನಸಿಕ ಆರೋಗ್ಯ ದಿನದ ಸಂದರ್ಭದಲ್ಲಿ ಎಲ್ಲರಿಗೂ ಮಾನಸಿಕ ಆರೋಗ್ಯ ಕುರಿತು ಡಾ. ಮಂಜುಪ್ರಸಾದ್ ಎಂ.ಎಸ್. ಮತ್ತು ಡಾ. ಸುಧಾರಣಿ ಅವರೊಂದಿಗೆ ಮಾತುಕತೆ, 1.20 ಭಾವಗೀತೆ: ರೇಣುಕಾ ನಾಕೋಡ್, ಎನ್.ಆರ್. ವಿನಯ ಕುಮಾರ್, 3.00 ಹರಿಯನ್ನರಸಿದ ವನಿತೆಯರು: ಮಹಿಳಾ ಹರಿದಾಸರನ್ನು ಕುರಿತ ಕಾರ್ಯಕ್ರಮ, ರಚನೆ ಮತ್ತು ಪ್ರಸ್ತುತಿ– ಡಾ. ಸುಕನ್ಯಾ ಪ್ರಭಾಕರ್. **ಸಂಜೆ:** 4.00 ಮಹಿಳಾರಂಗ: ಡಾಕ್ಟರ್ ಸಮಯ. ಭಾಗವಹಿಸುವ ವೈದ್ಯರು– ಡಾ. ಸುನಿತಾ ಸಿದ್ದೇಶ್, ವಿಷಯ– ಸುಖ ಪ್ರಸವಕ್ಕೆ ಆಯುರ್ವೇದ ಸೂತ್ರಗಳು. 4.30 ಝೇಂಕಾರ: ಮಕ್ಕಳ ಗೀತ ಗಾಯನ ಕಲಿಕಾ ಕಾರ್ಯಕ್ರಮ, 6.50 ಕೃಷಿರಂಗ: ತೋಟಗಾರಿಕೆ ಬೆಳೆಗಳ ಕೃಷಿಯಲ್ಲಿನ ಅನುಭವ ಕುರಿತು ಎಂ.ಎಸ್.ಕುಮಾರಸ್ವಾಮಿ ಅವರೊಡನೆ ಸಂದರ್ಶನ.

ರಾತ್ರಿ: 9.30 ಕೆ.ಪಿ. ಉಪಾಧ್ಯಾಯ– ವೇಣುವಾದನ, 10.00 ನಾಟಕ, 10.30 ಸವಿನೆನಪು.

■ **ಸುಯೋಗ್ ಆಸ್ಪತ್ರೆ :** ತಲೆನೋವಿಗೆ ಉಚಿತ ತಪಾಸಣಾ ಶಿಬಿರ, ನುರಿತ ನರ ಚಿಕಿತ್ಸಾ ತಜ್ಞರ ನೇತೃತ್ವದಲ್ಲಿ ತಪಾಸಣೆ, ಸ್ಥಳ: ಆಸ್ಪತ್ರೆ ಆವರಣ, ರಾಮಕೃಷ್ಣನಗರ, ಬೆಳಗ್ಗೆಯಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** 'ಮಧುಮೇಹ ತೊಂದರೆ' ಇರುವ ರೋಗಿಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಆಲನಹಳ್ಳಿ, ಬೆಳಗ್ಗೆಯಿಂದ.

■ **ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್, ಮೈಸೂರು ಅಖಿಲ ಕರ್ನಾಟಕ ಜಿಲ್ಲಾ ಜನಜಾಗೃತಿ ವೇದಿಕೆ :** ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಮತ್ತು ಮಾತೃಶ್ರೀ ಡಾ. ಹೇಮಾವತಿ ವಿ. ಹೆಗ್ಗಡೆಯವರ ಆಶೀರ್ವಾದದೊಂದಿಗೆ ಗಾಂಧಿ ಜಯಂತಿ ಪ್ರಯುಕ್ತ ಪಾನಮುಕ್ತ ಸಮಾವೇಶ, ನವಜೀವನ ಸಮಿತಿ ಸದಸ್ಯರಿಗೆ ಅಭಿನಂದನಾ ಕಾರ್ಯಕ್ರಮ, ಉದ್ಘಾಟನೆ: ಶಾಸಕ ಎಲ್. ನಾಗೇಂದ್ರ, ಅತಿಥಿಗಳು: ಶಾಸಕರುಗಳಾದ ಡಾ. ಯತೀಂದ್ರ ಸಿದ್ದರಾಮಯ್ಯ, ಎಚ್.ಪಿ. ಮಂಜುನಾಥ್, ತನ್ವೀರ್ ಸೇಠ್, ಅಧ್ಯಕ್ಷತೆ: ಜಿಲ್ಲಾ ಜನ ಜಾಗೃತಿ ವೇದಿಕೆ ಅಧ್ಯಕ್ಷ ಹಂದನಹಳ್ಳಿ ಸೋಮಶೇಖರ್, ಸ್ಥಳ: ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್, ಸಂಕಲ್ಪ ಸೌಧ, ಕಳಸ್ತವಾಡಿ, ಬೆಳಗ್ಗೆ 10 ಗಂಟೆಗೆ.

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ಗೊಂಬೆಗಳ ಪ್ರದರ್ಶನ :** ರಾಘವೇಂದ್ರ ಕೆ.ಎಸ್. ಅವರು ಕೈಯಿಂದ ಮಾಡಿರುವ 170 ಬೊಂಬೆಗಳ ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ವಿಜಯನಗರ, ಬೆಳಗ್ಗೆ 10 ಗಂಟೆಯಿಂದ.

■ **ಮೈಸೂರು ಬ್ಯೂಟಿಷಿಯನ್ಸ್ ವೆಲ್‌ಫೇರ್ ಅಸೋಸಿಯೇಷನ್ :** ಅಂತರರಾಷ್ಟ್ರೀಯ ಮೇಕಪ್ ಮತ್ತು ಹೇರ್ ಆರ್ಟಿಸ್ಟ್ ರಾಜು ಓರ್ಪೆ, ಮೇಕಪ್ ಮಾಸ್ಟರ್ ಆಲ್ಫಾ ರಾಜ್‌ಗೊರ್ ಅವರಿಂದ ಮಾಸ್ಟರ್ ಕ್ಲಾಸ್, ಸ್ಥಳ: ಹೋಟೆಲ್ ಪ್ರೆಸಿಡೆಂಟ್, ಬಿ.ಎನ್.ರಸ್ತೆ, ಬೆಳಗ್ಗೆ 10 ಗಂಟೆಯಿಂದ.

■ **ಚಿತ್ಕಲಾ ಫೌಂಡೇಷನ್, ಹಾಸನ, ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ :** ಬಿ.ಎನ್. ದೇಸಾಯಿ ಅವರಿಂದ ಪಕ್ಷಿ–ಕೀಟಗಳ ನವರಾತ್ರಿ ಕಲೋತ್ಸವ, ಏಕವ್ಯಕ್ತಿ ಛಾಯಾಚಿತ್ರ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ, ಎರಡನೇ ಹಂತ, ಬೆಳಗ್ಗೆ 10 ಗಂಟೆಯಿಂದ.

■ **ಕರ್ನಾಟಕ ಶಿಲ್ಪಕಲಾ ಅಕಾಡೆಮಿ (ಬೆಂಗಳೂರು) :** ರಜತ ಮಹೋತ್ಸವದ ಸಮಾರಂಭ, 2022ನೇ ಸಾಲಿನ ಶಿಲ್ಪಶ್ರೀ ಪ್ರಶಸ್ತಿ ಪ್ರದಾನ ಹಾಗೂ ಜನ್ಮ ಶತಮಾನೋತ್ಸವ ಸಮಾರಂಭ, ಉದ್ಘಾಟನೆ: ವಿಜಯನಗರ ಸಾಮ್ರಾಜ್ಯದ ರಾಜ ಶ್ರೀ ಕೃಷ್ಣದೇವರಾಜಯನ 19ನೇ ವಂಶದವರು, ಆನೆಗುಂದಿಯ ಇಂದಿನ ರಾಜಮನೆತನದ ಕುಡಿ ಶ್ರೀ ಶ್ರೀಕೃಷ್ಣದೇವರಾಜ, ಮುಖ್ಯ ಅತಿಥಿಗಳು: ಅಂತರರಾಷ್ಟ್ರೀಯ ವಯೋಲಿನ್ ವಿದ್ವಾಂಸರಾದ ವಿದ್ವಾನ್ ಮೈಸೂರು ಎಂ. ಮಂಜುನಾಥ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನ, ಅಧ್ಯಕ್ಷತೆ: ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಅಧ್ಯಕ್ಷರಾದ ವೀರಣ್ಣಾ ಮಾ. ಅರ್ಕ ಸಾಲಿ, ಸ್ಥಳ: ವಿಜ್ಞಾನ ಭವನ, ಮಾನಸ ಗಂಗೋತ್ರಿ, ಮೈಸೂರು ವಿವಿ, ಬೆಳಗ್ಗೆ 10.30 ಗಂಟೆಗೆ.

■ **ಸುಯೋಗ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ :** ಸ್ವಾಗತ ಕಾರ್ಯಕ್ರಮ, ಪ್ರಮಾಣವಚನ ಸ್ವೀಕಾರ ಸಮಾರಂಭ, ಸ್ಥಳ: ಆಸ್ಪತ್ರೆ ಆವರಣ, ರಾಮಕೃಷ್ಣನಗರ, ಬೆಳಗ್ಗೆ 10.30 ಗಂಟೆಗೆ.

■ **ಕೆ.ಎಂ. ಪ್ರವೀಣ್‌ಕುಮಾರ್ ಚಾರಿಟಬಲ್ ಟ್ರಸ್ಟ್ :** ಮನೆ–ಮನೆ ಗೊಂಬೆ ಕೂರಿಸುವ ಸ್ಪರ್ಧೆಯ ವಿಜೇತರಿಗೆ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪಾರಿತೋಷಕ ಪ್ರಶಸ್ತಿ ಪ್ರದಾನ ಹಾಗೂ ಎಲ್ಲಾ ಸ್ಪರ್ಧಾಳುಗಳಿಗೆ ನೆನಪಿನ ಕಾಣಿಕೆ ಹಾಗೂ ಪ್ರಮಾಣಪತ್ರ ವಿತರಣಾ ಕಾರ್ಯಕ್ರಮ, ಸ್ಥಳ: ಮಹರ್ಷಿ ವಿದ್ಯಾಸಂಸ್ಥೆ ಆವರಣ, ವಿಶ್ವೇಶ್ವರನಗರ, ಸಂಜೆ 5.30ಕ್ಕೆ.

ದಸರಾ: ಮೈಸೂರು ಮೃಗಾಲಯಕ್ಕೆ 2,46,485 ಮಂದಿ ಭೇಟಿ

● 1 ಲಕ್ಷ ಮಂದಿಯಿಂದ ಕಾರಂಜಿ ಕೆರೆ ವೀಕ್ಷಣೆ ● 2.60 ಕೋಟಿ ಆದಾಯ ಗಳಿಕೆ ; ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್ ಮಾಹಿತಿ

ಮೈಸೂರು, ಅ.9(ಪಿಎಂ)– ಈ ಬಾರಿಯ ದಸರಾ ಯಶಸ್ವಿಯಾಗಿ ಇತಿಹಾಸ ಸೃಷ್ಟಿಸಿದ್ದು, ವಿಜೃಂಭಣೆಯ ದಸರಾ ಹಿನ್ನೆಲೆಯಲ್ಲಿ ಮೈಸೂರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸಿದ್ದಾರೆ. ಮೈಸೂರು ಮೃಗಾಲಯಕ್ಕೆ ಸೆ.26ರಿಂದ ಅ.8ರವರೆಗೆ 2,46,485 ಮಂದಿ ಭೇಟಿ ನೀಡಿದ್ದರೆ, ಇದೇ ಅವಧಿಯಲ್ಲಿ ಕಾರಂಜಿ ಕೆರೆಗೆ 1 ಲಕ್ಷ ಮಂದಿ ಭೇಟಿ ನೀಡಿದ್ದಾರೆ ಎಂದು ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್ ತಿಳಿಸಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೃಗಾಲಯ ಮತ್ತು ಕಾರಂಜಿ ಕೆರೆಗೆ ಇಷ್ಟು ದೊಡ್ಡ ಸಂಖ್ಯೆಯಲ್ಲಿ ವೀಕ್ಷಕರು



ಭೇಟಿ ನೀಡಿರುವುದು ನಿಜಕ್ಕೂ ದಾಖಲೆಯಾಗಿದೆ ಇಡೀ ಮೈಸೂರಿನಲ್ಲಿ ಈಗ ಪ್ರವಾಸಿಗರ ಸಂಖ್ಯೆ ತುಂಬಿ ತುಳುಕುತ್ತಿದ್ದು, ಇದಕ್ಕೆಲ್ಲಾ ಕಾರಣ ಈ ಬಾರಿಯ ವಿಜೃಂಭಣೆಯ ದಸರಾ ಆಚರಣೆಯಾಗಿದೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅವರು ಮೈಸೂರಿನ ಎಲ್ಲಾ ಶಾಸಕರ ಸಹಕಾರದಿಂದ ಈ ಬಾರಿ ವಿಜೃಂಭಣೆಯ ದಸರಾ ನಡೆದು, ಇತಿಹಾಸ ಸೃಷ್ಟಿಸಿದೆ ಎಂದರೆ ಅತಿಶೋಯುಕ್ತಿಯಲ್ಲ. ಜಂಬೂ ಸವಾರಿ ಮೆರವಣಿಗೆಯನ್ನು 15 ಲಕ್ಷಕ್ಕೂ ಹೆಚ್ಚು ಮಂದಿ ವೀಕ್ಷಣೆ ಮಾಡಿದ್ದಾರೆ. ನಗರದ ಹೋಟೆಲ್ ಉದ್ಯಮ ದಸರಾ ಹಿನ್ನೆಲೆಯಲ್ಲಿ 200 ಕೋಟಿ ವಹಿವಾಟು ನಡೆಸಿದೆ. ಮಾತ್ರವಲ್ಲದೆ, ಇತರೆ ವಹಿವಾಟು ಕನಿಷ್ಠ 700ರಿಂದ 800 ಕೋಟಿ ರೂ.ವರೆಗೆ ನಡೆದಿದೆ ಎಂದು ತಿಳಿಸಿದರು.

ವಸ್ತು ಪ್ರದರ್ಶನದಲ್ಲಿ ಮೂಲಸೌಲಭ್ಯದ ಕೊರತೆ ಎದುರಾಗಿದೆ ಎಂಬುದರ ಬಗ್ಗೆ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ ಪ್ರತಿಕ್ರಿಯಿಸಿ, ಲಕ್ಷಾಂತರ ಮಂದಿ ಭೇಟಿ ನೀಡಿದಾಗ ಸಣ್ಣಪುಟ್ಟ ಸಮಸ್ಯೆಗಳು ಸಾಮಾನ್ಯ. ನಿನ್ನೆಯೇ ಸಣ್ಣಪುಟ್ಟ ಸಮಸ್ಯೆಗಳನ್ನು ಸರಿಪಡಿಸಲಾಗಿದೆ. ಶೌಚಾಲಯಗಳನ್ನು ಹೆಚ್ಚಳ ಮಾಡಲಾಗಿದೆ. ಕುಡಿಯುವ ನೀರಿನ ವ್ಯವಸ್ಥೆಯೂ ಸಮರ್ಪಕವಾಗಿದೆ. ಪ್ರತಿನಿತ್ಯ 40ರಿಂದ 50 ಸಾವಿರ ಮಂದಿ ವಸ್ತು ಪ್ರದರ್ಶನಕ್ಕೆ ಭೇಟಿ ನೀಡುತ್ತಿದ್ದಾರೆ ಎಂದು ತಿಳಿಸಿದರು. ಬಿಜೆಪಿ ಮುಖಂಡರಾದ ಮಹೇಶ್ ರಾಜ್‌ಅರಸ್, ಕೇಬಲ್ ಮಹೇಶ್ ಗೋಷ್ಠಿಯಲ್ಲಿದ್ದರು.

ದಸರಾ ಬಳಿಕ ಮಾತನಾಡಿದರೆ ಪ್ರಯೋಜನವಿಲ್ಲ

ಎಂಎಲ್‌ಸಿ ವಿಶ್ವನಾಥ್ ಆಕ್ಷೇಪಕ್ಕೆ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷರ ಪ್ರತಿಕ್ರಿಯೆ

ಮೈಸೂರು, ಅ.9(ಪಿಎಂ)– ನಿಮ್ಮದೇ ಪಕ್ಷದ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ದಸರಾ ಆಚರಣೆಗೆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎಂಬ ಬಗ್ಗೆ ಪ್ರತಿಕ್ರಿಯಿಸಿದ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ಅವರು ದಸರಾ ಮುನ್ನವೇ ತಾವು ಕಂಡ ಸಮಸ್ಯೆಗಳನ್ನು ಗಮನಕ್ಕೆ ತರಬಹುದಿತ್ತು. ದಸರಾ ಕಳೆದ ಮೇಲೆ ಮಾತನಾಡಿದರೆ ಪ್ರಯೋಜನವಿಲ್ಲ ಎಂದು ತಿಳಿಸಿದರು.

ವಿಶ್ವನಾಥ್ ಅವರು ಹಿರಿಯರು. ಅನೇಕ ಬಾರಿ ಸಚಿವರಾಗಿ ಕೆಲಸ ಮಾಡಿದವರು. ಅವರ ಬಗ್ಗೆ ಮಾತನಾಡುವಷ್ಟು ದೊಡ್ಡವನಲ್ಲ. ಆದರೆ ನಾನು ಕಂಡ ಸತ್ಯಸಂಗತಿ ಎಂದರೆ ಪ್ರತಿಯೊಬ್ಬ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪ್ರತಿ ಸಭೆಗೂ ಆಹ್ವಾನಿಸಲಾಗಿದೆ. ಏಕಪಕ್ಷೀಯವಾಗಿ ದಸರಾ ಆಚರಣೆ ಮಾಡಿಲ್ಲ. ವಿಶ್ವನಾಥ್ ಅವರ ಹೇಳಿಕೆಗಳು ಅವರ ವೈಯಕ್ತಿಕ ಎಂದರು.

ಅವರು ಜವಾಬ್ದಾರಿ ಹೊತ್ತ ನಮ್ಮ ಪಕ್ಷದ ಶಾಸಕರು. ಅವರು ದಸರಾ ಮುಗಿದ ಬಳಿಕ ಹೇಳುವ ಬದಲು ಆರಂಭದಲ್ಲೇ ಹೇಳಿ ತಾವು ಕಂಡ ನ್ಯೂನತೆ ಸರಿಪಡಿಸಲು ಅವಕಾಶವಿತ್ತು. ವಿದ್ಯುತ್ ದೀಪಾಲಂಕಾರ ಸಂಬಂಧ ಶಾಸಕ ಎಲ್.ನಾಗೇಂದ್ರ ಅವರು ಕೆಲವೆಡೆ ಸರಿಯಿಲ್ಲ ಎಂದು ಗುರುತಿಸಿದಾಗ 24 ಗಂಟೆಯೊಳಗೆ ಬದಲಾವಣೆ ಮಾಡಲಾಯಿತು ಎಂದು ಹೇಳಿದರು.

ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ ಮಾತನಾಡಿ, ಈವರೆಗೆ ಯಾವುದೇ ಜನತೆ ದಸರಾ ಆಚರಣೆ ಬಗ್ಗೆ ಕೊಂಕು ನುಡಿದಿಲ್ಲ. ಸಣ್ಣಪುಟ್ಟ ಲೋಪದೋಷ ದೊಡ್ಡ ಕಾರ್ಯಕ್ರಮದಲ್ಲಿ ಸಾಮಾನ್ಯ. ಮೊಸರಲ್ಲಿ ಕಲ್ಲು ಹುಡುಕುವ ಪ್ರಯತ್ನ ಯಾರೂ ಮಾಡಬಾರದು. ದಸರಾ ಯಶಸ್ಸು ಇಡೀ ಜಿಲ್ಲೆಯ ಎಲ್ಲಾ ಶಾಸಕರು, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜಿಲ್ಲಾಡಳಿತಕ್ಕೆ ಸಲ್ಲಬೇಕು ಎಂದು ತಿಳಿಸಿದರು.

ಉತ್ತರಕಾಶಿ ಹಿಮಪಾತ ದುರಂತ: ಸಾವಿನ ಸಂಖ್ಯೆಕ್ಕೆ 27ಕ್ಕೇರಿಕೆ

ಮೃತರಲ್ಲಿ ಕರ್ನಾಟಕದ ಇಬ್ಬರ ಗುರುತು ಪತ್ತೆ

ಉತ್ತರಕಾಶಿ (ಉತ್ತರಾಖಂಡ), ಅ.9– ಉತ್ತರಾಖಂಡದ ಗಡಿ ಜಿಲ್ಲೆ ಉತ್ತರಕಾಶಿಯಲ್ಲಿ ನಡೆದ ಹಿಮಪಾತ ದುರಂತದಲ್ಲಿ ಮೃತಪಟ್ಟವರ ಪೈಕಿ ಇಬ್ಬರು ಕರ್ನಾಟಕದವರೂ ಸೇರಿದ್ದಾರೆ. ಬೆಂಗಳೂರಿನ ರಕ್ಷಿತ್ ಹಾಗೂ ವಿಕ್ರಮ್ ಎಂಬುವವರೇ ಮೃತರು ಎಂದು ಗುರುತಿಸಲಾಗಿದೆ.

ಅಕ್ಟೋಬರ್ 4ರಂದು ಉತ್ತರಕಾಶಿ ಜಿಲ್ಲೆಯ ದ್ರೌಪದಿಯ ದಂಡ–2 ಪ್ರದೇಶದಲ್ಲಿ ನೆಹರೂ ಪರ್ವತಾರೋಹಣ ಸಂಸ್ಥೆ (ಎನ್‌ಐಎಂ)ಯ 27 ಪ್ರಶಿಕ್ಷಣಾರ್ಥಿಗಳು ಮತ್ತು ಇಬ್ಬರು ಬೋಧಕರು ಸೇರಿದಂತೆ 29 ಪರ್ವತಾರೋಹಿಗಳು ಹಿಮ ಕುಸಿತದಲ್ಲಿ ಸಿಲುಕಿ ಮೃತಪಟ್ಟಿದ್ದಾರೆ. ಭಾನುವಾರ ಸತತ ಆರನೇ ದಿನವೂ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆ ಮುಂದುವರೆದಿದೆ. ಇಂದು 10 ಜನ ಪ್ರಶಿಕ್ಷಣಾರ್ಥಿಗಳ ಹತ್ತು ಶವಗಳನ್ನು ಉತ್ತರಕಾಶಿಗೆ ತರಲಾಗಿದೆ. ಇದರಲ್ಲಿ ಬೆಂಗಳೂರಿನ ಮುನೇಶ್ವರ ಬ್ಲಾಕ್‌ನ ರಕ್ಷಿತ್ ಹಾಗೂ ಕಾಡುಗೋಡಿಯ ವಿಕ್ರಮ್ ಕೂಡ ಸೇರಿದ್ದಾರೆ.

ಇಲ್ಲಿಯವರೆಗೆ ಒಟ್ಟು 27 ಮೃತದೇಹಗಳನ್ನು ಹೊರತೆಗೆಯಲಾಗಿದೆ. ಈ ಪೈಕಿ 21 ಮೃತದೇಹಗಳನ್ನು ಉತ್ತರಕಾಶಿಗೆ ಅವರ ಕುಟುಂಬಗಳಿಗೆ ಹಸ್ತಾಂತರಿಸಲು ತರಲಾಗಿದೆ ಎಂದು ಎನ್‌ಐಎಂ ಸಂಸ್ಥೆ ತಿಳಿಸಿದೆ ಶುಕ್ರವಾರ ನಾಲ್ಕು, ಶನಿವಾರ ಏಳು ಮತ್ತು ರವಿವಾರ 10 ಮೃತದೇಹಗಳನ್ನು ಉತ್ತರಕಾಶಿಯ ಮಟ್ಲಿ ಹೆಲಿಪ್ಯಾಡ್‌ಗೆ ತರಲಾಗಿದೆ. ಉತ್ತರಕಾಶಿಗೆ ತರಲಾದ ಎಲ್ಲ 21 ಮೃತದೇಹಗಳನ್ನು ಗುರುತಿಸಲಾಗಿದ್ದು, ಇಬ್ಬರು ಪರ್ವತಾರೋಹಿಗಳು ಇನ್ನೂ ನಾಪತ್ತೆಯಾಗಿದ್ದಾರೆ

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿ ನಡ್ಡಾ ಮುಂದುವರಿಕೆ ಸಾಧ್ಯತೆ

ನವದೆಹಲಿ, ಅ.9– ಜೆ.ಪಿ.ನಡ್ಡಾ



ಅವರನ್ನು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರನ್ನಾಗಿ 2024ರ ಲೋಕಸಭಾ ಚುನಾವಣೆವರೆಗೂ ಮುಂದುವರಿಸುವ ಸಾಧ್ಯತೆ ಇದೆ. ನಡ್ಡಾ ಅವರ ಮೂರು ವರ್ಷಗಳ ಅಧಿಕಾರಾವಧಿಯು ಮುಂದಿನ ವರ್ಷದ ಜನವರಿಯಲ್ಲಿ ಕೊನೆಗೊಳ್ಳಲಿದೆ. ಅದಕ್ಕೂ ಮುನ್ನವೇ ಬಿಜೆಪಿ ಸಂಸದೀಯ ಮಂಡಳಿಯು ನಡ್ಡಾ ಅವರನ್ನು ಈ ಹುದ್ದೆಯಲ್ಲಿ ಮುಂದುವರಿಸುವ ಕುರಿತ ನಿರ್ಧಾರ ಪ್ರಕಟಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.


ರಾಷ್ಟ್ರೀಯ ಅಧ್ಯಕ್ಷ ಸ್ಥಾನದ ಚುನಾವಣೆಗೂ ಮುನ್ನ ಕನಿಷ್ಠ ಅರ್ಧದಷ್ಟು ರಾಜ್ಯ ಘಟಕಗಳ ಚುನಾವಣೆ ಮುಕ್ತಾಯಗೊಳ್ಳಬೇಕು ಎಂಬ ನಿಯಮವಿದೆ. ಆದರೆ ರಾಜ್ಯ ಘಟಕಗಳ ಚುನಾವಣಾ ಪ್ರಕ್ರಿಯೆ ಇನ್ನೂ ಶುರುವಾಗಿಲ್ಲ. ಹೀಗಾಗಿ ನಡ್ಡಾ ಅವರ ಮುಂದುವರಿಕೆ ಹಾದಿ ಸುಗಮವಾಗಿದೆ ಎಂದು ಹೇಳಿವೆ. 2019ರ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಈ ಹಿಂದೆ ಪಕ್ಷದ ಅಧ್ಯಕ್ಷರಾಗಿದ್ದ ಅಮಿತ್ ಶಾ ಅವರನ್ನೂ ಈ ಹುದ್ದೆಯಲ್ಲಿ ಮುಂದುವರಿಸಲಾಗಿತ್ತು.

ಉತ್ತರಪ್ರದೇಶದಲ್ಲಿ ಚಲಿಸುತ್ತಿದ್ದ ಕಾರಿನಲ್ಲೇ ಇಂಜಿನಿಯರಿಂಗ್ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ

ಸುಲ್ತಾನ್‌ಪುರ, ಅ.9– ಚಲಿಸುತ್ತಿದ್ದ ಕಾರಿನಲ್ಲೇ ಇಂಜಿನಿಯರಿಂಗ್ ವಿದ್ಯಾರ್ಥಿನಿಯೊಬ್ಬಳ ಮೇಲೆ ಅತ್ಯಾಚಾರ ಎಸಗಿ ಬಳಿಕ ಇಲ್ಲಿನ ಜೈಸಿಂಗ್‌ಪುರ ಪ್ರದೇಶದಲ್ಲಿ ಕಾಲುವೆಯೊಂದರ ಬಳಿ ಎಸೆದಿರುವ ಘಟನೆ ನಡೆದಿದೆ.

ಶುಕ್ರವಾರ ಸಂಜೆ 23 ವರ್ಷದ ಬಿಟೆಕ್ ವಿದ್ಯಾರ್ಥಿನಿ ಮನೆಗೆ ಹಿಂತಿರುಗಲು ಎಸ್‌ಯುವಿ ಕಾರೊಂದಕ್ಕೆ ಲಿಫ್ಟ್ ಕೇಳಿದ್ದಾರೆ. ಲಿಫ್ಟ್ ಕೊಡುವ ವೇಳೆ ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಚಾಲಕ ವಿದ್ಯಾರ್ಥಿನಿ ಮೇಲೆ ಕಾರಿನೊಳಗೆ ಅತ್ಯಾಚಾರ ಎಸಗಿ, ಕಾಲುವೆಯ ಬಳಿ ಎಸೆದು ಪರಾರಿಯಾಗಿದ್ದಾನೆ ನಂತರ ಯುವತಿ ಮನೆಗೆ ಬಂದು ಕಾರಿನಲ್ಲಿ ನಡೆದ ಘಟನೆಯ ಬಗ್ಗೆ ತನ್ನ ಕುಟುಂಬಕ್ಕೆ ತಿಳಿಸಿದ್ದಾಳೆ. ಈ ಕುರಿತು ದೂರು ಬಂದಿದ್ದು, ತನಿಖೆ ಮುಂದುವರಿದಿದೆ. ಪ್ರಾಥಮಿಕ ತನಿಖೆಯ ನಂತರ ಎಫ್‌ಐಆರ್ ದಾಖಲಿಸಲಾಗುವುದು ಎಂದು ಜೈಸಿಂಗ್‌ಪುರ ವೃತ್ತಾಧಿಕಾರಿ ಪ್ರಶಾಂತ್ ಸಿಂಗ್ ಹೇಳಿದ್ದಾರೆ.

ಕನ್ನಡದ ಹಿರಿಯ ನಟ ಲೋಹಿತಾಶ್ವ ಆಸ್ಪತ್ರೆಗೆ ದಾಖಲು



ಬೆಂಗಳೂರು, ಅ.9– ಸ್ಯಾಂಡಲ್‌ವುಡ್ ಹಿರಿಯ ನಟ ಶರತ್ ಲೋಹಿತಾಶ್ವ ತಂದೆ ಲೋಹಿತಾಶ್ವ ಅವರ ಆರೋಗ್ಯದಲ್ಲಿ ಏರುಪೇರಾಗಿದೆ. ಹೀಗಾಗಿ ಲೋಹಿತಾಶ್ವ ಅವರನ್ನು ಕುಮಾರಸ್ವಾಮಿ ಲೇಔಟ್‌ನಲ್ಲಿರುವ ಅಪೋಲೋ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲು ಮಾಡಲಾಗಿದೆ. ಲೋಹಿತಾಶ್ವ ಅವರನ್ನು ತೀವ್ರ ನಿಗಾ ಘಟಕದಲ್ಲಿರಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಇವರ ಆರೋಗ್ಯ ಸ್ಥಿತಿ ಗಂಭೀರವಾಗಿದೆ ಎಂದು ವೈದ್ಯಕೀಯ ಮೂಲಗಳು ತಿಳಿಸಿವೆ.

ನಕ್ಕರೆ ಅದೇ ಸ್ವರ್ಗ

ನ್ಯಾಯಾಧೀಶ : ನೀನು ಓವರ್ ಸ್ಪೀಡಾಗಿ ಕಾರನ್ನು ಓಡಿಸಲಿಲ್ಲ ಅನ್ನುವುದಕ್ಕೆ ಸಾಕ್ಷಿ ಏನಿದೆ?

ಗುಂಡ : ಹೆಂಡತಿಯನ್ನು ಕರೆದುಕೊಂಡು ಬರಲು ಅವಳ ತವರು ಮನೆಗೆ ಹೋಗುತ್ತಿದ್ದೆ ಸ್ವಾಮಿ!

ಮೈಸೂರು ಮಿತ್ರ
ಸೋಮವಾರ, 10 ಅಕ್ಟೋಬರ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಅರ್ಥವಿಲ್ಲದ ಪ್ರಶ್ನೆಗೆ ಸುಮ್ಮನಿರುವುದೇ ಉತ್ತರ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸಗಣಿಯವನ ಸ್ನೇಹಕ್ಕಿಂತ ಗಂಧದವನ ಜೊತೆ ಗುದ್ದಾಟ ಮೇಲು.

ನಿಮ್ಮ ಪತ್ರಗಳು

ಆಡಳಿತ ಪಕ್ಷದ ದಸರಾ ಎಂದು ಕರೆದರೆ...

ಮಾನ್ಯರೆ,

ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು ನಾಡಹಬ್ಬ ದಸರಾವನ್ನು ಪ್ರತ್ಯಕ್ಷವಾಗಿ 15 ಲಕ್ಷ ಜನ ವೀಕ್ಷಣೆ ಮಾಡಿದ್ದಾರೆ ಎಂದು ಹೇಳಿದ್ದಾರೆ. ಸಂತೋಷ, ಕನ್ನಡ ನಾಡು-ನುಡಿಗಾಗಿ ಹೋರಾಟ ಮಾಡಿ ಹಾಗೂ ರಾಷ್ಟ್ರೀಯ ಹಬ್ಬ ಎಲ್ಲಾ ಸಮುದಾಯದ ಮಹನೀಯರ ಜಯಂತಿಗೆ ಜಿಲ್ಲಾಡಳಿತದ ಜೊತೆ ನಿರಂತರ ಸಹಕಾರ ನೀಡಿದ ಕನ್ನಡ ಹೋರಾಟಗಾರರನ್ನು ಹಾಗೂ ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರನ್ನು ಕಡೆಗಣಿಸಿ ನಾಡಹಬ್ಬ ದಸರಾ ಆಚರಣೆ ಮಾಡಿರುವುದು ನಿಜಕ್ಕೂ ಬೇಸರ ತಂದಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ವೈಫಲ್ಯ ಇಲ್ಲಿ ಎದ್ದು ಕಾಣುತ್ತಿದೆ. ಯಾವುದೇ ಕಾಳಜಿ ಇಲ್ಲದೆ ಇರುವ ಇಂತಹ ಮನಸ್ಥಿತಿಯ ಅಧಿಕಾರಿಗಳ ನಡೆ ನಿಜಕ್ಕೂ ಖಂಡನೀಯ. ಪ್ರತಿ ಬಾರಿ ದಸರಾ ಎಂದರೆ ಆಡಳಿತ ಪಕ್ಷದ ಕಾರ್ಯಕ್ರಮ ಆಗಿಹೋಗಿದ್ದು ನಾಡು ನುಡಿಗಾಗಿ ನಿರಂತರ ದುಡಿದವರ ಕಡೆಗಣನೆ ಮಾಡಲಾಗಿದೆ.

– ಅರವಿಂದ್ ಶರ್ಮ, ಮೈಸೂರು

ಯುವ ದಸರಾ ಮುಗಿದರೂ ರಾರಾಜಿಸುತ್ತಿರುವ ಫ್ಲೆಕ್ಸ್‌ಗಳು

ಮಾನ್ಯರೆ,

ಮೈಸೂರು ನಗರ ಸಂಚಾರ ಮತ್ತು ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಪೊಲೀಸಿನವರು ದಸರಾ ಸಂದರ್ಭದಲ್ಲಿ ಅದ್ಭುತವಾಗಿ ಕಾರ್ಯ ನಿರ್ವಹಿಸಿ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ಕ್ರಮ ಕೈಗೊಂಡಿದ್ದಾರೆ.

ಕೆಎಸ್‌ಆರ್‌ಟಿಸಿ ಮತ್ತು ನಗರ ಬಸ್‌ಗಳಿಗೆ ಬೇರೆ ಬೇರೆ ಸ್ಥಳಗಳಲ್ಲಿ ತಾತ್ಕಾಲಿಕವಾಗಿ ಬಸ್ ನಿಲ್ದಾಣಗಳನ್ನು ತೆರೆದು ಮಾಹಿತಿಗಾಗಿ ಫ್ಲೆಕ್ಸ್‌ಗಳನ್ನು ಅಳವಡಿಸಿದ್ದರು. ಇದರಿಂದ ಸಾರ್ವಜನಿಕರು ಬಸ್‌ಗಳಿಗಾಗಿ ಪರದಾಡುವುದು ತಪ್ಪಿದಂತಾಯಿತು. ಮತ್ತು ವಾಹನಗಳ ಸುಗಮ ಸಂಚಾರಕ್ಕಾಗಿ ಏಕಮುಖ ಸಂಚಾರ ವ್ಯವಸ್ಥೆಯನ್ನು ಅಳವಡಿಸಿದ್ದರಿಂದ ವಾಹನ ಸವಾರರು ಯಾವುದೇ ತೊಂದರೆಯಿಲ್ಲದೇ ದಸರಾ ದೀಪಾಲಂಕಾರವನ್ನು ಸವಿಯುವಂತಾಯಿತು.

ಪಾದಚಾರಿಗಳು ರಸ್ತೆ ದಾಟಲು, ನೋ ಪಾರ್ಕಿಂಗ್, ಒನ್ ವೇ ಪಾರ್ಕಿಂಗ್ ಸ್ಥಳಗಳ ಬಗ್ಗೆ ಮತ್ತು ನಗರದ ಪ್ರಮುಖ ಹಾಗೂ ಐತಿಹಾಸಿಕ ಸ್ಥಳಗಳಿಗೆ ಪೊಲೀಸ್‌ನವರು ಪ್ರಮುಖ ಸ್ಥಳಗಳು, ರಸ್ತೆಗಳಲ್ಲಿ ಫಲಕಗಳನ್ನು ಅಳವಡಿಸಿದ್ದರು. ಇದರಿಂದ ಸಾರ್ವಜನಿಕರಿಗೆ ಮಾಹಿತಿಯ ಕೊರತೆ ಆಗದಂತೆ ನೋಡಿಕೊಂಡಿದ್ದಾರೆ.

ದಸರಾ ಆರಂಭವಾದ ದಿನದಿಂದಲೂ ಅನೇಕ ಮನರಂಜನೆ ಕಾರ್ಯಕ್ರಮಗಳು ನಡೆದವು. ಅವುಗಳನ್ನು ಯಾವುದನ್ನೂ ಅನುಭವಿಸದೆ, ರಜೆಯನ್ನೂ ತೆಗೆದುಕೊಳ್ಳದೇ ರಾತ್ರಿ 11 ಗಂಟೆಯವರೆಗೆ ದೀಪಾಲಂಕಾರವನ್ನು ನೋಡಲು ಬರುವವರ, ವಾಹನ ದಟ್ಟಣೆಯ ತೀವ್ರತೆ ಕಡಿಮೆಯಾಗುವವರೆಗೆ ಅಂದರೆ ಸರಿ ಮಧ್ಯರಾತ್ರಿಯವರೆಗೆ ಯಾವುದೇ ಆಯಾಸವಿಲ್ಲದೆ, ಬೇಸರ ಪಟ್ಟುಕೊಳ್ಳದೇ ನಗುಮುಖದಿಂದಲೇ ಕರ್ತವ್ಯ ನಿರ್ವಹಿಸಿ, ವಿಶ್ವವಿಖ್ಯಾತ ಮತ್ತು ನಾಡಹಬ್ಬ ದಸರಾ ಯಶಸ್ವಿಗೊಳಿಸಿದ ಪ್ರತಿಯೊಬ್ಬ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಧನ್ಯವಾದಗಳು.

– ವರ್ಧರಾಮ್ ಪಟೇಲ್, ಮೈಸೂರು.

ಪೆಟ್ರೋಲ್ ಬಂಕ್‌ಗಳ ಹಗಲು ದರೋಡೆ

ಮಾನ್ಯರೆ,

ಪೆಟ್ರೋಲ್ ಮತ್ತು ಡೀಸೆಲ್ ದರ ಹೆಚ್ಚಳದ ಬೆನ್ನಲ್ಲೇ ಬಹಳ ದಿವಸಗಳಿಂದ ಬಹುತೇಕ ಪೆಟ್ರೋಲ್ ಬಂಕ್‌ಗಳು ವ್ಯೆಮರೆತ ಗ್ರಾಹಕರಿಗೆ ನಿರ್ಭೀತಿಯಿಂದ ಮಂಕು ಬೂದಿ ಎರಚುವ ಕಾರ್ಯದಲ್ಲಿ ತೊಡಗಿಸಿಕೊಂಡಿವೆ.



ಉದಾಹರಣೆಗೆ ಪೆಟ್ರೋಲ್‌ನ ಸಾಂದ್ರತೆ ಕನಿಷ್ಠ ಪಕ್ಷ 0.75 ರಿಂದ 0.78gm/cm3 ಇರಬೇಕು. ಮತ್ತು ಡೀಸೆಲ್‌ನ ಸಾಂದ್ರತೆ 0.83 ರಿಂದ 0.86gm/cm3 ಇರಬೇಕು. ಆದರೆ ಪೆಟ್ರೋಲ್ ಬಂಕ್‌ಗಳು ಪೆಟ್ರೋಲ್‌ನ ಸಾಂದ್ರತೆ 0.4 ರಿಂದ 0.5gm/cm3 ಮತ್ತು ಡೀಸೆಲ್‌ನ ಸಾಂದ್ರತೆ 0.6 ರಿಂದ 0.65gm/cm3 ಇರುವ ಕಳಪೆ ಗುಣಮಟ್ಟದ ತೈಲಗಳನ್ನು ಗ್ರಾಹಕರ ವಾಹನದ ಟ್ಯಾಂಕ್‌ಗಳಿಗೆ ತುಂಬಿಸುವ ಮುಖಾಂತರ ವಾಮ ಮಾರ್ಗದಲ್ಲಿ ಲಾಭ ಮಾಡುತ್ತಿವೆ. ಕಳಪೆ ಗುಣಮಟ್ಟದ ತೈಲ ವಾಹನದ ಮೈಲೇಜ್ ಕಡಿಮೆ ನೀಡುವುದರ ಜೊತೆಗೆ ಎಂಜಿನ್‌ಗೆ ಡ್ಯಾಮೇಜ್ ಉಂಟುಮಾಡುತ್ತದೆ. ಪೆಟ್ರೋಲ್ ಬಂಕ್‌ಗಳು ಇನ್ನೊಂದು ಹೆಜ್ಜೆ ಮುಂದೆ ಹೋಗಿ ಶಾರ್ಟ್ ಫ್ಯೂಲಿಂಗ್ ತಂತ್ರಗಾರಿಕೆಯಲ್ಲಿ ತೊಡಗಿ ಕೊಂಡಿವೆ. ಉದಾಹರಣೆಗೆ ಗ್ರಾಹಕ 500 ರೂ. ತೈಲ ಟ್ಯಾಂಕ್‌ಗೆ ಹಾಕಿ ಎಂದು ಬೇಡಿಕೆ ಇಟ್ಟ ಸಂದರ್ಭದಲ್ಲಿ ಜಾಣ ಕಿವುಡರಂತೆ ಮೊದಲಿಗೆ 100 ರೂ. ತೈಲವನ್ನು ವಾಹನಕ್ಕೆ ಬೇಕಂತಲೇ ತುಂಬಿಸಿ ತದನಂತರ ಮೀಟರ್ ರೀಡಿಂಗ್ ಸೊನ್ನೆಗೆ ತರದೆ 100 ರೂ. ರೀಡಿಂಗ್‌ನಿಂದ ಶುರು ಮಾಡಿ ರೂ. 400ರ ತೈಲ ಟ್ಯಾಂಕ್‌ಗೆ ತುಂಬಿಸುತ್ತಾರೆ. ಇದರಿಂದ ಇಲ್ಲಿ ರೂ. 400ರ ತೈಲ ಟ್ಯಾಂಕ್‌ಗೆ ತುಂಬಿಸಿದಂತಾಯಿತು. ಒಟ್ಟಾರೆ ಇಲ್ಲಿ ರೂ. 500 ಬದಲಿಗೆ ರೂ. 400 ತೈಲ ವಾಹನಕ್ಕೆ ಹಾಕಿದಂತಾಯಿತು. ಅರ್ಥಾತ್ ರೂ.100 ಮೋಸ ಮಾಡಿದಂತಾಯಿತು. ಹೀಗೆ ಪೆಟ್ರೋಲ್ ಬಂಕ್‌ಗಳು ಎಚ್ಚರ ತಪ್ಪಿದ ಗ್ರಾಹಕರಿಗೆ ಮನಸ್ಸೋ ಇಚ್ಛೆ ಮೋಸ ಮಾಡುತ್ತಿವೆ.

–ವಿಜಯಕುಮಾರ್ ಎಚ್.ಕೆ., ರಾಯಚೂರು

ಜಿಲ್ಲಾ ವಸ್ತುವಾರಿ ಸಚಿವರು ಎಂದರೆ ಏನು... ಯಾರು?

ಮಾನ್ಯರೆ,

ಬಿಜೆಪಿ ಸರಕಾರ ತನ್ನ ಪ್ರಕಟಣೆಗಳಲ್ಲಿ ಕನ್ನಡಕ್ಕೆ ಸ್ಥಾನಮಾನ ನೀಡುವುದರಲ್ಲಿ ಉಪೇಕ್ಷೆ ತೋರುತ್ತಿದೆ ಎಂದು ಕನ್ನಡ ಸಂಘಟನೆಗಳು ದೂರಲಾಂಭಿಸಿವೆ.

ಮೈಸೂರಿನ ಕುಕ್ಕರಹಳ್ಳಿಕೆರೆಗೆ ಹೋಗುವ ರಸ್ತೆಯಲ್ಲಿ ಯುವ ದಸರೆಗೆ ಸ್ವಾಗತ ಕೋರುವ ಫ್ಲೆಕ್ಸ್‌ನಲ್ಲಿ (ನಿಷೇಧಿಸಲ್ಪಟ್ಟರೂ ವ್ಯಾಪಕವಾಗಿ ಹಾಕಲಾಗಿದೆ). ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಯುವ ದಸರಾಕ್ಕೆ ತೆರೆ ಬಿದ್ದರೂ ರಾರಾಜಿಸುತ್ತಿರುವ ಉಸ್ತುವಾರಿ ಸಚಿವರನ್ನು ಮೈಸೂರಿನ ಜನತೆ ಮರೆಯುವ ಹಾಗೇ ಇಲ್ಲ. ಬಿಡಿ.!

– ಕೊ.ಸು. ನರಸಿಂಹಮೂರ್ತಿ, ಚಾಮರಾಜಪುರಂ, ಮೈಸೂರು.




ಪ್ರೊ. ಎ.ವಿ.ನರಸಿಂಹಮೂರ್ತಿ
ಮಾಜಿ ಮುಖ್ಯಸ್ಥರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಶಾಸ್ತ್ರ ವಿಭಾಗ,
ಮೈಸೂರು ವಿಶ್ವವಿದ್ಯಾನಿಲಯ.

ಇತಿಹಾಸದ ಪುಟಗಳು

ಶ್ರೀ ಕೃಷ್ಣದೇವರಾಯರ ದಸರಾ ಉತ್ಸವದ ಭವ್ಯತೆ







ವಿಜಯನಗರದ ಅರಸರಲ್ಲಿ ಅತೀ ಮುಖ್ಯನಾದವನೇ ಕೃಷ್ಣದೇವರಾಯ. ಇವನು 1509 ರಿಂದ 1529ರವರೆಗೆ ಆಳಿದ್ದು ಮಾತ್ರವಲ್ಲದೆ ವಿಜಯನಗರವನ್ನು ಒಂದು ಸುಭದ್ರ ರಾಜ್ಯವನ್ನಾಗಿ ಮಾಡಿದನು. ಕೃಷ್ಣದೇವರಾಯನು ಒರಿಸ್ಸಾದ ರಾಜನನ್ನು ಸೋಲಿಸಿ, ಅವನಲ್ಲಿದ್ದ ಬೆಳ್ಳಿಯಿಂದ ಮಾಡಿದ್ದ ಶ್ರೀಕೃಷ್ಣನ ವಿಗ್ರಹವನ್ನು ಒಡಿಸ್ಸಾವನ್ನು ಗೆದ್ದುದರ ಜ್ಞಾಪಕಾರ್ಥವಾಗಿ ವಿಜಯನಗರಕ್ಕೆ ತಂದನು. ರಾಯನು ಮಾರ್ಗ ಮಧ್ಯದಲ್ಲಿ ತಿರುಪತಿಗೆ ಹೋಗಿ ಶ್ರೀ ವೆಂಕಟೇಶ್ವರಸ್ವಾಮಿಗೆ ರಾಯನೇ ಟಂಕಿಸಿದ ಚಿನ್ನದ ನಾಣ್ಯಗಳಿಂದ ಕನಕಾಭಿಷೇಕವನ್ನು ಮಾಡಿದನು. ಈ ಚಿನ್ನದ ಸಾಮಾನ್ಯವಾದ ನಾಣ್ಯಗಳಿಗಿಂತ ಎರಡರಷ್ಟಿದೆ. ರಾಯನು ವೆಂಕಟೇಶ್ವರ ಸ್ವಾಮಿಗೆ ನೀಡಿದ ನವರತ್ನ ಪ್ರಭಾವಳಿಯಲ್ಲಿ 25 ಕೀರ್ತಿ ಮುಖಗಳು, 17835 **ವೊಮ್ಮಚ್ಚೀಚ** ಮಣಿಗಳು ಹಾಗೂ ಚಿನ್ನದ ದಾರಗಳೂ ಇವೆ. ನವರತ್ನಗಳಲ್ಲಿ 81 ರೂಬೀಸ್, 10994 ಕೆಂಪು ರತ್ನಗಳು, 754 ಎಮಿರಾಲ್ಡ್ಸ್, 530 ಸಫೈರ್ಸ್‌ಗಳಿವೆ.

ವಿಜಯನಗರದ ನಾಣ್ಯಗಳಲ್ಲಿ ಮುಖ್ಯವಾದುವುಗಳೆಂದರೆ ಹರಿಹರ.

ಇವುಗಳ ಮುಮ್ಮುಖದಲ್ಲಿ, ತೂಕ 1.7 ಗ್ರಾಂ, ಅಗಲ 1 ಸೆಂ.ಮೀ., ಶಿವ ಮತ್ತು ಪಾರ್ವತಿ ಕುಳಿತಿರುವ ಚಿತ್ರ.

ಹಿಮ್ಮುಖ: ಮೂರು ಸಾಲುಗಳ ನಾಗರಿ ಬರಹ ಶ್ರೀ ಪ್ರತಾಪ ಕೃಷ್ಣರಾಯರ ಈ ನಾಣ್ಯಗಳಲ್ಲಿ ಸುಮಾರು ನೂರು ನಮೂನೆಗಳಿವೆ.

ಉದಾಹರಣೆಗೆ ಸದಾಶಿವರಾಯನ ನಾಣ್ಯಗಳನ್ನು ಗಮನಿಸಬಹುದು.

ತೂಕ: 3.40 ಗ್ರಾಂ ಅಗಲ: 1.10 ಸೆಂ.ಮೀ. ಇದು ಒಂದು ವರಹ ಚಿನ್ನದ ನಾಣ್ಯ.

ಮುಮ್ಮುಖ: ಕುಳಿತಿರುವ ಶಿವ ಮತ್ತು ಪಾರ್ವತಿ: ಶಿವನ ಕೈಗಳಲ್ಲಿ ತ್ರಿಶೂಲವಿದೆ.

ಹಿಮ್ಮುಖ: ಮೂರು ಸಾಲುಗಳ ನಾಗರಿ ಬರಹ.

2) ತೂಕ: 3.40 ಗ್ರಾಂ. ಅಳತೆ 1.10 ಸೆಂ.ಮೀ. ನಾಣ್ಯದ ಹೆಸರು ವರಹ

ಮುಮ್ಮುಖ: ಕುಳಿತಿರುವ ಶಿವ ಹಾಗೂ ಪಾರ್ವತಿ. ಶಿವನ ಕೈಗಳಲ್ಲಿ ತ್ರಿಶೂಲವಿದೆ. ಎಡಗೈಯಲ್ಲಿ ಜಿಂಕೆಯಿದೆ.

3) **ತೂಕ:** 3.20 ಗ್ರಾಂ. ಅಳತೆ : 1.08 ಸೆಂ.ಮೀ. ನಾಣ್ಯದ ಹೆಸರು ವರಹ

ಮುಮ್ಮುಖ: ಕುಳಿತಿರುವ ಶಿವ ಹಾಗೂ ಪಾರ್ವತಿ, ಶಿವನ ಕೈಗಳಲ್ಲಿ ತ್ರಿಶೂಲವಿದೆ.

ಹಿಮ್ಮುಖ: ಎಡಗೈಯಲ್ಲಿ ಮೂರು ಸಾಲುಗಳ ನಾಗರಿ ಬರಹ ಶ್ರೀ ಸದಾಶಿವರಾಯ.

4) ಮೂರು ದೇವರ ಚಿನ್ನದ ನಾಣ್ಯ, 3.1 ಗ್ರಾಂ ತೂಕ ಅಳತೆ: 1.06 ಸೆಂ.ಮೀ., ನಾಣ್ಯದ ಹೆಸರು ವರಹ.

ಮುಮ್ಮುಖ: ತಿರುಪತಿಯ ವೆಂಕಟೇಶ್ವರ ಸ್ವಾಮಿ ಶ್ರೀದೇವಿ ಹಾಗೂ ಭೂದೇವಿ ನಿಂತಿರುವ ಚಿತ್ರ.

ಹಿಮ್ಮುಖ: ಚುಕ್ಕೆಗಳಿರುವ ಹಿಮ್ಮುಖ

5) 3.2 ಗ್ರಾಂ(ತೂಕ), ಅಳತೆ: 1.1 ಸೆಂ.ಮೀ. ನಾಣ್ಯದ ಹೆಸರು ಸ್ಟಾರ್‌ಪಗೋಡ

6) **ತೂಕ:** 11.70 ಗ್ರಾಂ, ಅಳತೆ 2.7 ಸೆಂ.ಮೀ., ನಾಣ್ಯದ ಹೆಸರು ಒಂದು ಅಶ್ರಫಿ

7) **ತೂಕ:** 11.72 ಗ್ರಾಂ, ಅಳತೆ : 2.8 ಸೆಂ.ಮೀ., ಒಂದು ಅಶ್ರಫಿ.

ಮುಮ್ಮುಖ: ಚಿನ್ನದ ನಾಣ್ಯದ ಸುತ್ತ ಬರಹ

ಹಿಮ್ಮುಖ: ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿ, ಎರಡು ಸಿಂಹಗಳು ಹಿಡಿದಿರುವ ಗುರಾಣಿ ಮತ್ತು ಈಸ್ಟ್ ಇಂಡಿಯಾ ಕಂಪನಿಯ ಬಾವುಟ.

ದಸರಾ ಉತ್ಸವವು ಪೌರಾಣಿಕ ಹಿನ್ನೆಲೆಯಲ್ಲಿ ಆರಂಭವಾದರೂ, ಅದು ವಿಜಯನಗರ ದೊರೆಗಳ ಕಾಲದಲ್ಲಿ ಹತ್ತು ದಿನಗಳ ಉತ್ಸವವಾಗಿ ಭವ್ಯತೆಯಿಂದ ಆಚರಿಸಲಾಗುತ್ತಿತ್ತು. ಅಂದಿನ ದಿನಗಳಲ್ಲಿ, ನಮ್ಮ ಕರ್ನಾಟಕದ ವಿವಿಧ ಭಾಗಗಳಲ್ಲಿ ಉತ್ಸವವಾಗಿ ಆಚರಿಸಲ್ಪಡುತ್ತಿದ್ದಿತು. ಕೃಷ್ಣದೇವರಾಯರ ದಸರಾ ಉತ್ಸವದ ವೈಭವವನ್ನು ಅನೇಕರು ಈ ದಸರಾ ಉತ್ಸವವನ್ನು ನೋಡಿದ ಮಹನೀಯರಿದ್ದಾರೆ.

ಕೃಷ್ಣದೇವರಾಯರು ತಮ್ಮ ಅರಮನೆಗೆ ಬಂದು ಅನೇಕ ರೀತಿಯ ಪೂಜೆಗಳನ್ನು ದೇವಿಗೆ ಸಮರ್ಪಿಸಿದರು. ಅರಮನೆಯ ಮುಂಭಾಗದಲ್ಲಿ ಸುಂದರವಾದ ನೃತ್ಯಪಟುಗಳು ವಿವಿಧ ರೀತಿಯ ನೃತ್ಯಗಳನ್ನು ಮಾಡಿದರು. ಅನಂತರ ಕೃಷ್ಣದೇವರಾಯನು ವಿವಿಧ ರೀತಿಯ ಹೂವುಗಳಿಂದ ಆ ಕುದುರೆಗಳನ್ನು ಪೂಜಿಸಿದನು. ನಂತರ ವಿವಿಧ ರೀತಿಯ ಹೂವುಗಳಿಂದ ಆನೆಗಳನ್ನು ಪೂಜಿಸಿದನು.

ಅನಂತರ ಕೃಷ್ಣದೇವರಾಯನು ಬ್ರಾಹ್ಮಣರು ಇದ್ದ ಸ್ಥಳಗಳಿಗೆ ಹೋಗಿ ಹೂವುಗಳ ಮೂಲಕ ಬ್ರಾಹ್ಮಣರಿಗೆ ಗೌರವವನ್ನು ತೋರಿಸಿದನು. ಇದಾದ ನಂತರ ಸೈನ್ಯದ ಮುಖ್ಯಸ್ಥರು ಕೃಷ್ಣದೇವರಾಯನು ಇದ್ದ ಸ್ಥಳಕ್ಕೆ ಹೋಗಿ ರಾಯನಿಗೆ ಸಲಾಂ ಮಾಡಿದ್ದಲ್ಲದೆ ಚಿನ್ನ, ಬೆಳ್ಳಿ, ವಜ್ರ, ವೈಡೂರ್ಯಗಳನ್ನು ರಾಯನಿಗೆ ಸಮರ್ಪಿಸಿದರು. ನಂತರ ರಾಯನು ತನ್ನ ಅರಮನೆಗೆ ಮರಳಿದನು. ಇಲ್ಲಿಗೆ ಬೆಳಗಿನ ಉತ್ಸವವು ಮುಗಿಯಿತು.

ಸುಮಾರು 2 ಘಂಟೆಯ ಹೊತ್ತಿಗೆ ಮಧ್ಯಾಹ್ನದ ಉತ್ಸವವು ಆರಂಭವಾಯಿತು. ಕುಸ್ತಿಪಟುಗಳು, ನರ್ತನ ಮಾಡುವವರು, ಅಲಂಕಾರವನ್ನು ಮಾಡಿದ ಆನೆಗಳು, ಸವಾರರು ಮುಂತಾದವರು ಉತ್ಸವದ ಸ್ಥಳಕ್ಕೆ ಬಂದರು. ಅಧಿಕಾರಿಗಳು, ವೇದೋತ್ತಮರು, ರಾಜನ ಬಂಧುಗಳು ಬಂದು ತಮಗಾಗಿ ಕಾದಿರಿಸಿದ ಸ್ಥಳಗಳಲ್ಲಿ ಕುಳಿತರು. ಶ್ರೇಷ್ಠ ಮಂತ್ರಿಯಾಗಿದ್ದ ಸಾಳುವ ವಂಶದ ತಿಮ್ಮರಸು, ಸಿಂಹಾಸನದ ಬಲ ಭಾಗದಲ್ಲಿ ಬಿಳಿ ರೇಷ್ಮೆ ವಸ್ತ್ರಗಳನ್ನು, ಚಿನ್ನದ ಹೂವುಗಳಿಂದ ಮಾಡಿದ ಕಸೂತಿ, ಮುತ್ತುಗಳಿಂದ ಅಲಂಕೃತವಾದ ವಸ್ತ್ರವನ್ನು ಧರಿಸಿ, ಚಾಮರಗಳೊಂದಿಗೆ ನಿಂತಿದ್ದನು. ಕೃಷ್ಣದೇವರಾಯನ ಸಾಮಂತರು ಕೃಷ್ಣದೇವರಾಯನ ಪಾದಗಳನ್ನು ಮುಟ್ಟಿ, ಮುತ್ತು, ರತ್ನಗಳಿಂದ ಕೂಡಿದ್ದನ್ನು ಕೃಷ್ಣದೇವರಾಯನಿಗೆ ಸಮರ್ಪಿಸಿದರು.

ಅನಂತರ ನರ್ತಕಿಯರು ತಮ್ಮ ವೈಶಿಷ್ಟ್ಯವನ್ನು ತೋರಿಸಿ, ರಾಯನಿಂದ ಚಿನ್ನ ಹಾಗೂ ಬೆಳ್ಳಿಯನ್ನು ಉಡುಗೊರೆಯಾಗಿ ಪಡೆದು, ತಮ್ಮ ಸ್ಥಳಗಳಿಗೆ ಹಿಂದಿರುಗಿದರು.

ಕೃಷ್ಣದೇವರಾಯನು ಸ್ವತಃ ಕುಸ್ತಿ ಪಟುವಾಗಿದ್ದನು. ಈ ಸಮಯಕ್ಕೆ ಕತ್ತಲಾದುದರಿಂದ ಇಡೀ ಅರಮನೆಯನ್ನು ಹಣತೆಗಳ ಬೆಳಕಿನಿಂದ ಅಲಂಕರಿಸಿದರು. ನಂತರ ಕುದುರೆ ಸವಾರರು ವಿವಿಧ ಚಮತ್ಕಾರಗಳಿಂದ ರಾಯನೂ ಸೇರಿದಂತೆ ಎಲ್ಲರ ಮನಸ್ಸನ್ನೂ ಗೆದ್ದರು. ಎಲ್ಲರೂ ಗಟ್ಟಿಯಾಗಿ ಚಪ್ಪಾಳೆ ತಟ್ಟಿ ತಮ್ಮ ಆನಂದವನ್ನು ಪ್ರದರ್ಶಿಸಿದರು.

ನಂತರ ಹಗ್ಗದ ಮೇಲೆ ನಡೆಯುವುದು ಮುಂತಾದ ಸಾಹಸ ಕಾರ್ಯಗಳನ್ನು ಮಾಡುವವರು, ನಡಿಗೆಗಳನ್ನು ತಾಳಕ್ಕೆ ತಕ್ಕಂತೆ ಬದಲಾಯಿಸುವವರು, ತಮ್ಮ ಚಮತ್ಕಾರಗಳನ್ನು ತೋರಿಸಿದರು. ಆನೆಗಳೂ ಕೂಡ ನಾಟ್ಯಕ್ಕೆ ತಕ್ಕಂತೆ, ನರ್ತನ ಮಾಡಿ ಎಲ್ಲರಿಗೂ ಆನಂದವನ್ನು ಉಂಟು ಮಾಡಿದವು. ನಂತರ ಈ ಆನೆಗಳು ಕೃಷ್ಣದೇವರಾಯನ ಸಮೀಪಕ್ಕೆ ಬಂದು ಸೆಲ್ಯೂಟ್ ಮಾಡಿ ಹಿಂತಿರುಗಿದವು. ನಂತರ ಅನೇಕ ರಾಕೆಟ್ಟುಗಳನ್ನು ಹಚ್ಚಿದರು. ಇವು ಎಲ್ಲ ದಿಕ್ಕುಗಳಲ್ಲಿಯೂ ಹೋಗಿ, ತಮ್ಮ ಬೆಳಕನ್ನು ಚೆಲ್ಲಿದವು. ಇಡೀ ಅರಮನೆಯು ದೀಪಗಳಿಂದ ಹೊಳೆದಂತೆ ಕಾಣುತ್ತಿದ್ದಿತು. (ಈಗಿನ ಕಾಲದ ಬಲ್ಬುಗಳಿದ್ದಂತೆ). ರಾಕೆಟ್ಟುಗಳ ನಂತರ, ಪಟ್ಟದ ಕುದುರೆಯು, ಕೃಷ್ಣದೇವರಾಯನ ಹತ್ತಿರ ಬಂದು ತಮ್ಮ ಮುಖವನ್ನು ಅಳ್ಳಾಡಿಸಿ, ರಾಜನಿಗೆ ಗೌರವವನ್ನು ತೋರಿಸಿದವು.

ಇವೆಲ್ಲವೂ ಮುಗಿದ ನಂತರ ವೇದವಿದ್ವಾಂಸರು ರಾಜನ ಅಪ್ಪಣೆಯನ್ನು ಪಡೆದು, ಅರಮನೆಗೆ ಹಿಂದಿರುಗಿದರು. ಇವೆಲ್ಲವೂ ಮುಗಿದ ನಂತರ, ಕೃಷ್ಣದೇವರಾಯನು ಆ ದಿನದ ಮಧ್ಯಾಹ್ನದ ಕ್ರಮವನ್ನು ಮುಗಿಸಿದನು.

ಹತ್ತನೇ ದಿನವಾದ ವಿಜಯದಶಮಿಯಂದು ಕೃಷ್ಣದೇವರಾಯನು ತನ್ನ ರಾಜ್ಯದ ಸೇನೆಯನ್ನು ಪರೀಕ್ಷಿಸಿ, ಅವು ಯಾವ ಸಮಯಕ್ಕಾದರೂ ತಯಾರಾಗಿವೆಯೇ ಎಂದು ಖಾತ್ರಿ ಮಾಡಿಕೊಂಡನು.

ಈ ಎಲ್ಲಾ ಸೇನೆಗಳು, ಕುದುರೆಯ ಸವಾರರು, ಆನೆಯನ್ನು ಪಳಗಿಸಿದವರು. ಕೃಷ್ಣದೇವರಾಯನ ಮುಂದೆ ಹಾದು ಹೋದರು. ಇದರಿಂದ ತನ್ನ ಸೈನ್ಯ, ಕುದುರೆ, ಆನೆಯ ಬಲ ಏನಾದರೂ ತೊಂದರೆಯುಂಟಾದರೆ ಸಿದ್ಧವಾಗಿವೆ ಎಂಬುದನ್ನು ನೋಡಿ ರಾಯನಿಗೆ ಸಂತೋಷವಾಯಿತು. ಈ ಎಲ್ಲಾ ಕಾರ್ಯಕ್ರಮಗಳೂ ಶತ್ರುಗಳಿಗೆ ಎಚ್ಚರಿಕೆಯನ್ನು ಕೊಟ್ಟಂತಾಯಿತು. ಕೃಷ್ಣದೇವರಾಯನು ತನ್ನ ಅರಮನೆ ಪುರೋಹಿತರ ಸಹಾಯದಿಂದ ಕೆಲವು ಪೂಜೆಗಳನ್ನು ಮಾಡಿದನು.

ಕೃಷ್ಣದೇವರಾಯನ ಕಾಲದ ದಸರಾ ಹಬ್ಬವು ಅದ್ಭುತವಾಗಿದ್ದವು. ವಿದೇಶಿ ಯಾತ್ರಿಕನಾದ ಡೊಮಿಂಗೋ ಪೇಸ್‌ಗೆ ಅರಮನೆಯಿಂದ ಒಂದು ಕುದುರೆಯನ್ನು ನೀಡಲಾಗಿತ್ತು. ನಂತರ ಅನೇಕ ಮತಾಪುಗಳನ್ನು ಹಚ್ಚಿದರು. ಇದರ ಬೆಳಕು ಎಲ್ಲ ದಿಕ್ಕುಗಳಲ್ಲಿಯೂ ಚೆಲ್ಲಿತು.

ಕೃಷ್ಣದೇವರಾಯನ ಸಾಮ್ರಾಜ್ಯದಲ್ಲಿ ರಾಜಪ್ರಭುತ್ವವಿದ್ದಿತು. ಇದೇ ಸಮಯದಲ್ಲಿ ಸಾಮಂತರು ಸ್ವಇಚ್ಛೆಯಿಂದ ಕಾಣಿಕೆಗಳನ್ನು ನೀಡಿ, ಕೃಷ್ಣದೇವರಾಯನಿಗೆ ತಮ್ಮ ನಿಷ್ಠೆಯನ್ನು ತೋರಿಸುತ್ತಿದ್ದರು. ರಾಜನ ಕರ್ತವ್ಯವೇ ಧರ್ಮವನ್ನು ರಕ್ಷಿಸುವುದಾಗಿದ್ದಿತು.

ಕೃಷ್ಣದೇವರಾಯನು ಮಠಗಳಿಗೆ ಸಹಾಯ ಮಾಡಿ ಅವುಗಳನ್ನು ಉಳಿಸಿಕೊಂಡು ಬರುತ್ತಿದ್ದರು. ಮತ್ತು ಮಠಗಳು ಮೌಲ್ಯಗಳನ್ನು ಉಳಿಸಿಕೊಂಡಿದ್ದವು. ವ್ಯವಸಾಯಕ್ಕೆ ಪ್ರೋತ್ಸಾಹ ಕೊಡಲು, ಸಾಮಂತರು ತಮ್ಮ ಧನದಿಂದ ಹೊಸಹಳ್ಳಿಗಳನ್ನು ಸ್ಥಾಪಿಸುತ್ತಿದ್ದರು. ದೇಶದ ಆರ್ಥಿಕ ಪ್ರಗತಿ ಹಾಗೂ ಸಾಮಾಜಿಕ ಶಾಂತಿ ಮತ್ತು ನ್ಯಾಯದ ಪಾಲನೆಯನ್ನು ಕೃಷ್ಣದೇವರಾಯನು ಮಾಡುತ್ತಿದ್ದನು.

ಅಕಸ್ಮಾತ್ ಯಾರಾದರೂ ಶತ್ರುಗಳು ರಾಯನಿಗೆ ತೊಂದರೆಯನ್ನು ಕೊಟ್ಟರೆ, ರಾಯನ ಸಾಮಂತರು ಸದಾ ಸಿದ್ಧರಾಗಿದ್ದರು. ಶ್ರೀರಂಗಪಟ್ಟಣದಲ್ಲಿದ್ದ ಸಾಮಂತರ ಮೂಲಕ ರಾಯನು ಅವರನ್ನು ಕ್ಷಮಿಸುತ್ತಿದ್ದನು.

ಆಡಳಿತ ವ್ಯವಸ್ಥೆ: ವಿಜಯನಗರ ಸಾಮ್ರಾಜ್ಯದಲ್ಲಿ ರಾಜಪ್ರಭುತ್ವವಿದ್ದಿತು. ಕೇಂದ್ರೀಯ ಆಡಳಿತವೂ ಇದ್ದಿತು. ಕೃಷ್ಣದೇವರಾಯನ ಪಟ್ಟಾಭಿಷೇಕ ಸಮಯದಲ್ಲಿ ಜನಸಾಮಾನ್ಯರು ಮತ್ತು ನಗರದ ಮುಖಂಡರು ಹಾಜರಿದ್ದು, ಸಾಮಂತರು ಕಾಣಿಕೆಗಳನ್ನು ನೀಡಿ ಜನಸಾಮಾನ್ಯರು ಹಾಜರಿದ್ದರು ರಾಜನಿಗೆ ತಮ್ಮ ನಿಷ್ಠೆಯನ್ನು ತೋರಿಸುತ್ತಿದ್ದರು. ಕೃಷ್ಣದೇವರಾಯನ ಮುಖ್ಯ ಕಾರ್ಯವೇ ಧರ್ಮವನ್ನು ರಕ್ಷಿಸುವುದಾಗಿದ್ದಿತು. ಆರ್ಥಿಕಾಭಿವೃದ್ಧಿ, ಸಮಾಜದ ಶಾಂತಿ, ನ್ಯಾಯಪಾಲನೆ ಕೃಷ್ಣದೇವನ ಅಧಿಕಾರಿಗಳ ಕರ್ತವ್ಯವಾಗಿದ್ದಿತು. ರಾಯನೇ ಶ್ರೇಷ್ಠ ನ್ಯಾಯಾಧೀಶನಾಗಿದ್ದುದು ಮಾತ್ರವಲ್ಲದೆ, ಸಂಸ್ಕೃತಿಯ ಪೋಷಣೆಯೂ ರಾಜನ ಕರ್ತವ್ಯವಾಗಿದ್ದಿತು.

ವಿಜಯನಗರ ವ್ಯಾಪ್ತಿಯೂ ಹೆಚ್ಚಿನ ಮಟ್ಟಿಗೆ ಅನಂತಪುರ ಮತ್ತು ಕರ್ನೂಲು ಜಿಲ್ಲೆಗಳಲ್ಲಿ ರತ್ನ ಹಾಗೂ ವಜ್ರದ ಗಣಿಗಳಿದ್ದವು. ವಿಜಯನಗರದಲ್ಲಿ ನೂರಾರು ಸಣ್ಣ ಬಂದರುಗಳಿದ್ದವು. ಈ ಬಂದರುಗಳಿಂದ ಮಲಯ, ಬರ್ಮಾ, ಚೀನಾ, ಅರೇಬಿಯಾ, ಪರ್ಷಿಯ, ದಕ್ಷಿಣ ಆಫ್ರಿಕ, ಅಬಿಸೀನಿಯ ಮತ್ತು ಪೋರ್ಚುಗಲ್ ದೇಶಗಳೊಡನೆ ವಿಜಯ ನಗರವು ಸಂಪರ್ಕ ಹೊಂದಿತ್ತು. ಬಟ್ಟೆ, ಅಕ್ಕಿ, ಕಬ್ಬಿಣದ ಅದಿರು, ಮರ, ಸಾಂಬಾರ ಪದಾರ್ಥಗಳು, ಸಕ್ಕರೆ ವಿಜಯನಗರದಿಂದ ಹೊರ ದೇಶಗಳಿಗೆ ಹೋಗುತ್ತಿದ್ದವು. ಹೀಗೆ ಭೂಮಿಯಿಂದ ಬರುವ ಹೆಚ್ಚಿನ ಆದಾಯ ಹಾಗೂ ಹೊರ ದೇಶಗಳ ವ್ಯಾಪಾರದಿಂದ ವಿಜಯನಗರದ ಬೊಕ್ಕಸವು (ಟ್ರೆಷರಿ) ಯಾವಾಗಲೂ ತುಂಬಿರುತ್ತಿದ್ದಿತು.

ವಿಜಯನಗರ ಸಾಮ್ರಾಜ್ಯದಲ್ಲಿ ಸ್ತ್ರೀಯರಿಗೆ ಮುಖ್ಯವಾದ ಸ್ಥಾನವಿದ್ದಿತು. ವಿಜಯನಗರದ ಪ್ರಜೆಗಳು ಉತ್ಸವಪ್ರಿಯರಾಗಿದ್ದು, ಹಬ್ಬ, ಹುಣ್ಣಿಮೆಗಳಲ್ಲಿ ಆಟಪಾಠಗಳಲ್ಲಿ ತೊಡಗಿ ವಿಜಯನಗರದ ಸಮುದಾಯಕ್ಕೆ ಸಂತೋಷವನ್ನುಂಟು ಮಾಡುತ್ತಿದ್ದರು. ರಾಯನೂ ಇದನ್ನು ಪ್ರೋತ್ಸಾಹಿಸುತ್ತಿದ್ದನು.

ಆ ಕಾಲದಲ್ಲಿ ನಡೆಯುತ್ತಿದ್ದ ಹಬ್ಬಗಳಲ್ಲಿ ಮುಖ್ಯವಾದದ್ದು ನವರಾತ್ರಿ. ರಾಯನು ಸಂಗೀತಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ನೀಡುತ್ತಿದ್ದನು. ವಿಜಯನಗರದ ಸಮಯದಲ್ಲಿ ಹತ್ತಾರು ಸಂಗೀತ ಗ್ರಂಥಗಳು ರಚಿತವಾದವು. ಭಕ್ಷ್ಯ ಭೋಜ್ಯಗಳನ್ನು ತಯಾರಿಸುವುದರಲ್ಲಿ ಉತ್ತಮ ಅಭಿರುಚಿಯನ್ನು ಹೊಂದಿದ್ದರು ಎಂಬುದು ಮಂಗರಸನ ಸೂಪಶಾಸ್ತ್ರದಿಂದ ತಿಳಿದುಬರುತ್ತದೆ. ವಿಜಯನಗರ ಕಾಲದ ಚಿತ್ರಕಲೆ ಉಳಿದು ಬಂದಿರುವುದು ತುಂಬಾ ಕಡಿಮೆ. ಆದರೆ ವಿಜಯನಗರದ ಚಿತ್ರಕಲೆಯು ಹಂಪೆಯ ವಿರೂಪಾಕ್ಷ ದೇವಾಲಯ, ಆನೆಗೊಂದಿಯ ಮಂಟಪದಲ್ಲಿ, ಲೇಪಾಕ್ಷಿ, ಸೋಂಡಲ್ಲೆ ದೇವಾಲಯಗಳಲ್ಲಿ ಈಗಲೂ ಉಳಿದಿವೆ. ವಿಜಯನಗರ ಕಾಲದ ಪೌರಾಣಿಕ ಕಥೆಗಳಲ್ಲಿ ಮುಖ್ಯವಾದುವೆಂದರೆ, ಸಮುದ್ರ ಮಂಥನ, ಕಾಮ ಸಂಹಾರಮೂರ್ತಿ, ಗಿರಿಜಾ ಕಲ್ಯಾಣ, ನಳ ದಮಯಂತಿ ಹಾಗೂ ಪ್ರಾಣಿಗಳು ಮತ್ತು ಪಕ್ಷಿಗಳು. ಇವುಗಳಲ್ಲದೆ ಜನಸಾಮಾನ್ಯರೂ ತಮ್ಮ ಮನೆಗಳ ಮುಂದೆ, ರಂಗವಲ್ಲಿಯ ವಿವಿಧ ಆಕಾರಗಳನ್ನು ಬಿಡಿಸುವುದರಲ್ಲಿ ವಿಜಯನಗರದ ಸ್ತ್ರೀಯರು ಆಸಕ್ತಿ ತೋರಿಸುತ್ತಿದ್ದರು.

ರಾಯನ ಅರಮನೆಯ ಪ್ರವೇಶ ದ್ವಾರದ ಬಳಿ ಕೃಷ್ಣದೇವರಾಯ ಮತ್ತು ಅವನ ತಂದೆಯ ಆರು ಅಡಿ ಎತ್ತರದ ಚಿತ್ರಗಳನ್ನು ಚಿತ್ರಕಾರರು ರಚಿಸಿದ್ದರು. ಈಗಲೂ ಉಳಿದು ಬಂದಿರುವ ಚಿತ್ರಗಳೆಂದರೆ ಆನೆಗೊಂದಿಯ ಮಠ, ವಿರೂಪಾಕ್ಷ ದೇವಾಲಯದ ಭವ್ಯವಾದ ಚಾವಣಿಗಳಲ್ಲಿ ಉಮಾಮಹೇಶ್ವರ, ಲಕ್ಷ್ಮೀನಾರಾಯಣ, ಬ್ರಹ್ಮ, ಸರಸ್ವತಿ, ತುಂಬುರು ನಾರದರು ಹಾಗೂ ಅಷ್ಟದಿಕ್ಪಾಲಕರ ಚಿತ್ರಗಳಿವೆ.

ಮೈಸೂರು ಟ್ರೇಡರ್ಸ್ ಸುರಕ್ಷಾ ಕ್ಷೇಮಾಭಿವೃದ್ಧಿ ಸಂಘದ ಉದ್ಘಾಟನೆ

ಪಾಲಿಕೆ, ಪೊಲೀಸರಿಂದ ಇನ್ನು ಮುಂದೆ ಕಿರುಕುಳ ಆಗದು

ವ್ಯಾಪಾರಿಗಳಿಗೆ ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಭರವಸೆ

ಮೈಸೂರು, ಅ.9(ಆರ್‌ಕೆಬಿ)– ಪ್ಲಾಸ್ಟಿಕ್ ನಿಷೇಧದ ಹೆಸರಿನಲ್ಲಿ ಇನ್ನು ಮುಂದೆ ಪಾಲಿಕೆ ಅಧಿಕಾರಿಗಳಾಗಲೀ, ಪೊಲೀಸ್ ಅಧಿಕಾರಿಗಳಾಗಲೀ ಕಿರುಕುಳ ನೀಡದಂತೆ ನೋಡಿಕೊಳ್ಳುವುದಾಗಿ ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಮೈಸೂರು ವ್ಯಾಪಾರಿಗಳಿಗೆ ಭರವಸೆ ನೀಡಿದರು.



ಮೈಸೂರಿನ ಆಲಮ್ಮ ಛತ್ರದಲ್ಲಿ ಭಾನುವಾರ ಮೈಸೂರು ಟ್ರೇಡರ್ಸ್ ಸುರಕ್ಷಾ ಕ್ಷೇಮಾಭಿವೃದ್ಧಿ ಸಂಘದ ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಅಧಿಕಾರಿಗಳಿಂದ ತಮಗಾಗುತ್ತಿರುವ ಕಿರುಕುಳದಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಮೈಸೂರಿನ ವ್ಯಾಪಾರಿಗಳು ಮೈಸೂರು ಟ್ರೇಡರ್ಸ್ ಸುರಕ್ಷಾ ಕ್ಷೇಮಾಭಿವೃದ್ಧಿ ಸಂಘ ಸ್ಥಾಪಿಸಿಕೊಂಡಿದ್ದು, ಅವರ ಒಗ್ಗಟ್ಟಿನಲ್ಲಿ ಬಲವಿದೆ. ಹಾಗಾಗಿ ಇನ್ನು ಮುಂದೆ ಅಂತಹ ಘಟನೆಗಳು ನಡೆಯುವುದಿಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಮಾತನಾಡಿ, ನಮ್ಮ ಹೋರಾಟಕ್ಕೆ ಸಂಘ ಬೇಕು. ಸಂಘಟನೆಯಲ್ಲಿ ಶಕ್ತಿ ಇರಬೇಕು. ಆ ಶಕ್ತಿ ಟ್ರೇಡರ್ಸ್‌ಗಳ ಸಂಘಟನೆಯಿಂದ ಸಾಧ್ಯವಾಗಲಿದೆ ಎಂದು ಹೇಳಿದರು.

ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಮಾತನಾಡಿ, ಪ್ಲಾಸ್ಟಿಕ್ ಉತ್ಪಾದನೆಯನ್ನೇ ನಿಲ್ಲಿಸಬೇಕು. ಅದನ್ನು ಬಿಟ್ಟು ವ್ಯಾಪಾರಿಗಳಿಗೆ ಕಿರುಕುಳ ಏಕೆ ನೀಡುತ್ತಿದ್ದೀರಿ ಎಂದು ಅಧಿಕಾರಿಗಳ ಕಾರ್ಯವೈಖರಿಯನ್ನು ಪ್ರಶ್ನಿಸಿದರು.

ಮಾಜಿ ಶಾಸಕ ವಾಸು ಮಾತನಾಡಿ, ಸಾಲುಮರದ ತಿಮ್ಮಕ್ಕ ಸಾವಿರಾರು ಗಿಡಗಳನ್ನು ಮರಗಳಾಗಿ ಬೆಳೆಸಿ ದೊಡ್ಡ ಕೆಲಸ ಮಾಡಿದ್ದಾರೆ. ಪದ್ಮಶ್ರೀ ಪುರಸ್ಕೃತರಾದ ಅವರಿಗೆ ಅವರ ಜೀವಿತ ಅವಧಿವರೆಗೂ ಕ್ಯಾಬಿನೆಟ್ ದರ್ಜೆ ಸ್ಥಾನಮಾನ ಇರುತ್ತದೆ. ಅಂತಹ ಹೆಗ್ಗಳಿಕೆಗೆ ಅವರ ಪಾತ್ರರಾಗಿದ್ದಾರೆ. ಅವರ ಸರಳತೆ, ಸೌಜನ್ಯವೇ ಅವರಿಗೆ ಉನ್ನತ ಸ್ಥಾನಮಾನ ದೊರಕಿಸಿ ಕೊಟ್ಟಿದೆ. ಈ ಗೌರವ ಯಾವ ಸಿನಿಮಾ ನಟಿಗಾಗಲೀ, ಯಾವ ಮಹಾರಾಣಿಗೂ ಸಿಗದು ಎಂದರು.


ಇದೇ ವೇಳೆ ಮಹರ್ಷಿ ವಾಲ್ಮೀಕಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಅವರು ಮೈಸೂರು ಟ್ರೇಡರ್ಸ್ ಸುರಕ್ಷಾ ಕ್ಷೇಮಾಭಿವೃದ್ಧಿ ಸಂಘದ ಲೋಗೋ ಬಿಡುಗಡೆ ಮಾಡಿದರು.

ಮೇಯರ್ ಶಿವಕುಮಾರ್ ಮಾತನಾಡಿ, ಪಾಲಿಕೆ ವತಿಯಿಂದ ನೀಡುವ ಲೈಸೆನ್ಸ್ ವಿಚಾರದಲ್ಲಿ ಸಾಕಷ್ಟು ಕಿರಿಕಿರಿ ನನ್ನ ಗಮನಕ್ಕೂ ಬಂದಿದೆ. ತಾವು ಮೇಯರ್ ಆದ ಬಳಿಕ ಆನ್‌ಲೈನ್‌ನಲ್ಲಿ ನಿಮ್ಮೆಲ್ಲರ ಅಂಗಡಿಗಳಲ್ಲೇ ಕುಳಿತು ಆನ್‌ಲೈನ್‌ನಲ್ಲಿ ಶುಲ್ಕ ಕಟ್ಟುವ ರೀತಿಯಲ್ಲಿ ಪಾಲಿಕೆ ಕೆಲವು ಬದಲಾವಣೆಗಳನ್ನು ತರಲಿದೆ ಎಂದರು.

ಮೈಸೂರು ಟ್ರೇಡರ್ಸ್ ಸುರಕ್ಷಣಾ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರೂ ಆದ ಪಾಲಿಕೆ ಮಾಜಿ ಸದಸ್ಯ ಪಿ.ಪ್ರಶಾಂತ್‌ಗೌಡ, ವೃಕ್ಷಮಾತೆ ಸಾಲುಮರದ ತಿಮ್ಮಕ್ಕನವರ ಕಾರ್ಯದರ್ಶಿ ಉಮೇಶ್, ಪಾಲಿಕೆ ಸದಸ್ಯ ಎಂ.ಡಿ.ನಾಗರಾಜು, ಮೈಸೂರು ಗ್ರೈನ್ಸ್ ಮರ್ಚೆಂಟ್ ಅಸೋಸಿಯೇಷನ್ ಕಾರ್ಯದರ್ಶಿ ಆರ್.ಆನಂದ್, ಪೆಟ್ರೋಲಿಯಂ ಡೀಲರ್ಸ್ ಅಸೋಸಿಯೇಷನ್ ಅಧ್ಯಕ್ಷ ದಿನೇಶ್, ಸಂಘದ ಉಪಾಧ್ಯಕ್ಷ ಪ್ರವೀಣ್‌ಕುಮಾರ್, ವಸ್ತಾರಾಂ, ಕಾರ್ಯದರ್ಶಿ ರಾಜೇಶ್‌ಕುಮಾರ್, ಪದಾಧಿಕಾರಿಗಳಾದ ಚಂದ್ರಶೇಖರ್, ಕಾಂತಿಲಾಲ್, ಗಲ್ ಬರಾಮ್, ಶಂಕರಸಿಂಗ್ ಪುರೋಹಿತ್, ಜಿವಾನರಾಮ್ ಚೌದರಿ, ಸಾಗರ್, ಲಾಲರಾಮ್, ತಗರಾಂ ಪಟೇಲ್, ನಗರಾಮ್, ದರ್ಗಸಿಂಗ್, ಪ್ರಕಾಶ್ ಕುಮಾರ್, ಸುದೀಪ್ ಉಪಸ್ಥಿತರಿದ್ದರು.

ಗಂಗರ ಕಾಲದ ದೇವಾಲಯಗಳ ಸಂರಕ್ಷಣೆ ಅನಿವಾರ್ಯ

ಪಾರಂಪರಿಕ ತಜ್ಞ ಡಾ.ಎನ್.ಎಸ್.ರಂಗರಾಜು ಅಭಿಮತ



ಡಾ.ರಂಗರಾಜು

ಮೈಸೂರು,ಅ.9(ಎಂಟಿವೈ)–ರಾಜ್ಯದಲ್ಲಿ ಗಂಗರ ಕಾಲದಲ್ಲಿ ನಿರ್ಮಾಣವಾಗಿರುವ ದೇವಾಲಯಗಳನ್ನು ಸಂರಕ್ಷಿಸುವ ಅನಿವಾರ್ಯತೆ ಇದೆ ಎಂದು ಪಾರಂಪರಿಕ ತಜ್ಞ ಡಾ.ಎನ್.ಎಸ್.ರಂಗರಾಜು ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಮಾನಸಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾದಿಂದ ಆಯೋಜಿಸಿದ್ದ 'ನಾಡಪ್ರಭು ಕೆಂಪೇಗೌಡ ಮತ್ತು ಒಕ್ಕಲಿಗ ರಾಜಮನೆತನದ ಇತಿಹಾಸ' ಕುರಿತ ರಾಜ್ಯಮಟ್ಟದ ವಿಚಾರ ಸಂಕಿರಣದಲ್ಲಿ ಗಂಗ–ಚಾಲುಕ್ಯ–ರಾಷ್ಟ್ರಕೂಟರ ಸಮಕಾಲೀನ ಸಂಬಂಧಗಳು ಎಂಬ ವಿಷಯ ಕುರಿತು ಮಾತನಾಡಿದ ಅವರು, ಗಂಗರ ಸಮಕಾಲಿನ ಆಡಳಿತಗಾರರಾದ ಬಾದಾಮಿ–ಚಾಲುಕ್ಯರ ಕಾಲದ ದೇವಾಲಯಗಳ ಸಂರಕ್ಷಣೆಯಾಗಿದೆ. ಆದರೆ ರಾಜ್ಯದಲ್ಲಿ ಆಳ್ವಿಕೆ ಮಾಡಿದ ಗಂಗರ ಕಾಲದ ತಲಕಾಡು, ಕೋಲಾರ, ಮಂಡ್ಯ, ತುಮಕೂರು ಜಿಲ್ಲೆಯಲ್ಲಿ 400ಕ್ಕೂ ಹೆಚ್ಚು ದೇವಾಲಯಗಳ ಸಂರಕ್ಷಣೆಯಾಗಿಲ್ಲ. ಬಹುತೇಕ ದೇವಾಲಯಗಳು ಸಣ್ಣ ದೇವಾಲಯಗಳಾಗಿದ್ದು, ಶಿಥಿಲಾವಸ್ಥೆ ತಲುಪಿದೆ. ಇವುಗಳನ್ನು ಸ್ಮಾರಕಗಳಾಗಿ ಘೋಷಣೆ ಮಾಡದ ಕಾರಣ ಸಂರಕ್ಷಣೆ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ವಿಷಾದಿಸಿದರು.

ಪರಂಪರೆ ರಕ್ಷಣೆಯಾಗಲಿ: ಯಾವುದೇ ಸ್ಮಾರಕಗಳನ್ನು ಮೂಲ ಸ್ಥಿತಿ ಇರುವಂತೆಯೇ ಅಭಿವೃದ್ಧಿಪಡಿಸಬೇಕು. ಗ್ರಾಮಾಂತರ ಪ್ರದೇಶಗಳಲ್ಲಿರುವ ಗಂಗರ ಕಾಲದ ಬಹಳಷ್ಟು ದೇವಾಲಯಗಳಿಗೆ ಗ್ರಾನೈಟ್, ಸ್ಲಾಬ್‌ಗಳನ್ನು ಹಾಕಿ ದೇವಾಲಯದ ಮೂಲ ಸ್ವರೂಪವನ್ನೇ ಬದಲಿಸಿ ಆಧುನಿಕ ದೇವಾಲಯಗಳಾಗಿ ಬದಲಿಸುತ್ತಿದ್ದಾರೆ. ಇಂತಹ ಅಭಿವೃದ್ಧಿ ಕಾರ್ಯ ನಿಲ್ಲಿಸಬೇಕು ಎಂದು ಒತ್ತಾಯಿಸಿದರು.

ಧರ್ಮಸ್ಥಳದ ಸಂಸ್ಥೆಯವರು ದೇವಾಲಯಗಳ ಸಂರಕ್ಷಣಾ ಕಾರ್ಯವನ್ನು ಮಾದರಿಯಾಗಿ ಮಾಡುತ್ತಿದ್ದಾರೆ. ಇದಕ್ಕೊಂದು ಸಮಿತಿ ಮಾಡಿ, ಅವರಿಂದ ದೇವಾಲಯವನ್ನು ಮುಂದಿನ ದಿನಗಳಲ್ಲಿ ಸುಸ್ಥಿತಿಗಳಲ್ಲಿ ಉಳಿಸಿಕೊಂಡು ಹೋಗುತ್ತೇವೆ ಎಂದು ಬರೆಸಿಕೊಂಡು ದೇವಾಲಯ ಅಭಿವೃದ್ಧಿಗೊಳಿಸಿ ಅವರ ಸುಪರ್ದಿಗೆ ನೀಡುತ್ತಿದ್ದಾರೆ. ಈ ರೀತಿ 200ಕ್ಕೂ ಹೆಚ್ಚು ದೇವಾಲಯ ಜೀರ್ಣೋದ್ಧಾರ ಮಾಡಿದ್ದಾರೆ. ಈ ರೀತಿಯಾಗಿ ಸರಕಾರ ಸಮುದಾಯದ ಸಹಭಾಗಿತ್ವದಲ್ಲಿ ಗಂಗರ ಕಾಲದ ದೇವಾಲಯ ಅಭಿವೃದ್ಧಿಪಡಿಸಬೇಕೆಂದು ತಿಳಿಸಿದರು.

ಸಾಹಿತಿ ಬನ್ನೂರು ಕೆ.ರಾಜು ಮಾತನಾಡಿ, ಇತ್ತೀಚೆಗೆ ನಕಲಿ ಇತಿಹಾಸ ತಜ್ಞರು ಹೆಚ್ಚಾಗಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಇವರು ತಪ್ಪು ಮಾಹಿತಿಗಳನ್ನು ನೀಡುವ ಮೂಲಕ ಜನರ ನಡುವೆ ಬೆಂಕಿ ಹಚ್ಚುವ ಕೆಲಸ ಮಾಡುತ್ತಿದ್ದಾರೆ. ಇವರನ್ನು ನಿಯಂತ್ರಿಸಿ, ನಿಜವಾದ ಇತಿಹಾಸ ತಜ್ಞರ ಮೂಲಕ ಮಾಹಿತಿಗಳನ್ನು ತಿಳಿಸಿ ಸಮಾಜದಲ್ಲಿ ದೀಪ ಹಚ್ಚುವ ಕೆಲಸ ಮಾಡಬೇಕಿದೆ ಎಂದರು. ರಾಮೊಹಳ್ಳಿಯ ಎಲ್‌ಎನ್‌ಆರ್ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಡಾ.ಎಂ.ಜಿ.ಭೈರಪ್ಪ, ಪ್ರೊ.ನಾಗಣ್ಣ ಗೋಷ್ಠಿ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಒಕ್ಕಲಿಗರ ಮಹಾಸಭಾ ರಾಜ್ಯಾಧ್ಯಕ್ಷ ಎನ್.ಬೆಟ್ಟೇಗೌಡ, ಗೌರವ ಸಲಹೆಗಾರ ಡಾ.ಬಿ.ಎನ್.ರವೀಶ್ ಹಾಗೂ ಇತರರು ಇದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಅಯ್ಯರ್ ಶತಕ: ಆಫ್ರಿಕಾ ವಿರುದ್ಧ ಭಾರತಕ್ಕೆ ಭರ್ಜರಿ ಜಯ



ರಾಂಚಿ, ಅ.9– ಶ್ರೇಯಸ್ ಅಯ್ಯರ್ ಶತಕ, ಇಶಾನ್ ಕಿಶನ್ ಅವರ ಬಿರುಸಿನ ಅರ್ಧಶತಕದ ನೆರವಿನಿಂದ ಭಾರತ ದಕ್ಷಿಣ ಆಫ್ರಿಕಾ ವಿರುದ್ಧ ಭಾನುವಾರ ನಡೆದ 2ನೇ ಏಕದಿನ ಪಂದ್ಯದಲ್ಲಿ 7 ವಿಕೆಟ್‌ಗಳ ಭರ್ಜರಿ ಗೆಲುವು ದಾಖಲಿಸಿದೆ. ಆ ಮೂಲಕ 3 ಪಂದ್ಯಗಳ ಏಕದಿನ ಸರಣಿಯಲ್ಲಿ 1–1ರ ಅಂತರದ ಸಮಬಲ ಸಾಧಿಸಿದೆ.

ಇಲ್ಲಿನ ಜೆಎಸ್‌ಸಿಎ ಅಂತರರಾಷ್ಟ್ರೀಯ ಸ್ಟೇಡಿಯಂನಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ದಕ್ಷಿಣ ಆಫ್ರಿಕಾ ನಿಗದಿತ 50 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 278 ರನ್ ಪೇರಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಕ್ವಿಂಟನ್ ಡಿಕಾಕ್ 5, ಜನೆಮನ್ ಮಲನ್ 25 ರನ್ ಗಳಿಸಿ ಬಹುಬೇಗ ನಿರ್ಗಮಿಸಿದರು. ನಂತರ ಜೊತೆಯಾದ ರೀಜಾ ಹೆಂಡ್ರಿಕ್ಸ್ ಹಾಗೂ ಐಡೆನ್ ಮಾರ್ಕ್ರಾಮ್ 3ನೇ ವಿಕೆಟ್‌ಗೆ 129 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಈ ವೇಳೆ ಉತ್ತಮವಾಗಿ ಆಡುತ್ತಿದ್ದ ರೀಜಾ ಹೆಂಡ್ರಿಕ್ಸ್ 74 ರನ್ ಗಳಿಸಿ ಔಟಾದರು. ನಂತರ ಬಂದ ಹೆನ್ರಿಕ್ ಕ್ಲಾಸೆನ್ 30 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಇವರ ಹಿಂದೆಯೇ ಮಾರ್ಕ್ರಮ್ ಕೂಡ 79ರನ್ ಗಳಿಸಿ ನಿರ್ಗಮಿಸಿದರು. ಉಳಿದಂತೆ ಡೇವಿಡ್ ಮಿಲ್ಲರ್ 35, ಪರ್ನೆಲ್ 16 ರನ್ ಗಳಿಸಿದರು. ಭಾರತದ ಪರ ಮೊಹಮ್ಮದ್ ಸಿರಾಜ್ 3, ವಾಷಿಂಗ್‌ಟನ್ ಸುಂದರ್, ಶಾರ್ದೂಲ್ ಠಾಕೂರ್, ಕುಲದೀಪ್ ಯಾದವ್ ಹಾಗೂ ಶಹಬ್ಬಾಜ್ ಅಹಮ್ಮದ್ ತಲಾ ಒಂದೊಂದು ವಿಕೆಟ್ ಪಡೆದರು.

279 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಭಾರತ 45.5 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ ಗುರಿ ತಲುಪಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ನಾಯಕ ಶಿಖರ್ ಧವನ್ 13, ಶುಭ್‌ಮನ್ ಗಿಲ್ 28 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಈ ಹಂತದಲ್ಲಿ 3ನೇ ವಿಕೆಟ್‌ಗೆ ಜೊತೆಯಾದ ಶ್ರೇಯಸ್ ಅಯ್ಯರ್ ಹಾಗೂ ಇಶಾನ್ ಕಿಶಾನ್ 161 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡದ ಗೆಲುವಿನ ರೂವಾರಿಗಳಾದರು. ಆಫ್ರಿಕಾ ಬೌಲರ್‌ಗಳನ್ನು ದಂಡಿಸಿದ ಇಶಾನ್ ಕಿಶನ್ 84 ಎಸೆತಗಳಲ್ಲಿ 7 ಸಿಕ್ಸರ್ 4 ಬೌಂಡರಿ ಒಳಗೊಂಡ 93 ರನ್ ಗಳಿಸಿ ನಿರ್ಗಮಿಸಿದರೇ, ಶ್ರೇಯಸ್ ಅಯ್ಯರ್ 111 ಎಸೆತಗಳಲ್ಲಿ 15 ಬೌಂಡರಿ ಒಳಗೊಂಡ 113 ರನ್ ಗಳಿಸಿ ಅಜೇಯರಾಗಿ ಉಳಿದರು. ಉಳಿದಂತೆ ಸಂಜು ಸ್ಯಾಮ್ಸನ್ 30 ರನ್ ಗಳಿಸಿದರು. ಆಫ್ರಿಕಾ ಪರ ಜಾರ್ನ್ ಫಾರ್ಚುಯಿನ್, ವೇಯ್ನ್ ಪಾರ್ನೆಲ್ ಹಾಗೂ ಕಗಿಸೋ ರಬಾಡ ತಲಾ ಒಂದೊಂದು ವಿಕೆಟ್ ಪಡೆದರು. ಭಾರತದ ಪರ ಶ್ರೇಯಸ್ ಅಯ್ಯರ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಸರಣಿಯ ಅಂತಿಮ ಪಂದ್ಯ ಅ.11ರಂದು ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆಯಲಿದೆ. ಅಲ್ಲಿ ಗೆದ್ದ ತಂಡಕ್ಕೆ ಸರಣಿ ಪಾಲಾಗಲಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ಮೈಸೂರಿನ ಸುಪ್ರಸಿದ್ಧ ಕೊಲ್ಹಾಪುರಿ ಭೇಲ್ ನಂಜುಮಳಿಗೆ ಸರ್ಕಲ್‌ನಲ್ಲಿ ಇರುವ ಅಂಗಡಿಗೆ ಕೆಲಸ ಮಾಡಲು ಹುಡುಗರು ಅಥವಾ ಹುಡುಗಿಯರು ಬೇಕಾಗಿದ್ದಾರೆ. ಅನುಭವ ಉಳ್ಳವರಿಗೆ ಆದ್ಯತೆ ನೀಡಲಾಗುವುದು. ಸಂಪರ್ಕಿಸಿ.
Wanted Same as above Charts Center Kolhapuri Bhel - Male / Female. Contact:
9482000536

ಸೈಟುಗಳು ಮಾರಾಟಕ್ಕಿದೆ
ರಿಯಾಯಿತಿ ದರದಲ್ಲಿ ಸೈಟುಗಳು ಮಾರಾಟಕ್ಕಿದೆ. ಲಲಿತಾದ್ರಿಪುರ ಸಮೀಪದಲ್ಲಿ. ಸಂಪರ್ಕಿಸಿ:
6360633036

ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
9606871188

ಶ್ರೀ ಗೌರಿಶಂಕರ ಟ್ರಾವೆಲ್ಸ್
1-11-22 (8 ದಿನ) ದೆಹಲಿ, ಆಗ್ರಾ, ಪ್ರಯಾಗ್ ರಾಜ್, ಕಾಶಿ, ಗಯಾ, ಅಯೋಧ್ಯ ಇತ್ಯಾದಿ.
10-11-22 (4 ದಿನ) ಬಾಂಬೆ, ಶಿರಡಿ, ನಾಸಿಕ್ 3 ಜ್ಯೋತಿರ್ಲಿಂಗ, ಎಲ್ಲೋರ.
24-12-22 (6 ದಿನ) ಗುರುವಾಯೂರು, ಮುನ್ನಾರ್, ತ್ರಿವೇಂಡಂ, ಕೊಚ್ಚಿ, ಆಲಪ್ಪಿ ಇತ್ಯಾದಿ.
ವಿಮಾನ / ಬಸ್ / ಊಟ / ರೂಂ
9620002114

REQUIRED
FEMALE TELE CALLERS - 10 Nos.
Qualification: SSLC & ABOVE
LANGUAGES : KANNADA
With additional any one language ENGLISH, HINDI, TAMIL, TELUGU, MALAYALAM..
Salary 10k to 25K + incentives.
Mob: 9964885548

MOBILE ರಿಪೇರಿ ಟ್ರೈನಿಂಗ್
18 ವರ್ಷದಿಂದ Mobile, Electrical, Electronics ಮತ್ತು Computer Hardware ರಿಪೇರಿ ಹೇಳಿಕೊಡುತ್ತಿರುವ ಏಕೈಕ ಸಂಸ್ಥೆಯಲ್ಲಿ ಶೀಘ್ರದಲ್ಲಿ ಹೊಸ ಬ್ಯಾಚ್ ಪ್ರಾರಂಭ. ಯಾವುದೇ ವಿದ್ಯಾರ್ಹತೆ ಹಾಗೂ ವಯೋಮಿತಿಯ ಅಗತ್ಯವಿಲ್ಲ. PG ವ್ಯವಸ್ಥೆಯು ಇರುತ್ತದೆ. ಕೂಡಲೇ ಸಂಪರ್ಕಿಸಿ:
SMM Institute,
ಶ್ರೀ ವೀರಭದ್ರೇಶ್ವರಸ್ವಾಮಿ ದೇವಸ್ಥಾನದ ಎದುರು, ದಳವಾಯಿ ಶಾಲೆರು ರಸ್ತೆ, ಕೆ.ಆರ್.ಮೊಹಲ್ಲಾ ಮೈಸೂರು.
Mob.: 9986926101

ಬೇಕಾಗಿದ್ದಾರೆ
ಜಟ್ಟಿಹುಂಡಿ, ಜೆ.ಪಿ.ನಗರ, ವಿದ್ಯಾರಣ್ಯಪುರಂ ಹಾಗೂ ಮೈಸೂರು ಸುತ್ತಮುತ್ತ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಉಚಿತ ಊಟ ಹಾಗೂ ಆಕರ್ಷಕ ಸಂಬಳವಿರುತ್ತದೆ ಮತ್ತು ಹೋಟೆಲ್‌ಗೆ ರೂಂ ಬಾಯ್ ಬೇಕಾಗಿದ್ದಾರೆ.
9880116412
6366119767

SITE FOR SALE
29x44
East South Corner, Magan Flower Homes, Bugathagalli Main Road, attached to Vasanthanagar
9845035818

ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ
ಹೆಬ್ಬಾಳ್, ಮೇಟಗಳ್ಳಿ, ಕುಂಬಾರ್‌ಕೊಪ್ಪಲು, ವಿಕ್ರಾಂತ್, ಒಂಟಿಕೊಪ್ಪಲಿನಲ್ಲಿ
7th, SSLC, Salary- 10,000/- 12 (hrs)+ESI, PF
7090303144
9036744955

ಕೆಲಸಕ್ಕೆ ಬೇಕಾಗಿದ್ದಾರೆ
ಒಂಟಿಕೊಪ್ಪಲಿನಲ್ಲಿ ಬಣ್ಣದ ಅಂಗಡಿಯಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ.
7019022402
9916933051

GOLD COMPANY
ಗಿರವಿ ಚಿನ್ನಾಭರಣ ಖರೀದಿ
ಒಂದು ಗ್ರಾಂ ಚಿನ್ನಕ್ಕೆ 5100
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಳ್ಳುತ್ತೇವೆ ಕೂಡಲೇ ಸಂಪರ್ಕಿಸಿ – (T&C)
9964522225

ಮಾರಾಟಕ್ಕೆ ಇದೆ
1584 Sq.ft ಕಾರ್ನರ್, ಸೆಮಿ ಕಮರ್ಷಿಯಲ್ MUDA ಸೈಟ್ ರಿಂಗ್ ರೋಡ್ ಹತ್ತಿರ, ವಿಜಯನಗರ 4ನೇ ಹಂತ, ಆಸಕ್ತರು ಸಂಪರ್ಕಿಸಿ: ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
8310151875

WANTED
Female Experienced Office Assistant, Fluency in English Smart Hair Fixing, Anikethana Road, Kuvepunagar. Contact:
8792945515

Sudarshan Saur
SOLAR WATER HEATER
ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಬೇಕಾಗಿದ್ದಾರೆ SUNBIZ SOLUTIONS
ಕರ್ನಾಟಕದಾದ್ಯಂತ ಬ್ಯಾಂಕ್ ಪ್ರಕ್ರಿಯೆಗಾಗಿ ನಾವು ಟೆಲಿಕಾಲರ್ ಮತ್ತು ಫೀಲ್ಡ್ ಎಕ್ಸಿಕ್ಯೂಟೀವ್ ಅಭ್ಯರ್ಥಿಯನ್ನು ತುರ್ತಾಗಿ ನೇಮಿಸಿಕೊಳ್ಳುತ್ತಿದ್ದೇವೆ. (ಫೀಲ್ಡ್ ಎಕ್ಸಿಕ್ಯೂಟೀವ್ 2 ವೀಲರ್ ಹೊಂದಿರಬೇಕು). ಫ್ರೆಶರ್ ಮತ್ತು ಅನುಭವಿ ಇಬ್ಬರಿಗೂ ಸ್ವಾಗತ. ಆಕರ್ಷಕ ಪ್ರೋತ್ಸಾಹ ಧನವನ್ನು ಗಳಿಸಲು ಮತ್ತು ಕಲಿಯಲು ನಮ್ಮ ತಂಡಕ್ಕೆ ಸೇರಿಕೊಳ್ಳಿ, ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ. ದೀಕ್ಷಿತ್:
(HR)9513935123 / 9513935117

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರ್ ನಾಲ್ಕರ ದೈವ ಚೌಡಿಕ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಬಾಯಿ ವಿಳಾಸ ಸುಬರ್ಬ್ ಬಸ್‌ಸ್ಟಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಜಾಗ ಬೇಕಾಗಿದೆ
ಜ್ಯೋತಿವ್ ಇವಿ ಚಾರ್ಜಿಂಗ್ ಸ್ಟೇಷನ್ ಸ್ಥಾಪನೆಗೆ ಅಗತ್ಯವಿರುವ ಭೂಮಿ / ಪ್ಲಾಟ್ / ಕೃಷಿ ಭೂಮಿ / ವಾಣಿಜ್ಯ ಮತ್ತು ವಸತಿ ಆಸ್ತಿ, ಮುಂಗಡ + ಬಾಡಿಗೆ + ಸರ್ಕಾರದ ಸಬ್ಸಿಡಿ ಪ್ರತಿ ಇವಿ ನಿಲ್ದಾಣ ಸ್ಥಾಪನೆಗೆ 5 ರಿಂದ 10 ಲಕ್ಷ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
Mob: 9711355380

Join ASFT Fashion Design Courses
* Certification Course
* Diploma Course
* Advance Diploma Course
Alpha School of Fashion Technology & Interior Design
AT: SRIRANPURA, GOKULAM, UDAYAGIRI, MYSORE
Mob: 7829937469, 9901803394

ಬೋಳು ತಲೆಯ ಸಮಸ್ಯೆಯೇ?

ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ವಾಭಾವಿಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 BANGALORE 9343142258

ಮಳಿಗೆಗಳು /ಮನೆ ಬಾಡಿಗೆಗಿದೆ
1) 26x26 ಅಳತೆಯುಳ್ಳ RCC ಕನಕನಗರ.
2) 9x15 ಅಳತೆಯುಳ್ಳ RCC ಕನಕನಗರ. ನೆಲ ಮಳಿಗೆಗಳು ಬಾಡಿಗೆಗಿದೆ.
3) 2 BHK ಮನೆ ಉತ್ತರದಿಕ್ಕು M.K. ಹಳ್ಳಿ To ಬೆಳವಾಡಿ. ಮುಖ್ಯರಸ್ತೆ Near ವಿಜಯನಗರ 4ನೇ ಹಂತ ಹತ್ತಿರ, ಮೈಸೂರು–26
9900125264
9845122380

ಮೈಸೂರು ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ವಧು ವರರು ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ. ಮದುವೆ ವಿಳಂಬವಾದಲ್ಲಿ ಪರಿಹಾರ ಶತಸಿದ್ಧ.
ಪಂಡಿತ್ ಡಾ.ಗುರೂಜಿ
9449408551
6361740552

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್ : SSLC / PUC, Age: 35 years to 50 years, ಸ್ಥಳ: ಮೈಸೂರು ಮತ್ತು ಚಿನಕುರಳಿ. ESI & PF ಸೌಲಭ್ಯವಿರುತ್ತದೆ
9739199355
9739166772

ಸುವರ್ಣಾವಕಾಶ
ಕನ್ನಡ ಮತ್ತು ಇಂಗ್ಲೀಷ್ ಓದಲು ಬರೆಯಲು ಬರುವ ಯುವಕ / ಯುವತಿಯರಿಗೆ ವಿದ್ಯಾರ್ಥಿಗಳಿಗೆ ಗೃಹಿಣಿಯರಿಗೆ ಮನೆಯಲ್ಲಿಯೇ ಕುಳಿತು ಫಾರಂನಲ್ಲಿ ಅಂಕಿ ತುಂಬುವ ಹಾಗೂ ಬುಕ್ ಬರೆಯುವ ಕೆಲಸ ತಿಂಗಳಿಗೆ 16,000/– ರಿಂದ 18,000/– ಸಂಪಾದಿಸಿ. (ಕೊರಿಯರ್ ಸೌಲಭ್ಯವಿದೆ)
8747978990
8123797899

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ROY'S MAHAL
2BHK & 3BHK FLATS AVAILABLE FOR RENT
Ph : 8217052668 / 8494908022

DRIVER WANTED
Contact:
9741428821,
0821-2434111

ಉಚಿತ ಬ್ಯೂಟಿಷಿಯನ್ ತರಬೇತಿ
ಮೇಘನಾ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಉಚಿತ ಬ್ಯೂಟಿಷಿಯನ್ ತರಬೇತಿ ನೀಡಲಾಗುವುದು.
ಸಂಪರ್ಕಿಸಿ: 8073783293
ಕುವೆಂಪುನಗರ

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000.
9740733021 / 9535028750

ತಕ್ಷಣ ಬೇಕಾಗಿದ್ದಾರೆ
ಮೈಸೂರು – ಕೊಡಗು – ಮಂಗಳೂರು ಮಾರ್ಗಗಳಲ್ಲಿ ಸಂಚರಿಸುವ ಲಾರಿಗಳಲ್ಲಿ ಪಾರ್ಸಲ್ ವಿತರಿಸಲು ದೃಢಕಾಯ ಯುವಕರು ಬೇಕಾಗಿದ್ದಾರೆ. 1) ಡೆಲಿವರಿ ಬಾಯ್. 10,000/–, 2) ಹೆವಿ ಡ್ರೈವರ್. 18,000/–, 3) ಟೆಂಪೋ ಡ್ರೈವರ್ 16,000/–. ಸಂಪರ್ಕಿಸಿ:
9740408488

WANTED
Service Engineer
BE / Diploma / ITI / Mechanical KENT RO Water Purifier, Authorised Service Center / Home Appliances.
Telecaller / Office Work - Female
9900237315, 9845963421

HOUSE FOR SALE
25x30, South Face 807, HUDCO, Kuvempunagar (Near Bus Depot).
9845352952, 9481066909

ಮನೆ ಸಾಲ
ಜನಮಿತ್ರ ಫಿನ್ ಸರ್ವ್ ಪ್ರೈ.ಲಿ.
#2921/ಎ, ಸರಸ್ವತಿಪುರಂ, ಮೈಸೂರು ನಾವು ರೆವಿನ್ಯೂ ಮನೆಗಳಿಗೆ ಮಾರ್ಟ್‌ಗೇಜ್ ಲೋನ್ ಮಾಡಿಕೊಡುತ್ತೇವೆ. ಈ ಕೆಳಗಿನ ಸ್ಥಳಗಳಿಗೆ ರಾಘವೇಂದ್ರ ನಗರ, ಕನಕಗಿರಿ, ಜನತಾನಗರ, ಲೋಕನಾಯಕ ನಗರ, ಗಣೇಶ್ ನಗರ, ಮಹದೇವ್‌ಪುರ. Loan Amount 5,00,000 to 20,00,000. ಸಂಪರ್ಕಿಸಿ:
8088647887

Front Office Manager & Room Boys
Front Office Manager or Receptionist required for a lodge.
Hotel Dewans Residency Opp. Mangalore Garage, Dewans Road, Devaraja Mohalla, Mysore.
Mob: 9845155940

ಬೇಕಾಗಿದೆ
600-900 Sq. Feet ಸೈಟ್ / ಹಳೆಯ ಮನೆ ಕುವೆಂಪುನಗರ ಸುತ್ತಮುತ್ತ. ಸಂಪರ್ಕಿಸಿ:
8904311337

ಬೇಕಾಗಿದ್ದಾರೆ
1) ಹೌಸ್ ಕೀಪರ್ ಪುರುಷರು – 5 ಮಂದಿ, ಮೈಸೂರಿನ ಸುತ್ತಮುತ್ತ.
2) ಸೆಕ್ಯೂರಿಟಿ ಗಾರ್ಡ್‌ಗಳು – 10 ಮಂದಿ 1) ಗುಂಡ್ಲುಪೇಟೆ, 2) ಚಾಮರಾಜನಗರ, 3) ನಜರ್‌ಬಾದ್, 4) ಬಲ್ಲಾಳ್ ಸರ್ಕಲ್, 5) ಹೆಬ್ಬಾಳ್ ಸುತ್ತಮುತ್ತ, 6) ಮಂಟಿ (ಕೆ.ಆರ್.ಎಸ್. ರಸ್ತೆ). ಆಸಕ್ತರು ಸಂಪರ್ಕಿಸಿ:
9686422400 / 9242406261

HOUSE FOR SALE
20x40, 3BHK, Duplex House, SE/F Door, RMPR Layout, Near Hootagalli KHB Colony. Brokers Excuse
Contact:
9353199792

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ.
7795560970

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ವಾಸ್ತು ಪ್ರಕಾರ
ಹೊಸದಾಗಿ ಮನೆ ಮತ್ತು ಆಲ್ಟ್ರೇಷನ್ ಕೆಲಸ / ಕನ್‌ಸ್ಟ್ರಕ್ಷನ್ ಮಾಡಿ ಕೊಡಲಾಗುತ್ತದೆ.
ಒಂದು ಚದರಕ್ಕೆ 1,60,000/–
*ಷರತ್ತು ಅನ್ವಯ
ಸ್ವಾಮಿ ಎಂ. ಸಿವಿಲ್ ಕಂಟ್ರಾಕ್ಟರ್
9945442361
9380885787

N N FASHION COURSE
ಕ್ಲಾಸ್ ಫಾರ್ ಹ್ಯಾಂಡ್ ವರ್ಕ್ – 5000/– (Fashion Designing)
ಬ್ಯೂಟಿಷನ್ ಕೋರ್ಸ್ – 5000/–
ಕ್ರೋಶ ವರ್ಕ್ – 1500/–, ಸಾರೀ ಕುಚ್ – 800/–
Two Wheeler Driving Class - 2000, One day offer with Materials
9632600712

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಏರಿಯಾ, GRS ಫ್ಯಾಂಟಸಿ ಪಾರ್ಕ್ ಹತ್ತಿರ 3 Shift ಕೆಲಸ ಮಾಡುವ 45 ವರ್ಷ ವಯಸ್ಸಿನ 2 ವರ್ಷ ಅನುಭವ ಮತ್ತು SSLC ಉತ್ತೀರ್ಣರಾಗಿರುವ ಪುರುಷ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. 8 hr Duty ವೇತನ ಮಾಹಿಕ 14,500/– ರೂ.ಗಳು ಸಂಪರ್ಕಿಸಿ:
9731976148

ಬೇಕಾಗಿದ್ದಾರೆ
ವಯಸ್ಸು 18 ರಿಂದ 45, ಪುರುಷರು ಬೇಕಾಗಿದ್ದಾರೆ. ಕೆಲಸ : ಫ್ಯಾಕ್ಟರಿಯಲ್ಲಿ ಹೆಲ್ಪರ್ಸ್, ಸಂಬಳ: 14,500 ESI, PF ಒಳಗೊಂಡು, ಸ್ಥಳ: CIPET ಕಾಲೇಜ್ ಹತ್ತಿರ ಮೇಟಗಳ್ಳಿ, ಮೈಸೂರು. Week off ಹಾಗೂ 3 Shift ಇರುತ್ತದೆ. ಹೆಚ್ಚಿನ ಮಾಹಿತಿಯನ್ನು ಸ್ಥಳಕ್ಕೆ ಬಂದು ಪಡೆದುಕೊಳ್ಳತಕ್ಕದ್ದು.
9986874584

ಕೆಲಸಕ್ಕೆ ಬೇಕಾಗಿದ್ದಾರೆ
ಮೇಟಗಳ್ಳಿ CIPET ಕಾಲೇಜ್ ಹತ್ತಿರವಿರುವ ಅನಿಮಲ್ ಫೀಡ್ ಕಂಪನಿಗೆ 18 ರಿಂದ 45 ವರ್ಷದ ಒಳಗಿನ ಪುರುಷರು ಕೆಲಸಕ್ಕೆ ಬೇಕಾಗಿದ್ದಾರೆ. ವಿದ್ಯಾರ್ಹತೆ ಅವಶ್ಯಕತೆ ಇಲ್ಲ. ಸಂಬಳ: 14,000/–, ಕೂಡಲೇ ಸಂಪರ್ಕಿಸಿ: ಚಾಮುಂಡೇಶ್ವರಿ ಎಂಟರ್ ಪ್ರೈಸಸ್. ಲೋಕೇಶ್
8722844236

WANTED
* Computer Faculty for Franchisee of Keonics - 1/2 yrs Exp.,
* Cashier with Computer Knowledge - 1/2 yrs Exp.
* Computer Hardware / System Admin 1/2 yrs Exp.
9008027304
9008027300

SITES FOR SALE
30x40 Sites for Sale in Mysore. Attached Ring Road. Contact:
7760591291

ತಕ್ಷಣ ಬೇಕಾಗಿದ್ದಾರೆ
ಮೈಸೂರು, ನಂಜನಗೂಡು, ಕಡಕೊಳ, ಹೆಬ್ಬಾಳ್, ಹೂಟಗಳ್ಳಿ, ಮೇಟಗಳ್ಳಿ, ಮುಂತಾದ ಸ್ಥಳದಲ್ಲಿರುವ ಪ್ರಸಿದ್ಧ ಕಂಪನಿ, ಆಫೀಸ್ ಮತ್ತು ಶೋರೂಂಗಳಿಗೆ 7th, SSLC, PUC, ITI, Diploma, Any Degree, Pass / Fail ಆದವರಿಗೆ Packing, Helper, Checking, Maintenance, Billing, Front Office, Telephone attender ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ: 14,000–39000 (ESI+PF+OT) ಸೇರಿ. ಸಂಪರ್ಕಿಸಿ:
7676939277 / 9353753194

ಸೆಕ್ಯೂರಿಟಿ ಬೇಕಾಗಿದ್ದಾರೆ
ಗಾರ್ಡ್ ಮತ್ತು ಸೂಪರ್‌ವೈಸರ್ 8 ಗಂಟೆ ಮತ್ತು 12 ಗಂಟೆ ಕೆಲಸಕ್ಕೆ ಬೇಕಾಗಿದ್ದಾರೆ. ವಯಸ್ಸು: 25 ರಿಂದ 50 ರ ಒಳಗೆ ESI, PF, EL, NFH, BONUS, Insurance ದೊರೆಯುತ್ತದೆ. 3 Set ಯೂನಿಫಾರ್ಮ್ ಉಚಿತ, ಕಾರ್ಯನಿರ್ವಹಿಸುವ ಸ್ಥಳ: ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ, ಮೈಸೂರು.
9538014456 / 9538886654
Qualification: minimum SSLC Passed out

ಸೈಟು ಮಾರಾಟಕ್ಕಿದೆ
ಫಾರಂ ನಂ–3 ಖಾತಾ ಹೊಂದಿರುವ ನಿವೇಶನ, ದಿಕ್ಕು – ದಕ್ಷಿಣ, ಅಳತೆ 36x54 ಶ್ರೀ ದೇವೇಗೌಡ ಸರ್ಕಲ್ ಹತ್ತಿರ, ಮೈಸೂರು – ಬನ್ನೂರು ರಸ್ತೆ, ಮೈಸೂರು. ಸಂಪರ್ಕಿಸಿ:
9113991509
8123776343

ಬೇಕಾಗಿದ್ದಾರೆ
ಅಡುಗೆ ಸಹಾಯಕ್ಕಾಗಿ GSB ಗೌಡ ಸರಸ್ವತ ಸಮಾಜದ ಮಹಿಳೆ ಬೇಕಾಗಿದ್ದಾರೆ. ಸ್ಥಳ: ಜಯನಗರ, ಮೈಸೂರು.
9482501467

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್, ವೇತನ: 10,000 ರಿಂದ 11,000, ಸ್ಥಳ: ಆಲನಹಳ್ಳಿ, ಸಿದ್ದಾರ್ಥ ಲೇಔಟ್, ದೇವೇಗೌಡ ಸರ್ಕಲ್, ಬನ್ನಿಮಂಟಪ & ಮೈಸೂರು ಸಿಟಿ, ವಯಸ್ಸು 25 ರಿಂದ 58
9741513225 / 9741513227

FLAT FOR RENT
3 BHK , East facing, 1700 Sft , 4th floor, Semi furnished, and another new Flat for Sale, 1200 Sft, Ground floor, 3 BHK, North facing - Both in same Apartment, Posh location at Vontikoppal, Mysore - Both with Car parking /amenities. Contact
9480308402 / 9004470423

ಸಾಲ ಸಾಲ ಸಾಲ
10 ಲಕ್ಷದಿಂದ 100 ಲಕ್ಷದವರೆಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರದಿಂದ Subsidy Loan (30%-50%) ರವರೆಗೆ ಸಾಲ ಸೌಲಭ್ಯ ಒದಗಿಸಿ ಕೊಡಲಾಗುವುದು ಹಳೆ Loan ಗೆ Topup Loan ಮತ್ತು Project Report ಹಾಗೂ Doucments, Paper work ಎಲ್ಲಾ ಮಾಡಿಕೊಡಲಾಗುವುದು. ಸಂಪರ್ಕಿಸಿ:
7809978088

EXCHANGE OFFER
From ORRICT FACTORY SALES
SHREE SIDDAGANGA FURNITURES
Exchange your old Sofa to Brand New Rosewood and Leather Luxury Sofa and your old Sofa are repaired here. Siddartha Layout, Near Sangeetha Corner, Near Devegowda Circle, Mysuru.
9380775646 / 8217582103

ಬೇಕಾಗಿದ್ದಾರೆ
ವಯಸ್ಸಾದ ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಸೇವಾ ಮನೋಭಾವವುಳ್ಳ ಯುವಕ / ಯುವತಿಯರು ವಿಧವೆ / ವಿಚ್ಛೇದಿತೆಯರು ಹೋಂ ಕೇರ್ ಕೆಲಸಕ್ಕೆ ಬೇಕಾಗಿದ್ದಾರೆ. (ಯಾವುದೇ ರೀತಿ ಶುಲ್ಕ ಇರುವುದಿಲ್ಲ) ಆಧಾರ್ ಕಾರ್ಡ್ ಕಡ್ಡಾಯ ಕೂಡಲೇ ಸಂಪರ್ಕಿಸಿ: ಸಂಬಳ: 10,000 ರಿಂದ 15,000/– ತನಕ
9035324777 / 9035051222
7259306665

FOR LEASE OR RENT
Ground Floor 3BHK (22 Lakhs) & 1st Floor 2BHK (12.50 Lakshs) 'B' Block, 21st Main, Road, Vijaya Nagar 3rd Stage, Mysore.
7795316379
8453878567

WANTED
Sales Girls / Boys Full Time / Part Time for a Inner -wear Showroom
Contact in person
Javers
#109, Mezzanine Floor, D.Devaraj Urs Road, Next to Raghvendra Bakery, Mysore.

WANTED
1) Senior Front office executive (15k to 18k)
2) Housekeeping (male) (12k to 13k)
3) security guard
For THE QUORUM HOTEL #2257/1 Vinobha Road, Near Kalamandhir, Mysore
Contact:-
9620274629 / 9620274630

ಬೇಕಾಗಿದ್ದಾರೆ
ಕ್ಯಾಂಟೀನ್‌ನಲ್ಲಿ ಕೆಲಸ ಮಾಡುವವರು, ಟೀ ಮಾಡುವವರು, ಚಪಾತಿ ಮಾಡುವವರು, ಅಡುಗೆ ಮಾಡುವವರು, ಅಡುಗೆ ಸಹಾಯಕರು, ಕ್ಯಾಂಟೀನ್‌ನಲ್ಲಿ ಕ್ಲೀನಿಂಗ್ ಮಾಡುವವರು. ಮಹಿಳೆಯರು, ಹುಡುಗರು ಬೇಕಾಗಿದ್ದಾರೆ.
7892573043

ಷೇರು ಮಾರ್ಕೆಟ್ ಟ್ರೇಡಿಂಗ್
ಮನೆಯಲ್ಲೇ ಕುಳಿತು ಟ್ರೇಡಿಂಗ್ ಮಾಡುವ ಮೂಲಕ 1500–2000 ಸಂಪಾದಿಸಿ.
Self ಟ್ರೇಡಿಂಗ್ ಮಾಡುವುದನ್ನು ಹೇಳಿಕೊಡುತ್ತೇವೆ. (Trading Tips Available) Do Not Depends on one Source of income
9945667806

ಬೇಕಾಗಿದ್ದಾರೆ
ಟೆಲಿಕಾಲರ್ ಹಾಗೂ ರಿಸೆಪ್ಷನಿಸ್ಟ್ ಕೂಡಲೇ ಬೇಕಾಗಿದ್ದಾರೆ. ಐಶ್ವರ್ಯ ಕಂಫರ್ಟ್ಸ್, ಹಿನಕಲ್ ಮುಖ್ಯ ರಸ್ತೆ, ಮೈಸೂರು ಸಂಪರ್ಕಿಸಿ –: ಸಂಜನಾ
8867035718

ಫಂಕ್ಷನ್ ಸೀರೆ ಉಚಿತ
MR ಗೋಲ್ಡ್ ಹಳೆಯ BT ರೈಸ್‌ನ್ನು M.R.P. ಬೆಲೆಯಲ್ಲಿ ಖರೀದಿಸಿದರೆ, ಮದುವೆ ಮತ್ತು ಇತರ ಸಮಾರಂಭಕ್ಕೆ ಧರಿಸುವ ಸೀರೆಯನ್ನು ಉಚಿತವಾಗಿ ಪಡೆಯಿರಿ ರೈಸ್‌ನ M.R.P. ಬೆಲೆ1820/–ಮಾತ್ರ
ಶಿವರಾಂಪೇಟೆಯ ಮೋರ್ ಮೆಗಾಸ್ಟೋರ್ ಎದುರಿನ ರಸ್ತೆ
9206470833 ಮೈಸೂರು

ಬಾಡಿಗೆಗೆ
ಮೈಸೂರು ಹಿನಕಲ್, ನನ್ನೇಶ್ವರ ದೇವಸ್ಥಾನ, #1312/1, ಶ್ರೀ ಲಕ್ಷ್ಮೀ ಆರ್ಕೇಡ್‌ನಲ್ಲಿ 60x45 ನಿರ್ಮಿಸಿರುವ 1ನೇ ಮಹಡಿಯಲ್ಲಿ ಕಛೇರಿಗಳು, ಬ್ಯಾಂಕ್‌ಗಳು, ಸಾಫ್ಟ್‌ವೇರ್ ಕಂಪನಿಗಳಿಗೆ ಅನುಕೂಲವಾಗುವಂತ ಒಳಾಂಗಣವನ್ನು ನಿರ್ಮಿಸಲಾಗಿರುತ್ತೆ.
9036103296
9945424797

ತಕ್ಷಣ ಬೇಕಾಗಿದ್ದಾರೆ
18 ರಿಂದ 24 ವಯಸ್ಸಿನ ಯುವಕರು ತಕ್ಷಣ ಬೇಕಾಗಿದ್ದಾರೆ. ಕೆಲಸ: ಟೆಲಿಕಾಲಿಂಗ್ ಆಫೀಸ್ ಕೆಲಸ, ಸ್ಥಳ: ಹಂಪಿ ಸರ್ಕಲ್, ಸಂಬಳ: 7000 + Incentive. ಹೆಚ್ಚಿನ ಆದ್ಯತೆ: ಸೂರ್ಯ ಬೇಕರಿ, ಹೆಬ್ಬಾಳ್, ಕಾವೇರಿ ಸರ್ಕಲ್, ಕೆ.ಡಿ.ಸರ್ಕಲ್, ಅಭಿಷೇಕ್ ಸರ್ಕಲ್, ಕರೆ ಮಾಡಿ.
9008793561

HOUSE FOR LEASE
20x30 House for Lease in Vasanthnagar, Mysore. Address: 308, 4th Main, Behind Vidya Vikas College, Mysore-570002
8310427773

WANTED
Field Officer - 02
Female Office Assistant-01
Above PUC, Near by Bannimantap will be preferred. to work in Pvt. Security Agency. Contact:
9741616826

ನಿವೇಶನಗಳು ಮಾರಾಟಕ್ಕಿದೆ
ಮೈಸೂರಿನಿಂದ ಕೇವಲ 7 ಕಿ.ಮೀ ದೂರದಲ್ಲಿ ಮುಡಾದಿಂದ ಅನುಮೋದನೆಗೊಂಡ 20x30 ನಿವೇಶನಗಳು ಮಾರಾಟಕ್ಕಿದೆ.
8660847776

ತಕ್ಷಣ ಬೇಕಾಗಿದ್ದಾರೆ
ಮೈಸೂರಿನಲ್ಲಿ ಹೊಸದಾಗಿ ಆರಂಭವಾಗಿರುವ ಕಂಪನಿಯಲ್ಲಿ ಟೆಲಿಕಾಲಿಂಗ್ ಮಾಡಲು ಯುವತಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC, PUC, Diploma, Any Degree, ವಯೋಮಿತಿ: 18 ರಿಂದ 28 ವರ್ಷದ ಒಳಗೆ. ಸಂಪರ್ಕಿಸಿ.
7899369558
7338009488

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ ಸೋಮವಾರ 10 ಅಕ್ಟೋಬರ್ 2022

ಮಹರ್ಷಿ ವಾಲ್ಮೀಕಿ ತತ್ವಗಳು ಜಗತ್ತಿಗೆ ಆದರ್ಶ



ಮಂಡ್ಯ,ಅ.9– ಶ್ರೀ ಮಹರ್ಷಿ ವಾಲ್ಮೀಕಿ ರಾಮಾಯಣದಲ್ಲಿ ನೀಡಿರುವ ಆದರ್ಶಗಳು ದೇಶಕ್ಕೆ ಮಾತ್ರ ಸೀಮಿತವಲ್ಲ, ಅದು ಕಾಲಾತೀತವಾಗಿ, ದೇಶ ಹಾಗೂ ವಿಶ್ವದ ಜನರಿಗೂ ಅನ್ವಯವಾಗುತ್ತದೆ. ಶ್ರೀ ಮಹರ್ಷಿ ವಾಲ್ಮೀಕಿ ಅವರು ಜಗತ್ತಿಗೆ ಆದರ್ಶ ಪ್ರಾಯರು ಎಂದು ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್‌ನಾಗರಾಜು ತಿಳಿಸಿದರು.

ಜಿಲ್ಲಾ ಪಂಚಾಯತ್ ಕಾವೇರಿ ಸಭಾಂಗಣದಲ್ಲಿ ನಡೆದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಒಬ್ಬ ಗುರು ಒಂದು ಸಮುದಾಯಕ್ಕೆ ಇದ್ದರೆ ಆ ಸಮುದಾಯವನ್ನು ಅಭಿವೃದ್ಧಿ ಪಡಿಸಲು ಮತ್ತು ಉತ್ತಮ ಮಾರ್ಗದರ್ಶನ ನೀಡಲು ಒಂದು ವೇದಿಕೆ ಸಿಗುತ್ತದೆ. ಹಕ್ಕುಗಳು, ಗುರಿಗಳು ಹಾಗೂ ಜವಾಬ್ದಾರಿಗಳನ್ನು ತಿಳಿಸಲು ಸಹಾಯವಾಗುತ್ತದೆ ಎಂದರು. ಆರ್ಥಿಕ ಅಂತರ, ಶೈಕ್ಷಣಿಕ ಭೇದ ಔದ್ಯೋಗಿಕ ಭೇದ ಭಾವಗಳನ್ನು ತ್ಯಜಿಸಿ. ಅಸಮಾನರಲ್ಲಿ ಸಮಾನರಾಗಿ, ಸಾಮಾನ್ಯರಲ್ಲಿ ಸಮಾನರಾಗಿ ನಿಲ್ಲಬೇಕಾದರೆ ಉತ್ತಮ ಅವಕಾಶವನ್ನು ಕಲ್ಪಿಸಿಕೊಳ್ಳಬೇಕು. ಉತ್ತಮವಾದ ಅವಕಾಶವನ್ನು ಉಪಯೋಗಿಸಿ ಕೊಂಡವನು ಅದೃಷ್ಟವಂತನಾಗುತ್ತನೆ. ಅವಕಾಶವನ್ನು ಸೃಷ್ಟಿಸಿಕೊಂಡವನು ಬುದ್ಧಿವಂತನಾಗುತ್ತಾನೆ. ಪ್ರಸ್ತುತದಲ್ಲಿ ನಾವು ಅವಕಾಶವನ್ನು ಸೃಷ್ಟಿಸಿಕೊಳ್ಳುವಂತಹ ಬುದ್ಧಿವಂತರಾಗಬೇಕು ಎಂದು ಹೇಳಿದರು.

ಇರುವ ಅವಕಾಶಗಳ ಜೊತೆಗೆ ಮತ್ತಷ್ಟು ಅವಕಾಶಗಳನ್ನು ಸೃಷ್ಟಿಸಿಕೊಳ್ಳುತ್ತೇನೆ, ಅದೃಷ್ಟವನ್ನು ನಂಬಿ ನಾನು ಬದುಕುವುದಿಲ್ಲ, ಬುದ್ಧಿವಂತಿಕೆಯನ್ನು ಉಪಯೋಗಿಸಿಕೊಂಡು ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿಕೊಂಡು ಹೋಗುತ್ತೇನೆ ಎಂಬ ಗುರಿಯನ್ನು ಇಟ್ಟುಕೊಂಡರೆ ಶೋಷಿತ, ಹಿಂದುಳಿದ ವರ್ಗದವರು ಸಮಾನರಲ್ಲಿ ಸಮಾನರಾಗಿ ಹೊರಹೊಮ್ಮಲು ಸಾಧ್ಯ ಎಂದರು.

ಜಿ.ಪಂ. ಸಿಇಓ ಶಾಂತಾ ಎಲ್.ಹುಲ್ಮನಿ ಮಾತನಾಡಿ, ಆದಿಕವಿ ಮಹರ್ಷಿ ವಾಲ್ಮೀಕಿ ಅವರು ಮಹಾಕಾವ್ಯವನ್ನು ರಚನೆ ಮಾಡಿದ್ದಾರೆ. ಮಹಾನ್ ಚೇತನರ ಜಯಂತಿಗಳು ಕೇವಲ ಆಚರಣೆಗಳಿಗೆ ಮಾತ್ರ ಸೀಮಿತವಾಗಬಾರದು. ಅರ್ಥಪೂರ್ಣವಾಗಿ ಕಾರ್ಯಕ್ರಮಗಳನ್ನು ಮಾಡಬೇಕು. ಬದುಕಿನಲ್ಲಿ ಹೇಗೆ ಬದುಕಬೇಕು ಎಂಬುದಕ್ಕೆ ರಾಮಾಯಣ ಉದಾಹರಣೆಯಾದರೆ, ಬದುಕಿನಲ್ಲಿ ತಪ್ಪುಗಳನ್ನು ಮಾಡಬಾರದು ಎಂಬುದಕ್ಕೆ ಮಹಾಭಾರತ ಉದಾಹರಣೆಯಾಗುತ್ತದೆ ಎಂದು ತಿಳಿಸಿದರು.

ಹಿರಿಯ ದಂತ ವೈದ್ಯೆ ಡಾ.ಸುಗುಣ ಮಾತನಾಡಿ, ಶ್ರೀ ಮಹರ್ಷಿ ವಾಲ್ಮೀಕಿರವರ ಬೋಧನೆ ಹಾಗೂ ನೀತಿಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಉತ್ತಮ ಜೀವನವನ್ನು ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯ. ಮಹಾಕಾವ್ಯ ರಾಮಾಯಣದ ಕರ್ತೃ ಮಹರ್ಷಿ ವಾಲ್ಮೀಕಿ. ಪಂಚಾಂಗದ ಪ್ರಕಾರ, ವಾಲ್ಮೀಕಿ ಜಯಂತಿಯನ್ನು ಪ್ರತಿ ವರ್ಷ ಹುಣ್ಣಿಮೆಯಂದು ದಿನದಂದು ಆಚರಿಸಲಾಗುತ್ತದೆ. ಮಹಾಕಾವ್ಯದಲ್ಲಿ, ವಾಲ್ಮೀಕಿ ಸಂಸ್ಕೃತದಲ್ಲಿ 24,000 ಶ್ಲೋಕಗಳು, 7 ಖಂಡಗಳು ಮತ್ತು ಅನೇಕ ಶ್ಲೋಕಗಳನ್ನು ಬರೆದಿದ್ದಾರೆ ಎಂದರು.

ಇದೇ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಬಿ.ರಂಗೇಗೌಡ, ಹಿಂದುಳಿದ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಶ್ರೀನಿವಾಸ್, ಜಿಲ್ಲಾಧಿಕಾರಿಗಳ ಕಚೇರಿಯ ಹಿರಿಯ ಸಹಾಯಕರಾದ ಸ್ವಾಮಿಗೌಡ, ಮುಖಂಡರುಗಳಾದ ಪುಟ್ಟಸ್ವಾಮಿ ನಾಯಕ, ಚಂದ್ರನಾಯಕ, ಕೃಷ್ಣನಾಯಕ, ಟಿ.ಕೃಷ್ಣಯ್ಯ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಕುಂಭಮೇಳಕ್ಕೆ ಜಿಲ್ಲಾಡಳಿತದಿಂದ ಸಕಲ ಸಿದ್ಧತೆ



ಮಂಡ್ಯ,ಅ.9– ಕೆ.ಆರ್.ಪೇಟೆಯ ಅಂಬಿಗರಹಳ್ಳಿಯಲ್ಲಿ ಅಕ್ಟೋಬರ್ 13 ರಿಂದ 16 ರವರೆಗೆ ನಡೆಯಲಿರುವ ಕುಂಭಮೇಳ ಕಾರ್ಯಕ್ರಮಕ್ಕೆ ಜಿಲ್ಲಾಡಳಿತದಿಂದ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಎಸ್.ಅಶ್ವತಿ ತಿಳಿಸಿದರು.

ಇಂದು ಅಂಬಿಗರಹಳ್ಳಿಯ ತ್ರಿವೇಣಿ ಸಂಗಮದಲ್ಲಿ ಅಧಿಕಾರಿಗಳ ಸಭೆ ನಡೆಸಿ ಅವರು ಮಾತನಾಡಿದರು. ಕುಂಭಮೇಳದ ವೇದಿಕೆ, ಯಾಗಶಾಲೆ, ಪಾಕಶಾಲೆ, ಸ್ನಾನದ ಘಟ್ಟ, ವಿಶ್ರಾಂತಿ ಗೃಹ, ಭದ್ರತಾ ವ್ಯವಸ್ಥೆ ಕುರಿತು ಮಾಹಿತಿ ಪಡೆದುಕೊಂಡರು.

ವಿಐಪಿ ಪಾರ್ಕಿಂಗ್, ಅಧಿಕಾರಿಗಳ ಪಾರ್ಕಿಂಗ್ ಹಾಗೂ ಭಕ್ತಾದಿಗಳ ವಾಹನಗಳು ಸುರಕ್ಷಿತವಾಗಿ ಪಾರ್ಕಿಂಗ್ ಮಾಡಲು ಸ್ಥಳವನ್ನು ನಿಗದಿಪಡಿಸಿ ಪಾರ್ಕಿಂಗ್ ವ್ಯವಸ್ಥೆಗಳ ಸುತ್ತಮುತ್ತಲಿನಲ್ಲಿ ಸಂಪೂರ್ಣ ಸ್ವಚ್ಛತೆಯಾಗಬೇಕು. ಪಾರ್ಕಿಂಗ್‌ಗೆ ನಿಗದಿಪಡಿಸಿದ ಸ್ಥಳಗಳಲ್ಲಿ ಲೈಟಿಂಗ್ಸ್ ವ್ಯವಸ್ಥೆ ಮಾಡಬೇಕು ಎಂದು ಹೇಳಿದರು.

ಕುಂಭಮೇಳಕ್ಕೆ ಬರುವ ಭಕ್ತಾದಿಗಳಿಗೆ ಊಟದ ವ್ಯವಸ್ಥೆಗಾಗಿ 100 ಕೌಂಟರ್‌ಗಳನ್ನು ತೆರೆಯಲಾಗುವುದು. ಊಟೋಪಚಾರಕ್ಕೆ ಯಾವುದೇ ಕೊರತೆಯಾಗದಂತೆ ಕ್ರಮವಹಿಸಿ. ಸ್ನಾನಘಟ್ಟದಲ್ಲಿ ಸುರಕ್ಷಾ ಸ್ಥಳಗಳನ್ನು ಗುರುತಿಸಿ, ಈಜುಗಾರರನ್ನು ನಿಯೋಜಿಸಿ, ಸ್ವಚ್ಛತೆ ಕಾಪಾಡಲು ಪೌರಕಾರ್ಮಿಕರನ್ನು ಪಾಳಿಯಲ್ಲಿ ನಿಯೋಜಿಸಿ ಎಂದರು.

ಸೋಮನಹಳ್ಳಿಯಿಂದ ತ್ರಿವೇಣಿ ಸಂಗಮದವರೆಗೆ ಭಕ್ತಾದಿಗಳ ಅನುಕೂಲಕ್ಕೆ ಬಸ್‌ಗಳ ವ್ಯವಸ್ಥೆ ಕಲ್ಪಿಸಲಾಗಿದೆ. ಪಾರ್ಕಿಂಗ್, ಅಡುಗೆ ಮಾಡುವ ಸ್ಥಳಗಳಲ್ಲಿ ಹಾಗೂ ಇನ್ನಿತರ ಪ್ರಮುಖ ಸ್ಥಳಗಳಲ್ಲಿ ಸಿಸಿ ಕ್ಯಾಮರಾಗಳನ್ನು ಅಳವಡಿಸುವಂತೆ ಜಿಲ್ಲಾಧಿಕಾರಿ ತಿಳಿಸಿದರು.

ವಸತಿ ಸಮಿತಿ, ಆಹಾರ ಸಮಿತಿ, ಕುಡಿಯುವ ನೀರು ಸಮಿತಿ, ಸ್ವಚ್ಛತಾ ಸಮಿತಿ, ಪ್ರದರ್ಶನ ಸಮಿತಿ, ಪ್ರಚಾರ ಸಮಿತಿ, ರಕ್ಷಣೆ ಸಮಿತಿ, ವೇದಿಕೆ ನಿರ್ಮಾಣ ಹಾಗೂ ದೀಪಾಲಂಕಾರ ಸಮಿತಿಗೆ ನಿರ್ವಹಿಸಿರುವ ಕೆಲಸ ಕಾರ್ಯಗಳು ಸಂಪೂರ್ಣವಾಗಿ ಮುಗಿಸಬೇಕು ಎಂದು ಅಧಿಕಾರಿಗಳಿಗೆ ಸಲಹೆ ನೀಡಿದರು.

ಸ್ವಚ್ಛತೆ, ರಸ್ತೆ ಕಾಮಗಾರಿ ಹಾಗೂ ಇನ್ನಿತರ ಮೂಲಸೌಕರ್ಯಗಳನ್ನು ಶೀಘ್ರದಲ್ಲೇ ಪೂರ್ಣ ಮಾಡಿ ಕುಂಭಮೇಳ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಲು ಕ್ರಮವಹಿಸಿ ಎಂದು ಅಶ್ವಿನಿ ಸೂಚನೆ ನೀಡಿದರು.

ಸಭೆಯಲ್ಲಿ ಸಚಿವರ ಆಪ್ತಕಾರ್ಯದರ್ಶಿ ಹೆಚ್.ಜಿ.ಪ್ರಭಾಕರ್, ಉಪವಿಭಾಗಾಧಿಕಾರಿಗಳಾದ ಬಿ.ಸಿ.ಶಿವಾನಂದ ಮೂರ್ತಿ, ಆರ್.ಐಶ್ವರ್ಯ, ತಹಶೀಲ್ದಾರ್ ಎಂ.ವಿ.ರೂಪ, ಜಿ.ಪಂ ಉಪಕಾರ್ಯದರ್ಶಿ ಸಂಜೀವಪ್ಪ ಡಿವೈಎಸ್‌ಪಿ ಲಕ್ಷ್ಮಿನಾರಾಯಣ ಪ್ರಸಾದ್, ಸಣ್ಣಸ್ವಾಮಿಗೌಡ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ತ್ರಿವೇಣಿ ಸಂಗಮದಲ್ಲಿ ಮಹಾಕುಂಭ ಮೇಳ ಕಾರ್ಯಕ್ರಮಕ್ಕೆ ಸಜ್ಜಾಗುತ್ತಿರುವ ಬೃಹತ್ ವೇದಿಕೆ ಹಾಗೂ ಇನ್ನಿತರ ಸಣ್ಣ ಪುಟ್ಟ ಕಾಮಗಾರಿಗಳನ್ನು ವೀಕ್ಷಿಸಿ ಬಾಕಿ ಉಳಿದಿರುವ ಕೆಲಸಗಳನ್ನು ಶೀಘ್ರದಲ್ಲೇ ಪೂರ್ಣಗೊಳಿಸುವಂತೆ ಸೂಚನೆ ನೀಡಿದರು.

ಹಾವು ಕಡಿದು ರೈತ ಸಾವು



ಮೇಲುಕೋಟೆ, ಅ.9– ಹೋಬಳಿಯ ಚಿಟ್ಟನಹಳ್ಳಿ ಗ್ರಾಮದಲ್ಲಿ ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದ ವೇಳೆ ಹಾವು ಕಡಿದು ರೈತನೋರ್ವ ಮೃತಪಟ್ಟಿದ್ದಾನೆ. ಬೆಳ್ಳಾಳೆ ಸಮೀಪದ ಚಿಟ್ಟನಹಳ್ಳಿ ಗ್ರಾಮದ ಕೆಂಚೇಗೌಡರ ಮಗ ಸಿ.ಕೆ. ಕುಮಾರ್ (34) ಮೃತಪಟ್ಟವರು. ಪ್ರತಿನಿತ್ಯದ ಕಾಯಕದಂತೆ ಜಮೀನಿನಲ್ಲಿ ಬೇಸಾಯ ಮಾಡುವ ವೇಳೆ ಹಾವು ಕಡಿದಿದೆ.

ಹಾವು ಕಚ್ಚಿರುವುದು ತಿಳಿದ ಬಳಿಕ. ಕುಟುಂಬಸ್ಥರೊಂದಿಗೆ ದರಸಗುಪ್ಪೆಯಲ್ಲಿ ನಾಟಿ ಔಷಧಿ ಪಡೆದಿದ್ದ ರೆನ್ನಲಾಗಿದೆ. ಆದರೆ ರಾತ್ರಿ 12 ಗಂಟೆ ಸುಮಾರಿಗೆ ಮನೆಯಲ್ಲೇ ಕೊನೆಯುಸಿರೆಳೆದಿದ್ದಾರೆ. ಸ್ವ ಗ್ರಾಮದಲ್ಲೇ ಭಾನುವಾರ ಅಂತ್ಯಸಂಸ್ಕಾರ ನೆರವೇರಿಸಲಾಗಿದೆ.

ಚಿರತೆ ದಾಳಿ: ವ್ಯಕ್ತಿಗೆ ತೀವ್ರ ಗಾಯ



ನಾಗಮಂಗಲ, ಅ.9– ತೋಟಕ್ಕೆ ಹೋಗಿದ್ದ ವ್ಯಕ್ತಿಯೊಬ್ಬನ ಮೇಲೆ ಚಿರತೆ ದಾಳಿ ಮಾಡಿ ತೀವ್ರ ಗಾಯಗೊಳಿಸಿದ ಘಟನೆ ತಾಲೂಕಿನ ತ್ಯಾಪೇನಹಳ್ಳಿ ಗ್ರಾಮದ ಬಳಿ ನಡೆದಿದೆ.

ಗ್ರಾಮದ ಜವರಪ್ಪ ಎಂಬುವರು ಬೆಳಗ್ಗೆ ಎಂಟು ಗಂಟೆ ಸಮಯಕ್ಕೆ ತೋಟಕ್ಕೆ ತೆಂಗಿನ ಕಾಯಿ ಆಯಲು ಹೋಗಿದ್ದ ಸಮಯದಲ್ಲಿ ಪೊದೆಯೊಂದರಲ್ಲಿ ಕುಳಿತಿದ್ದ ಚಿರತೆಯೊಂದು ಜವರಪ್ಪನ ಮೇಲೆ ದಾಳಿಮಾಡಿದೆ. ತಕ್ಷಣವೇ ಆತ ಕಿರುಚಿಕೊಂಡಾಗ ಚಿರತೆ ಓಡಿ ಹೋಗಿದೆ. ಗ್ರಾಮಸ್ಥರು ವಿಷಯ ತಿಳಿದು ಜವರಪ್ಪನನ್ನು ಸಾರ್ವಜನಿಕ ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ನೀಡಲಾಗುತ್ತಿದ್ದು, ಅರಣ್ಯ ಇಲಾಖೆಗೆ ದೂರು ನೀಡಲಾಗಿದೆ.

ಇಂದು ಜಲ ಸಾಹಸ ಕ್ರೀಡಾ ಚಟುವಟಿಕೆಗಳ ಉದ್ಘಾಟನೆ

ಮಂಡ್ಯ,ಅ.9– ಜಿಲ್ಲಾಡಳಿತ ವತಿಯಿಂದ ಮಹಾ ಕುಂಭಮೇಳ –2022ರ ಪ್ರಯುಕ್ತ ಅ.10 ಮಧ್ಯಾಹ್ನ 3 ಗಂಟೆಗೆ ಕೆ.ಆರ್.ಪೇಟೆ ತಾಲೂಕಿನ ಕಲ್ಲಹಳ್ಳಿಯ ಭೂ ವರಾಹನಾಥ ಸ್ವಾಮಿ ದೇವಸ್ಥಾನದ ಹತ್ತಿರ ಜಲ ಸಾಹಸ ಕ್ರೀಡಾ ಚಟುವಟಿಕೆಗಳ ಉದ್ಘಾಟನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವನ್ನು ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಉದ್ಘಾಟಿಸಲಿದ್ದಾರೆ. ರೇಷ್ಮೆ,ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಡಾ.ಕೆ ಸಿ.ನಾರಾಯಣ ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯಅತಿಥಿಗಳಾಗಿ ಮಂಡ್ಯ ಸಂಸದೆ ಸುಮಲತಾ ಅಂಬರೀಶ್, ಶಾಸಕರುಗಳಾದ ಮರಿತಿಬ್ಬೇಗೌಡ, ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ, ಡಿ.ಸಿ.ತಮ್ಮಣ್ಣ, ಸಿ.ಎಸ್.ಪುಟ್ಟರಾಜು, ಸುರೇಶ್‌ಗೌಡ, ಡಾ.ಕೆ.ಅನ್ನದಾನಿ, ರವೀಂದ್ರ ಶ್ರೀಕಂಠಯ್ಯ, ಎಂ ಶ್ರೀನಿವಾಸ್, ನಗರಸಭೆ ಅಧ್ಯಕ್ಷ ಹೆಚ್.ಎಸ್. ಮಂಜು, ಮುಡಾ ಅಧ್ಯಕ್ಷ ಕೆ.ಶ್ರೀನಿವಾಸ್, ಇನ್ನಿತರರು ಭಾಗವಹಿಸಲಿದ್ದಾರೆ.

ಐಕ್ಯತಾ ಯಾತ್ರೆ ಮಂಡ್ಯದಲ್ಲಿ ಭಾರೀ ಬದಲಾವಣೆ ತರಲಿದೆ



ಮಂಡ್ಯ,ಅ.9– ಐಕ್ಯತಾ ಯಾತ್ರೆಯ ಯಶಸ್ಸಿನಿಂದ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯಲ್ಲಿ ಭಾರೀ ಬದಲಾವಣೆ ಕಾಣುವ ಸಾಧ್ಯತೆ ಹೆಚ್ಚಾಗಿದೆ ಎಂದು ಮಾಜಿ ಸಚಿವ ಎನ್.ಚಲುವರಾಯಸ್ವಾಮಿ ಅಭಿಪ್ರಾಯಪಟ್ಟರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2023ರ ವಿಧಾನಸಭಾ ಚುನಾವಣೆಯಲ್ಲಿ ಮಂಡ್ಯ ಜಿಲ್ಲೆಯಲ್ಲಿ ಬದಲಾವಣೆ ಗಾಳಿ ಬೀಸುವ ಸಾಧ್ಯತೆ ಇದೆ. ಪಾದಯಾತ್ರೆಗೆ ಉತ್ತಮ ಬೆಂಬಲ ವ್ಯಕ್ತವಾಗಿದ್ದು, ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಭಾರೀ ಬದಲಾವಣೆಯಾಗಲಿದೆ. ಕಳೆದ ಬಾರಿ ಏಳು ಕ್ಷೇತ್ರಗಳನ್ನು ಗೆದ್ದ ಪಕ್ಷ ಜಿಲ್ಲೆಗೆ ಯಾವ ಕೊಡುಗೆ ನೀಡಿದೆ. ಮುಂಬರುವ ಚುನಾವಣೆಗೆ ಜಿಲ್ಲೆಯಲ್ಲಿ ಪ್ರಬಲ ಅಭ್ಯರ್ಥಿಗಳನ್ನು ಕಣಕ್ಕಿಳಿಸಿ ಏಳು ಕ್ಷೇತ್ರದಲ್ಲಿಯೂ ಜಯಗಳಿಸುವ ಗುರಿಯನ್ನು ಹೊಂದಲಾಗಿದೆ ಎಂದರು.

ಈ ಹಿಂದೆ ಮಾಜಿ ಪ್ರಧಾನಿ ಚಂದ್ರಶೇಖರ, ಬಿಜೆಪಿ ಮುಖಂಡರಾದ ಎಲ್.ಕೆ.ಅಡ್ವಾಣಿಯವರು ರಥಯಾತ್ರೆ ನಡೆಸಿದ್ದರು. ಆ ನಂತರ ರಾಹುಲ್ ಗಾಂಧಿ ಅವರ ನೇತೃತ್ವದಲ್ಲಿ ನಡೆಯುತ್ತಿರುವ ಭಾರತ್ ಜೋಡೋ ಐಕ್ಯತಾ ಯಾತ್ರೆ ಐತಿಹಾಸಿಕ ಯಾತ್ರೆಯಾಗಿದೆ. ದೇಶದ ಜನರ ಹಿತಕ್ಕೋಸ್ಕರ, ಪ್ರಜಾಪ್ರಭುತ್ವ, ಸಂವಿಧಾನದ ಉಳಿವು, ಶಾಂತಿ, ಸೌಹಾರ್ದತೆ ಮತ್ತು ದೇಶ ಹಾಗೂ ರಾಜ್ಯದ ಭವಿಷ್ಯಕ್ಕಾಗಿ ನಡೆಸುತ್ತಿರುವ ಯಾತ್ರೆ ಇದಾಗಿದ್ದು, ಇದರಲ್ಲಿ ಯಾವುದೇ ರಾಜಕೀಯ ದುರುದ್ದೇಶ ಅಡಗಿಲ್ಲ ಎಂದು ನುಡಿದರು.

ಯಾತ್ರೆಯ ಸಂದರ್ಭದಲ್ಲಿ ರಾಹುಲ್ ಗಾಂಧಿ ಅವರಲ್ಲಿರುವ ಪ್ರಜ್ಞಾವಂತಿಕೆ ಮತ್ತು ದೂರದೃಷ್ಟಿ ಹೆಮ್ಮೆ ತರುವ ವಿಚಾರವಾಗಿದೆ. ಅವರು ದೇಶ ಹಾಗೂ ಜನರ ಹಿತಕ್ಕಾಗಿ ಜನರಲ್ಲಿ ಸೌಹಾರ್ದತೆ ಮೂಡಿಸುವ ಹಿನ್ನೆಲೆಯಲ್ಲಿ ಶ್ರಮ ವಹಿಸುತ್ತಿದ್ದಾರೆ ಎಂದು ಕೊಂಡಾಡಿದರು.

ಜಿಲ್ಲೆಯಲ್ಲಿ ನಿರೀಕ್ಷೆಗೂ ಮೀರಿ ಜನತೆ ಭಾರತ್ ಜೋಡೋ ಯಾತ್ರೆಯಲ್ಲಿ ಭಾಗವಹಿಸಿದ್ದಾರೆ. ಬೇರೆ ಬೇರೆ ಜಿಲ್ಲೆಗಳಿಂದಲೂ ಪಾಲ್ಗೊಂಡಿದ್ದಾರೆ. ಮೊದಲ ದಿನ 48000 ಮಂದಿ ಭಾಗವಹಿಸಿದ್ದರು. ನಂತರದ ದಿನಗಳಲ್ಲಿ 1.5ಲಕ್ಷಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದಾರೆ ಎಂದು ನುಡಿದರು.

ಮಾಜಿ ಸಚಿವ ಪಿ.ಎಂ.ನರೇಂದ್ರಸ್ವಾಮಿ ಮಾತನಾಡಿ, ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ಅವರು ಕಾಂಗ್ರೆಸ್ ಪಕ್ಷದ ಆಸ್ತಿಯಾಗಿದ್ದಾರೆ. ರಾಹುಲ್ ಗಾಂಧಿ ಬಾಲ್ಯದಲ್ಲಿಯೇ ತಮ್ಮ ಅಜ್ಜಿ ಇಂದಿರಾ ಗಾಂಧಿ ಮತ್ತು ತಂದೆ ರಾಜೀವ್‌ಗಾಂಧಿ ಅವರನ್ನು ಕಳೆದುಕೊಂಡಿದ್ದಾರೆ. ಭಯದ ವಾತಾವರಣದಲ್ಲಿಯೇ ತಮ್ಮ ಬಾಲ್ಯವನ್ನು ಕಳೆದಿದ್ದಾರೆ ಎಂದು ನುಡಿದರು.

ಇಂತಹ ಸಂದರ್ಭದಲ್ಲಿಯೂ ಸೋನಿಯಾ ಗಾಂಧಿ ಅವರು ತಮ್ಮ ಮಕ್ಕಳ ಪೋಷಣೆಯ ಜತೆಗೆ ದೇಶಕ್ಕಾಗಿ ತ್ಯಾಗ ಮಾಡಿದ್ದಾರೆ. ಪಕ್ಷವನ್ನು ಕಟ್ಟಿ ಬೆಳೆಸಿದ್ದಾರೆ. ಎರಡು ಬಾರಿ ತಮ್ಮ ಕುಟುಂಬಕ್ಕೆ ಒಲಿದು ಬಂದಿದ್ದ ಪ್ರಧಾನಿ ಹುದ್ದೆಯ ಅವಕಾಶವನ್ನು ತ್ಯಾಗ ಮಾಡಿದ್ದಾರೆ. ಈ ಕುಟುಂಬ ಕಾಂಗ್ರೆಸ್ ಪಕ್ಷದ ಆಸ್ತಿಯಾಗಿದೆ ಎಂದು ತಿಳಿಸಿದರು.

ಗೋಷ್ಠಿಯಲ್ಲಿ ಮಾಜಿ ಶಾಸಕ ರಮೇಶ್ ಬಾಬು ಬಂಡಿಸಿದ್ದೇಗೌಡ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್, ಯುವ ಕಾಂಗ್ರೆಸ್ ಅಧ್ಯಕ್ಷ ವಿಜಯ್‌ಕುಮಾರ್, ಮುಖಂಡರಾದ ಸಿದ್ದಾರೂಢ ಸತೀಶ್ ಗೌಡ, ಅಂಜನಾ ಶ್ರೀಕಾಂತ್, ಚಿದಂಬರ್ ಸೇರಿದಂತೆ ಇತರರಿದ್ದರು.

ವಸ್ತು ಪ್ರದರ್ಶನದಲ್ಲಿ 'ದೇಸಿರಿ ನ್ಯಾಚುರಲ್' ಮಳಿಗೆ ಉದ್ಘಾಟನೆ



ಮೈಸೂರು, ಅ.9(ಎಂಕೆ)– ಮೈಸೂರು ದಸರಾ ವಸ್ತು ಪ್ರದರ್ಶನ ಆವರಣದಲ್ಲಿ ಸ್ಥಳದಲ್ಲೇ ಎತ್ತಿನಗಾಣದ ಮೂಲಕ ಪರಿಶುದ್ಧ ಎಣ್ಣೆ ಹೊರ ತೆಗೆಯುವ 'ದೇಸಿರಿ ನ್ಯಾಚುರಲ್' ಮಳಿಗೆಗೆ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ ಭಾನುವಾರ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಅಡುಗೆ ಎಣ್ಣೆ, ಹರಳೆಣ್ಣೆ, ಗೊಬ್ಬರಿ ಎಣ್ಣೆ ಸೇರಿದಂತೆ ವಿವಿಧ ಬಗೆಯ ಎಣ್ಣೆಗಳನ್ನು ಸ್ಥಳದಲ್ಲೇ ಎತ್ತಿನಗಾಣದ ಮೂಲಕ ಹೊರ ತೆಗೆದು ನೀಡಲಾಗುತ್ತದೆ. ದಸರಾ ವಸ್ತು ಪ್ರದರ್ಶನದಲ್ಲಿಯೇ ಮೊದಲ ಬಾರೀ ಸ್ಥಳದಲ್ಲೇ ಎತ್ತಿನಗಾಣದ ಮಳಿಗೆಯನ್ನು ತೆರೆಯಲಾಗಿದ್ದು, ವಸ್ತು ಪ್ರದರ್ಶನಕ್ಕೆ ಭೇಟಿ ನೀಡುವ ಪ್ರವಾಸಿಗರು ಇದರ ಸದುಪಯೋಗ ಪಡೆದುಕೊಳ್ಳುವಂತೆ ಮನವಿ ಮಾಡಿದರು.

ಮಾರುಕಟ್ಟೆಗಳಲ್ಲಿ ಹಲವು ಬಗೆಯ ಅಡುಗೆ ಎಣ್ಣೆ ಹಾಗೂ ತಲೆ ಕೂದಲಿಗೆ ಬಳಸುವ ಎಣ್ಣೆಗಳಿವೆ. ಕೆಲವು ಬಗೆಯ ಎಣ್ಣೆಗಳು ಕಲಬೆರೆಕೆಯಿಂದ ಕೂಡಿರುವ ಸಾಧ್ಯತೆ ಇರುತ್ತದೆ. ಆದ್ದರಿಂದ ಗ್ರಾಹಕರ ಅನುಕೂಲಕ್ಕಾಗಿ ಹಾಗೂ ಗ್ರಾಮೀಣ ಸೊಗಡನ್ನು ಪರಿಚಯಿಸುವ ಸದುದ್ದೇಶದಿಂದ ಮೊದಲ ಬಾರಿಗೆ ವಸ್ತು ಪ್ರದರ್ಶನ ಆವರಣದಲ್ಲಿ ಅವಕಾಶ ಮಾಡಿಕೊಡಲಾಗಿದೆ ಎಂದು ತಿಳಿಸಿದರು.



ಮೈಸೂರು ಜಿಲ್ಲಾ ಕೆಕೆಓ ಮಹಿಳಾ ಘಟಕದ ವತಿಯಿಂದ ಚಾಮುಂಡೇಶ್ವರಿ ಜಾತ್ರಾ ಮಹೋತ್ಸವ ಅಂಗವಾಗಿ ನಡೆದ ಸತ್ಯನಾರಾಯಣ ಪೂಜಾ ಕಾರ್ಯ ಕ್ರಮದಲ್ಲಿ ಮೈಸೂರು ನಗರ ಮಹಿಳಾ ಘಟಕದ ಅಧ್ಯಕ್ಷೆ ಸವಿತಾ ಘಾಟ್ಗೆ, ರಾಜ್ಯಾಧ್ಯಕ್ಷೆ ಶ್ರೀಮತಿ ಉಮಾ ಮೂರ್ತಿ ರಾವ್, ಮೈಸೂರು ಘಟಕದ ಪ್ರಧಾನ ಕಾರ್ಯದರ್ಶಿ ಸವಿತಾ ಚವಾಣ್, ಕೆಕೆಓ ರಾಜ್ಯ ಮುಖಂಡರಾದ ತಾರಾಸಿಂಗ್, ವಕೀಲ ಶಿವರಾಜ್ ಮುಂತಾದವರು ಪೂಜಾ ಕಾರ್ಯದಲ್ಲಿ ಭಾಗವಹಿಸಿದ್ದರು. ಈ ಸಂದರ್ಭ ರಾಜ್ಯ ಪದಾಧಿಕಾರಿಗಳನ್ನು ಸನ್ಮಾನಿಸಲಾಯಿತು.

ಗ್ರಾಪಂ ಅಧ್ಯಕ್ಷರ ಅಧಿಕಾರ ಮೊಟಕು

ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಖಂಡನೆ


ಮೈಸೂರು, ಅ.9(ಎಂಕೆ)–ಗ್ರಾಪಂ ಅಧ್ಯಕ್ಷರಿಗಿದ್ದ ಅಧಿಕಾರವನ್ನು ಮೊಟಕುಗೊಳಿಸಿ, ಪಿಡಿಓ ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರಿಗೆ ನೀಡುವ ಸರ್ಕಾರದ ನಿರ್ಧಾರವನ್ನು ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಖಂಡಿಸಿದ್ದಾರೆ.

ಗ್ರಾಪಂ ವ್ಯಾಪ್ತಿಯಲ್ಲಿ ಉದ್ಯೋಗ ಖಾತ್ರಿ, ವಿವಿಧ ವಸತಿ ಯೋಜನೆಗಳ ಅನುಷ್ಠಾನ, ವಾಣಿಜ್ಯ ಕಟ್ಟಡ ಕಾಮಗಾರಿಗಳು, ಕೈಗಾರಿಕೆ, ಗಣಿಗಾರಿಕೆ, ಇತರೆ ಖರ್ಚು ವೆಚ್ಚಗಳು, ನಮೂನೆ–9, 11ಎ, 11ಬಿ ನೀಡುವ ಕುರಿತು ಗ್ರಾಪಂ ಸಭೆಗಳಲ್ಲಿ ಸಭೆಗಳಲ್ಲಿ ನಿರ್ಧರಿಸಿ, ಚೆಕ್‌ಗಳಿಗೆ ಸಹಿ ಹಾಕುವ ಅಧಿಕಾರವನ್ನು ಗ್ರಾಪಂ ಅಧ್ಯಕ್ಷರು ಹಾಗೂ ಪಿಡಿಓಗಳಿಗೆ ಜಂಟಿಯಾಗಿ ನೀಡಲಾಗಿತ್ತು. ಆದರೆ ಸರ್ಕಾರ 2006ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಹೊಸ ನಡಾವಳಿಗಳನ್ನು ರೂಪಿಸಿ ಅಧ್ಯಕ್ಷರಿಗಿದ್ದ ಅಧಿಕಾರವನ್ನು ಮೊಟಕುಗೊಳಿಸಿ, ಪಿಡಿಓ ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರಿಗೆ ನೀಡುತ್ತಿದೆ. ಇದು ಸ್ಥಳೀಯ ಚುನಾಯಿತ ಪ್ರತಿನಿಧಿಗಳಿಗೆ, ಕರ್ನಾಟಕ ಗ್ರಾಪಂ ಕಾಯ್ದೆ ಜಾರಿಗೆ ತಂದ ಅಂದಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಹಾಗೂ ಅಂದಿನ ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದ ಅಬ್ದುಲ್ ನಜೀರ್ ಸಾಬ್ ಅವರಿಗೆ ಮಾಡಿದ ಅವಮಾನವಾಗಿದೆ ಎಂದು ಕಿಡಿಕಾರಿದ್ದಾರೆ.

ಸರ್ಕಾರ ಈ ಕುರಿತು ತನ್ನ ನಿರ್ಧಾರವನ್ನು ಬದಲಿಸದಿದ್ದಲ್ಲಿ ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾದ 25 ಮಂದಿ ವಿಧಾನ ಪರಿಷತ್ ಸದಸ್ಯರು ಹಾಗೂ ರಾಜ್ಯದ ಎಲ್ಲಾ 5,963 ಗ್ರಾಪಂ ಅಧ್ಯಕ್ಷರೊಂದಿಗೆ ವಿಧಾನಸೌಧ ಮತ್ತು ವಿಕಾಸಸೌಧದ ಮಧ್ಯದಲ್ಲಿ ಮಹಾತ್ಮ ಗಾಂಧೀಜಿಯವರ ಪ್ರತಿಮೆ ಎದುರು ಪ್ರತಿಭಟನೆ ನಡೆಸಲಾಗುವುದು ಎಂದು ಅವರು ಪತ್ರಿಕಾ ಪ್ರಕಟಣೆ ಮೂಲಕ ಎಚ್ಚರಿಸಿದ್ದಾರೆ.

ಉತ್ತಮ ನಟನಾಗುವುದಕ್ಕಿಂತ ಒಳ್ಳೆಯ ಮನುಷ್ಯನಾಗಬೇಕು

ರಂಗ ತರಬೇತಿ ಶಿಬಿರಾರ್ಥಿಗಳಿಗೆ ರಂಗಕರ್ಮಿ ನಾ.ರತ್ನ ಕಿವಿಮಾತು



ಮೈಸೂರು,ಅ.9(ಎಸ್‌ಬಿಡಿ)– ಉತ್ತಮ ನಟರಾಗುವುದಕ್ಕಿಂತ ಮುಖ್ಯವಾಗಿ ಒಳ್ಳೆಯ ಮನುಷ್ಯರಾಗಬೇಕು ಎಂದು ಹಿರಿಯ ರಂಗಕರ್ಮಿ ನಾ.ರತ್ನ ಅವರು ರಂಗ ತರಬೇತಿ ಶಿಬಿರಾರ್ಥಿಗಳಿಗೆ ಕಿವಿಮಾತು ಹೇಳಿದರು.

ಮೈಸೂರಿನ ಮಾನಸಗಂಗೋತ್ರಿ ಗಾಂಧಿಭವನ ಆವರಣದಲ್ಲಿ ನಿರಂತರ ಫೌಂಡೇಶನ್ ವತಿಯಿಂದ ಕಾಲೇಜು ವಿದ್ಯಾರ್ಥಿಗಳಿಗೆ ಆಯೋಜಿಸಿರುವ 'ಸಹಜರಂಗ–2022' ರಂಗ ತರಬೇತಿ ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿ, ಗಾಂಧಿ–ಅಂಬೇಡ್ಕರ್ ವಿಚಾರಗಳನ್ನು ಆಳವಾಗಿ ಅಧ್ಯಯನ ಮಾಡಿ ತಿಳಿದುಕೊಳ್ಳಬೇಕು, ಹಿರಿಯರನ್ನು ಗೌರವಿಸುವುದನ್ನು ರೂಡಿಸಿಕೊಳ್ಳಬೇಕು, ನೆರೆಹೊರೆಯವರನ್ನು ಗೌರವದಿಂದ ಕಾಣಬೇಕು, ಶಿಸ್ತು, ಸಂಯಮ, ಸಹಾನುಭೂತಿ ಬೆಳೆಸಿಕೊಳ್ಳಬೇಕು. ಉತ್ತಮ ನಟರಾಗುವುದಕ್ಕಿಂತ ಮುಖ್ಯವಾಗಿ ಒಳ್ಳೆಯ ಮನುಷ್ಯರಾಗಬೇಕು ಎಂದು ಹೇಳಿದರು.

ನಿರಂತರದ ಫೌಂಡೇಷನ್‌ನ ಪಯಣವನ್ನು ಗಮನಿಸಿದ್ದೇನೆ. ರಂಗಭೂಮಿ ಹಿನ್ನಲೆ, ನಟನೆ ಜೊತೆಗೆ ಸಾಮಾಜಿಕ ಚಿಂತನೆಯನ್ನು ಜಾಗೃತಗೊಳಿಸುವ ಕೆಲಸ ಮಾಡುತ್ತಿದೆ. ನಾಟಕ ಹಾಗೂ ಸಿನಿಮಾ ನಟನೆಯನ್ನು ಕಲಿಸುವುದರ ಜೊತೆಗೆ ರಂಗಭೂಮಿಯ ಬಗ್ಗೆ ಹುಚ್ಚು ಹತ್ತಿಸಿ, ಕಲೆಯನ್ನು ಬೆಳೆಸಿಕೊಂಡು ಹೋಗಲು ಶಕ್ತಿ ತುಂಬಲಾಗುತ್ತಿದೆ ಎಂದು ಶ್ಲಾಘಿಸಿದರು.

ಗಾಂಧಿ ಭವನದ ನಿರ್ದೇಶಕ ಪ್ರೊ.ಎಂ. ಶಂಕರ್ ಮಾತನಾಡಿ, ಮಹಾತ್ಮ ಗಾಂಧಿ ಎಂಬುದೊಂದು ಜೀವನ ಕ್ರಮ, ಗಾಂಧಿ ಎಂಬುದೊಂದು ಸಂಸ್ಕೃತಿ, ಅನೇಕರು ಅದನ್ನು ಅನುಸರಿಸಿಕೊಂಡು ಬಂದಿದ್ದೇವೆ. ಗಾಂಧಿ ಅವರನ್ನು ಕೊಂದಿದ್ದು ಒಂದು ದುರಂತವಾದರೆ, ಅವರ ಮೌಲ್ಯಗಳನ್ನು ಕೊಲ್ಲುವುದು ಇನ್ನೂ ದೊಡ್ಡ ದುರಂತ. ಜಗತ್ತು ಯಾವ ದಾರಿಯಲ್ಲಾದರೂ ಹೋಗಬಹುದು ಆದರೆ ನಾವು ಸರಿಯಾದ ದಾರಿಯಲ್ಲಿ ಸಾಗಬೇಕು. ಯುವಜನತೆ ಸಂವೇದನಾ ಶೀಲತೆಯನ್ನು ಬೆಳೆಸಿಕೊಳ್ಳಬೇಕು ಎಂದು ಆಶಿಸಿದರು.

ಬೆಂಗಳೂರಿನ ಹಸಿರು ಫೌಂಡೇಷನ್‌ನ ಹೊನ್ನಳ್ಳಿ ಗಂಗಾಧರ್ ಮಾತನಾಡಿ, ಹದಿನೈದು ವರ್ಷಗಳಿಂದ ನಿರಂತರವಾಗಿ ರಂಗಶಿಬಿರ ನಡೆಸಿಕೊಂಡು ಬರುವುದು ಸವಾಲಿನ ಕೆಲಸ. ಹಿಂದೆ ಬದುಕು ನಡೆಸಲು ಕೆಲವೇ ಕೆಲವು ಕೆಲಸಗಳಿದ್ದವು. ಆದರೆ ಈಗಿನ ಪರಿಸ್ಥಿತಿಯೇ ಬೇರೆಯಾಗಿದೆ. ನಿಮಗೆ ತೃಪ್ತಿ ತರುವ ಕೆಲಸವನ್ನು ಶ್ರದ್ಧೆಯಿಂದ ಮಾಡಬೇಕೆಂದು ಹೇಳಿದರು.

ನಿರಂತರ ಫೌಂಡೇಷನ್‌ನ ಪ್ರಸಾದ್ ಕುಂದೂರು ಮಾತನಾಡಿ, ಇವತ್ತಿನ ವರ್ತಮಾನದ ತಲ್ಲಣಗಳು ನಮ್ಮನ್ನು ಪ್ರಭಾವಿಸುವುದಿಲ್ಲ ಎಂದು ತಿಳಿದುಕೊಂಡಿರುತ್ತೇವೆ. ಆದರೆ ಅವುಗಳೇ ನಮ್ಮ ವರ್ತನೆ ಮೇಲೆ ಪರಿಣಾಮ ಬೀರುತ್ತವೆ. ವರ್ತಮಾನಕ್ಕೆ ಸ್ಪಂದಿಸದೇ ಹೋದರೆ ಅದು ಕಲೆಯಾಗಿ ಉಳಿಯುವುದಿಲ್ಲ. ನಮ್ಮ ವರ್ತಮಾನದ ಸಂಗತಿಗಳಿಗೆ ಮುಖಾಮುಖಿಯಾಗಲು ನಾಟಕವನ್ನು ಕಲೆಯಾಗಿ ಬಳಸುವ ಪ್ರಯತ್ನವೇ ಸಹಜರಂಗದ ಉದ್ದೇಶವಾಗಿವೆ ಎಂದು ತಿಳಿಸಿದರು.

ಎಲ್ಲಾ ಸಮುದಾಯಗಳನ್ನೂ ಒಗ್ಗೂಡಿಸಿ ಮುನ್ನಡೆಯುವ ವಿಶೇಷತೆ ಒಕ್ಕಲಿಗರಿಗಿದೆ

ವಿಶ್ವ ಒಕ್ಕಲಿಗರ ಮಠಾಧ್ಯಕ್ಷ ಶ್ರೀ ಚಂದ್ರಶೇಖರ ಸ್ವಾಮೀಜಿ



ಮೈಸೂರಿನ ಮಾನಸ ಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ ವತಿಯಿಂದ ಆಯೋಜಿಸಿದ್ದ ಎರಡು ದಿನಗಳ ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡಿದರು. ಚಿತ್ರದಲ್ಲಿ ಶ್ರೀ ಚಂದ್ರಶೇಖರನಾಥ ಸ್ವಾಮೀಜಿ, ಸಾಹಿತಿಗಳಾದ ಸಿಪಿಕೆ, ಡಾ.ಎಸ್.ಪಿ.ಯೋಗಣ್ಣ ಮತ್ತಿತರಿದ್ದಾರೆ.

ಮೈಸೂರು,ಅ.9(ಎಸ್‌ಬಿಡಿ)– ಎಲ್ಲಾ ಸಮುದಾಯವನ್ನೂ ಒಟ್ಟುಗೂಡಿಸಿಕೊಂಡು ಮುನ್ನಡೆಯುವ ವಿಶೇಷತೆ ಒಕ್ಕಲಿಗ ಸಮುದಾಯಕ್ಕಿದೆ ಎಂದು ಕೆಂಗೇರಿಯ ವಿಶ್ವ ಒಕ್ಕಲಿಗರ ಮಠದ ಪೀಠಾಧ್ಯಕ್ಷರಾದ ಶ್ರೀ ಚಂದ್ರಶೇಖರನಾಥ ಸ್ವಾಮೀಜಿ ತಿಳಿಸಿದರು.

ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ ವತಿಯಿಂದ ಮೈಸೂರಿನ ಮಾನಸ ಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಆಯೋಜಿಸಿದ್ದ ಎರಡು ದಿನಗಳ ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ಆಶೀರ್ವಚನ ನೀಡಿದ ಅವರು, ಗ್ರಾಮಾಂತರ ಪ್ರದೇಶದಲ್ಲಿ ಯಾವುದೇ ದೇವಾಲಯದ ಉದ್ಘಾಟನೆಗೆ ಆಯಾ ಸಮುದಾಯದ ಶ್ರೀಗಳನ್ನು ಆಹ್ವಾನಿಸುವುದನ್ನು ಕಾಣಬಹುದು. ಆದರೆ ಒಕ್ಕಲಿಗ ಸಮಾಜದವರು ಆಯೋಜಿಸುವ ಯಾವುದೇ ಧಾರ್ಮಿಕ ಕಾರ್ಯಕ್ರಮಗಳಿಗೆ ವಿವಿಧ ಸಮುದಾಯದವರನ್ನೂ ಒಡಗೂಡಿಸಿಕೊಳ್ಳಲಾಗುತ್ತದೆ. ಒಕ್ಕಲಿಗ ಸಮುದಾಯದ ಇಂತಹ ವಿಶೇಷತೆಗೆ ಸಾಕಷ್ಟು ಉದಾಹರಣೆಗಳಿವೆ ಎಂದು ನುಡಿದರು.

ಇದು ಸಾಂಸ್ಕೃತಿಕ ಸಮಾವೇಶ: 'ನಾಡಪ್ರಭು ಕೆಂಪೇಗೌಡರು ಮತ್ತು ಒಕ್ಕಲಿಗ ರಾಜಮನೆತನದ ಇತಿಹಾಸ' ಕುರಿತ ರಾಜ್ಯಮಟ್ಟದ ವಿಚಾರ ಸಂಕಿರಣ ರಾಜಕೀಯ ಕಾರ್ಯಕ್ರಮವಾಗದೆ ಒಂದು ಉತ್ತಮ ಸಾಂಸ್ಕೃತಿಕ ಸಮಾವೇಶವಾಗಿತ್ತು. ಇಲ್ಲಿ ನಾನಾ ವಿದ್ವಾಂಸರು ಗಂಗರ ಹುಟ್ಟು, ವಿಕಾಸ, ಆಚಾರ–ವಿಚಾರಗಳನ್ನು ಸ್ಪಷ್ಟವಾಗಿ ತಿಳಿಸಿಕೊಟ್ಟಿದ್ದಾರೆ. ಹಾಗಾಗಿ ಇದೊಂದು ಸಾಂಸ್ಕೃತಿಕ ಸಮಾವೇಶವಾಗಿತ್ತು. ಈ ಸಂಬಂಧ ಒಂದು ಪುಸ್ತಕವನ್ನು ಹೊರತರಲಾಗುವುದು ಎಂದು ಹಿರಿಯ ಸಾಹಿತಿ ಸಿ.ಪಿ.ಕೃಷ್ಣಕುಮಾರ್(ಸಿಪಿಕೆ) ತಿಳಿಸಿದರು.

ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡಿ, ಹಿಂದಿನ ಮಹನೀಯರ ನಿಸ್ವಾರ್ಥ ಪರಿಶ್ರಮ ಹಾಗೂ ದೂರದೃಷ್ಟಿತ್ವದಿಂದ ಸಾಕಷ್ಟು ಮಹತ್ವದ ಯೋಜನೆಗಳನ್ನು ನೀಡಿದ್ದಾರೆ. ಅದರ ಬಗ್ಗೆ ಅರಿತುಕೊಂಡು ಭವಿಷ್ಯದ ಸಮಾಜವನ್ನು ಅರ್ಥಪೂರ್ಣವಾಗಿ ಕಟ್ಟುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಇತಿಹಾಸವನ್ನು ಅರಿತು ಸಮಾಜದಲ್ಲಿ ಒಗ್ಗಟ್ಟು ಸಾಧಿಸುವುದು ಅನಿವಾರ್ಯವಾಗಿದೆ ಎಂದು ಆಶಿಸಿದರು.

ವೈದ್ಯ ಸಾಹಿತಿ ಡಾ.ಎಸ್.ಪಿ.ಯೋಗಣ್ಣ ಮಾತನಾಡಿ, ನಾಡು ಕಟ್ಟುವಲ್ಲಿ ಹಾಗೂ ಬೆಳೆಸುವಲ್ಲಿ ಒಕ್ಕಲಿಗ ಸಮುದಾಯ ಮಹತ್ವದ ಪಾತ್ರ ವಹಿಸಿದೆ. ಇದಕ್ಕೆ ಸಾಕಷ್ಟು ಐತಿಹ್ಯಗಳು ನಮ್ಮ ಕಣ್ಣ ಮುಂದಿವೆ. ಕೆಂಪೇಗೌಡರು, ಕೆಂಗಲ್ ಹನುಮಂತಯ್ಯ, ಎಸ್.ಎಂ.ಕೃಷ್ಣ, ಹೆಚ್.ಡಿ.ದೇವೇಗೌಡ, ಹೆಚ್.ಡಿ.ಕುಮಾರ ಸ್ವಾಮಿ ಸೇರಿದಂತೆ ಒಕ್ಕಲಿಗ ಸಮಾಜದ ಅನೇಕ ಮುಖಂಡರು ರಾಜ್ಯದ ಉನ್ನತಿಗೆ ದುಡಿದಿದ್ದಾರೆ. ಇಂತಹ ನಾಯಕತ್ವ ಮುಂದುವರಿಯಬೇಕಿದೆ ಎಂದು ಆಶಯ ವ್ಯಕ್ತಪಡಿಸಿದರು.

ಜಗ ನಡೆಯಲಿ ಬುದ್ಧನ ಕಡೆ ಸಂಗೀತ ಕಾರ್ಯಕ್ರಮ

ಇನ್ನಷ್ಟು ಜಾತಿಗಳು ಎಸ್‌ಸಿ-ಎಸ್‌ಟಿಗೆ ಸೇರಿಸುವ ಸಾಧ್ಯತೆ



ಮೈಸೂರು, ಅ.9(ಎಂಕೆ)– ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಜನಸಂಖ್ಯೆ ಆಧಾರದ ಮೇಲೆ ಮೀಸಲಾತಿ ಹೆಚ್ಚಳ ಮಾಡಿರುವ ರಾಜ್ಯ ಸರ್ಕಾರ ಚುನಾವಣೆ ವರ್ಷದಲ್ಲಿ ಬೇರೆ ಬೇರೆ ಸಮುದಾಯವರನ್ನು ಸೇರ್ಪಡೆಗೊಳಿಸುವ ಸಾಧ್ಯತೆ ಇದೆ ಎಂದು ಹಿರಿಯ ಪತ್ರಕರ್ತ ಕೆ.ಶಿವಕುಮಾರ್ ಹೇಳಿದರು.

ಮೈಸೂರಿನ ಅಶೋಕ ವೃತ್ತದ ಸಮೀಪದಲ್ಲಿರುವ ವಿಶ್ವಮೈತ್ರಿ ಬುದ್ಧವಿಹಾರದಲ್ಲಿ ತುನುಮನ ಸಂಸ್ಥೆ ಆಯೋಜಿಸಿದ್ದ 'ಜಗ ನಡೆಯಲಿ ಬುದ್ಧನ ಕಡೆ ಸಂಗೀತ ಕಾರ್ಯಕ್ರಮ'ವನ್ನು ಉದ್ಘಾಟಿಸಿದ ಅವರು, ಚುನಾವಣೆಯ ಸಂದರ್ಭದಲ್ಲಿ ಹತ್ತಾರು ಜಾತಿಗಳನ್ನು ಎಸ್‌ಸಿ–ಎಸ್ಟಿಗೆ ಸೇರಿಸುತ್ತಾರೆ. ಇದರ ಬಗ್ಗೆ ಎಚ್ಚರಿಕೆ ವಹಿಸಬೇಕು ಎಂದರು.

ಎಸ್‌ಸಿ–ಎಸ್ಟಿ ಸಮುದಾಯದಲ್ಲಿ ಉನ್ನತ ಸ್ಥಾನ ಪಡೆದವರ ಮೇಲೆ ಜವಾಬ್ದಾರಿ ಹೆಚ್ಚಾಗಿದೆ. ಉನ್ನತ ಸ್ಥಾನದಲ್ಲಿದ್ದವರು ಆರ್ಥಿಕವಾಗಿ ಹಿಂದುಳಿದವರಿಗೆ ಸಹಕಾರ ನೀಡುವ ಮೂಲಕ ಅವರನ್ನು ತಮ್ಮೊಂದಿಗೆ ಕರೆದೊಯ್ಯಬೇಕು. ಈ ಮೂಲಕವಾದರೂ ಸಮುದಾಯಕ್ಕೆ ಒಳ್ಳೆಯ ಕೆಲಸಗಳನ್ನು ಮಾಡುವಂತೆ ಮನವಿ ಮಾಡಿದರು.

ಬಳಿಕ ಗಾಯಕ ಲಕ್ಷ್ಮಿರಾಮ್ ಮತ್ತು ತಂಡದಿಂದ ಬುದ್ಧನ ಕುರಿತಾದ ಸಂಗೀತ ಕಾರ್ಯಕ್ರಮ ನಡೆಯಿತು. ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ್ ಸ್ವಾಮೀಜಿ, ಮಾಜಿ ಮೇಯರ್ ಪುರುಷೋತ್ತಮ್, ಮಾನವ ಬಂಧುತ್ವ ವೇದಿಕೆ ಜಿಲ್ಲಾ ಸಂಚಾಲಕ ದ್ಯಾವಪ್ಪ ನಾಯಕ, ವಕೀಲ ದೇವರಾಜ್ ಪಾಳೇಗಾರ್, ಇಂಜಿನಿಯರ್ ಸಂತೋಷ್ ಮತ್ತಿತರರು ಉಪಸ್ಥಿತರಿದ್ದರು.

ಜಿಲ್ಲೆಗೆ ರೈಲು ಮಾರ್ಗ ಬೇಕು–ಬೇಡ ಎನ್ನುವ ಚರ್ಚೆಯ ನಡುವೆಯೇ

ನೈಋತ್ಯ ರೈಲ್ವೆ ಟಿಕೆಟ್ ಬುಕ್ಕಿಂಗ್ ಸೆಂಟರ್‌ಗೆ ಬೀಗ

ಕೊರೊನಾ ವೇಳೆ ಮುಚ್ಚಿದ ಸೆಂಟರ್ ಬಾಗಿಲು ತೆರೆದೇ ಇಲ್ಲ



ಮಡಿಕೇರಿ,ಅ.9– ಕೊಡಗು ಜಿಲ್ಲೆಗೆ ರೈಲು ಮಾರ್ಗ 'ಬೇಕು–ಬೇಡ' ಎನ್ನುವ ಕುರಿತು ಬಿಸಿಬಿಸಿ ಚರ್ಚೆಗಳು ಇಂದಿಗೂ ನಡೆಯುತ್ತಿವೆ. ಈ ನಡುವೆಯೇ ರಾಜ್ಯದ 'ಹಳಿಗಳೇ ಇಲ್ಲದ ಜಿಲ್ಲೆ ಕೊಡಗಿನಲ್ಲಿದ್ದ ಏಕೈಕ 'ನೈಋತ್ಯ ರೈಲ್ವೆ ಟಿಕೆಟ್ ಬುಕ್ಕಿಂಗ್ ಸೆಂಟರ್' ಅನ್ನು ಯಾವ ಸದ್ದಿಲ್ಲದೆ ಮುಚ್ಚಲಾಗಿದೆ.

ಕಳೆದ ಒಂದೂವರೆ ದಶಕದ ಹಿಂದೆ ಮಡಿಕೇರಿ ನಗರದ ಹಳೇ ಖಾಸಗಿ ಬಸ್ ನಿಲ್ದಾಣದ ಸಮೀಪವಿರುವ ನಗರಸಭೆ ಕಟ್ಟಡದ ಎರಡನೇ ಮಹಡಿಯಲ್ಲಿ 'ನೈಋತ್ಯ ರೈಲ್ವೆ ಕಂಪ್ಯೂಟರ್ ಟಿಕೆಟ್ ಬುಕ್ಕಿಂಗ್ ಸೆಂಟರ್' ಅನ್ನು ಸಾರ್ವಜನಿಕರ ಉಪಯೋಗಕ್ಕಾಗಿ ತೆರೆಯಲಾಗಿತ್ತು. 2018ರ ಪ್ರಾಕೃತಿಕ ವಿಕೋಪ ತದ ನಂತರ 2019ರಿಂದ ಸುಮಾರು ಎರಡು ವರ್ಷಗಳ ಕಾಲ ಇಡೀ ವಿಶ್ವವನ್ನೇ ಕಾಡಿದ ಕೊರೊನಾ ಸಾಂಕ್ರಾಮಿಕದ ಸಂದರ್ಭ ಸಾರ್ವಜನಿಕರ ಸುರಕ್ಷತೆಯ ದೃಷ್ಟಿಯಿಂದ 'ನೈಋತ್ಯ ರೈಲ್ವೆ ಟಿಕೆಟ್ ಬುಕ್ಕಿಂಗ್ ಸೆಂಟರ್' ಅನ್ನು ತಾತ್ಕಾಲಿಕವಾಗಿ ಮುಚ್ಚಲಾಗಿತ್ತು ಆದರೆ ಕೊರೊನಾ ಸೋಂಕು ಮರೆಯಾದರೂ ಕೂಡ ಬಾಗಿಲು ಹಾಕಿಕೊಂಡ ಟಿಕೆಟ್ ಬುಕ್ಕಿಂಗ್ ಸೆಂಟರ್‌ನ ಬೀಗ ತೆರೆಯಲು ಹುಬ್ಬಳ್ಳಿಯಲ್ಲಿ ಕೇಂದ್ರ ಕಚೇರಿ ಹೊಂದಿರುವ ನೈಋತ್ಯ ರೈಲ್ವೆ ಮುಂದಾಗಿಲ್ಲ. ಟಿಕೆಟ್ ಬುಕ್ಕಿಂಗ್ ಸೆಂಟರ್‌ನಲ್ಲಿದ್ದ ಕಂಪ್ಯೂಟರ್, ಇಂಟರ್‌ನೆಟ್ ಸಿಸ್ಟಂ ಮತ್ತಿತ್ತರ ವಸ್ತುಗಳನ್ನು ಸದ್ದಿಲ್ಲದೇ ಹೊತ್ತುಕೊಂಡು ಹೋದ ನೈಋತ್ಯ ರೈಲ್ವೇ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಇಂದಿಗೂ ಮಡಿಕೇರಿ ಕಡೆ ತಲೆ ಹಾಕಿಲ್ಲ. ಹೀಗಾಗಿ ಮೊದಲಿದ್ದ ಕಚೇರಿಯ ಬಾಗಿಲು ಮುಚ್ಚಿಕೊಂಡಿದ್ದು, ಪಾಚಿ ಕಟ್ಟಿದ 'ನೈಋತ್ಯ ರೈಲ್ವೇ ಬೋರ್ಡ್' ಮಾತ್ರ ನೇತಾಡುತ್ತಿದೆ.

ಲಕ್ಷ ರೂ.ಆದಾಯ: ಕೊಡಗಿಗೆ ಸಮೀಪ ಎಂಬಂತೆ ಮೈಸೂರು, ಪುತ್ತೂರು, ಮಂಗಳೂರು ಮತ್ತು ಹಾಸನ ಭಾಗಗಳಲ್ಲಿ ರೈಲ್ವೇ ನಿಲ್ದಾಣಗಳಿವೆ. ಜಿಲ್ಲೆಯಿಂದ ಹೊರ ತೆರಳುವವರು ಮತ್ತು ಬರುವವರು ಹೆಚ್ಚಾಗಿ ಮೈಸೂರು ರೈಲ್ವೆಯನ್ನು ಅವಲಂಬಿಸುತ್ತಾರೆ. ಮಡಿಕೇರಿಯಲ್ಲಿ ನೈಋತ್ಯ ರೈಲ್ವೆ ಬುಕ್ಕಿಂಗ್ ಸೆಂಟರ್ ಇದ್ದ ಸಂದರ್ಭ, ಕಾಫಿ ಕೊಯ್ಲಿನ ಅವಧಿಯಾದ ಅಕ್ಟೋಬರ್, ನವೆಂಬರ್ ಹಾಗೂ ಜನವರಿಯಿಂದ ಮಾರ್ಚ್‌ವರೆಗಿನ ಅವಧಿಯಲ್ಲಿ ಈ ಬುಕ್ಕಿಂಗ್ ಸೆಂಟರ್‌ನಲ್ಲಿ ಪ್ರತಿನಿತ್ಯ ಸರಾಸರಿ 2 ರಿಂದ 4 ಲಕ್ಷ ರೂ. ವ್ಯವಹಾರ ನಡೆಯುತ್ತಿತ್ತು ಎನ್ನುವುದು ಒಂದು ಲೆಕ್ಕಾಚಾರ.

ಕಾರ್ಮಿಕರಿಗೆ ಅನುಕೂಲ: ಕೊಡಗು ಜಿಲ್ಲೆಗೆ ಪಶ್ಚಿಮ ಬಂಗಾಳ, ಬಿಹಾರ, ಅಸ್ಸಾಂ, ಉತ್ತರ ಪ್ರದೇಶ, ದಕ್ಷಿಣದ ರಾಜ್ಯಗಳಾದ ತಮಿಳುನಾಡು, ಕೇರಳದಿಂದ ಹಾಗೂ ರಾಜ್ಯದ ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ, ಹುಬ್ಬಳ್ಳಿ ವಿಭಾಗಗಳಿಂದ ಕಾಫಿ ಕೊಯ್ಲು ಸಂದರ್ಭ ತಂಡೋಪತಂಡವಾಗಿ ಕಾರ್ಮಿಕರು ಆಗಮಿಸುತ್ತಾರೆ. ಅವರು ತಾವಿರುವ ಪ್ರದೇಶದಿಂದ ಕೊಡಗಿಗೆ ಆಗಮಿಸಲು ಇಂದಿಗೂ ರೈಲ್ವೇ ಮಾರ್ಗವನ್ನೇ ನೆಚ್ಚಿಕೊಂಡಿದ್ದಾರೆ. ಬಸ್ ಮಾರ್ಗ ದುಬಾರಿ ಮತ್ತು ತ್ರಾಸದಾಯಕವಾಗಿರುವುದು ಇದಕ್ಕೆ ಮೂಲ ಕಾರಣ.

ಮಡಿಕೇರಿಯಲ್ಲಿ ರೈಲ್ವೆ ಟಿಕೆಟ್ ಬುಕ್ಕಿಂಗ್ ಸೆಂಟರ್ ಇದ್ದ ಸಂದರ್ಭ ಇಲ್ಲಿಯೇ ತಾವು ತೆರಳಬೇಕಾದ ರೈಲ್ವೆ ಟಿಕೆಟ್‌ಗಳನ್ನು ಮುಂಗಡವಾಗಿ ಬುಕ್ ಮಾಡಿ ಸಾಕಷ್ಟು ಅನುಕೂಲತೆಯನ್ನು ಕಾರ್ಮಿಕರು ಪಡೆಯುತ್ತಿದ್ದರು. ಆದರೆ ಇಂದು ಜಿಲ್ಲೆಯ ಸೈನಿಕರು ಮತ್ತು ಕಾರ್ಮಿಕರು ರೈಲ್ವೆ ಬುಕ್ಕಿಂಗ್‌ಗೆ ಪರದಾಡುವಂತಾಗಿದೆ. ಪ್ರಸ್ತುತ ಆನ್‌ಲೈನ್ ಬುಕ್ಕಿಂಗ್ ವ್ಯವಸ್ಥೆಗಳು ಇದೆಯಾದರು ಕಾರ್ಮಿಕ ಸಮೂಹ ಇದನ್ನು ಬಳಸುವುದು ಅಷ್ಟಕ್ಕಷ್ಟೆ ಎಂಬುದು ಕೂಡ ವಾಸ್ತವ.

ಭರವಸೆ ಮರೆತರೇ?: ಜಿಲ್ಲೆಯ ಗಡಿ ಭಾಗದವರೆಗೆ ರೈಲು ಸೇವೆ ನೀಡಲಾಗುತ್ತದೆ ಎಂದು ಜನಪ್ರತಿನಿಧಿಗಳು ಭರವಸೆ ನೀಡಿದ್ದಾರೆ. ರೈಲ್ವೆ ಸಂಪರ್ಕ ಬೇಕು ಬೇಡ ಎನ್ನುವ ದೊಡ್ಡ ಚರ್ಚೆಯೇ ನಡೆಯುತ್ತಿರುವ ನಡುವೆಯೇ ರೈಲು ಮಾರ್ಗದ ಪ್ರಾಥಮಿಕ ಸರ್ವೇ ಕಾರ್ಯ ಈ ಹಿಂದೆ ನಡೆದಿದ್ದು, ರೈಲು ಯಾವಾಗ ಬರುತ್ತದೋ ತಿಳಿದಿಲ್ಲ. ಅಲ್ಲಿಯವರೆಗೆ ಮಡಿಕೇರಿಯಲ್ಲಿದ್ದ ಏಕೈಕ ರೈಲ್ವೆ ಬುಕ್ಕಿಂಗ್ ಸೆಂಟರ್‌ನ್ನು ಉಳಿಸಿಕೊಳ್ಳುವ ಜವಾಬ್ದಾರಿ ಜನಪ್ರತಿನಿಧಿಗಳ ಮೇಲಿತ್ತು. ಆದರೆ ಆ ಬಗ್ಗೆ ಉಸ್ತುವಾರಿ ಸಚಿವರು, ಸಂಸದರು, ಶಾಸಕರು ತಮ್ಮ ಆಸಕ್ತಿ ಕಳೆದುಕೊಂಡರೇ? ನೀಡಿದ್ದ ಭರವಸೆಯನ್ನು ಮರೆತು ಹೋದರೇ? ಎಂಬ ಪ್ರಶ್ನೆ ಸಾರ್ವಜನಿಕರನ್ನು ಅದರಲ್ಲೂ ಮುಖ್ಯವಾಗಿ ರೈಲ್ವೇ ಟಿಕೆಟ್ ಬುಕ್ಕಿಂಗ್ ಸೆಂಟರ್ ಅನ್ನು ಬಹುವಾಗಿ ಅವಲಂಬಿಸಿಕೊಂಡಿದ್ದ ಜನರನ್ನು ಕಾಡುತ್ತಿದೆ.

ಜಿಲ್ಲೆಯ ಜನತೆಗೆ ಉಪಯುಕ್ತವಾಗಿದ್ದ ನೈಋತ್ಯ ರೈಲ್ವೆ ಟಿಕೆಟ್ ಬುಕ್ಕಿಂಗ್ ಸೆಂಟರ್ ಅನ್ನು ಮತ್ತೆ ಆರಂಭಿಸಲು ಜಿಲ್ಲಾ ಉಸ್ತುವಾರಿ ಸಚಿವರು, ಸಂಸದರು, ಜಿಲ್ಲೆಯ ಜನಪ್ರತಿನಿಧಿಗಳು ಹಾಗೂ ಜಿಲ್ಲಾಡಳಿತ ಆಸಕ್ತಿ ವಹಿಸಬೇಕು ಎಂದು ಸಾರ್ವಜನಿಕ ವಲಯದಿಂದ ಆಗ್ರಹ ಕೇಳಿ ಬರುತ್ತಿದೆ.

ಜಿಲ್ಲಾಡಳಿತದಿಂದ ವಾಲ್ಮೀಕಿ ಜಯಂತಿ ಆಚರಣೆ

ಪರಿಶಿಷ್ಟ ಜಾತಿ, ಪಂಗಡಗಳ ಮೀಸಲಾತಿ ಹೆಚ್ಚಳ ಸರ್ಕಾರದ ಐತಿಹಾಸಿಕ ತೀರ್ಮ



ಮಡಿಕೇರಿ, ಅ.9– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಪರಿಶಿಷ್ಟ ಜಾತಿ (ಶೇ.15 ರಿಂದ 17ಕ್ಕೆ) ಮತ್ತು ಪರಿಶಿಷ್ಟ ಪಂಗಡಗಳ (ಶೇ.3 ರಿಂದ 7ಕ್ಕೆ) ಮೀಸಲಾತಿ ಪ್ರಮಾಣವನ್ನು ಹೆಚ್ಚಳ ಮಾಡಲು ನಿರ್ಧರಿಸಿದ್ದು, ಇದು ಕರ್ನಾಟಕ ಸರ್ಕಾರದ ಐತಿಹಾಸಿಕ ನಿರ್ಧಾರ ಎಂದು ಶಾಸಕರಾದ ಎಂ.ಪಿ.ಅಪ್ಪಚ್ಚು ರಂಜನ್ ಮತ್ತು ಕೆ.ಜಿ.ಬೋಪಯ್ಯ ತಿಳಿಸಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ನಗರದ ಕಾವೇರಿ ಕಲಾ ಕ್ಷೇತ್ರದಲ್ಲಿ ಭಾನುವಾರ ನಡೆದ 'ಮಹರ್ಷಿ ವಾಲ್ಮೀಕಿ ಜಯಂತಿ' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ ದಾಸ್ ನೇತೃತ್ವದ ಆಯೋಗ ಸಲ್ಲಿಸಿರುವ ವರದಿಯನ್ನು ಯಥಾವತ್ತಾಗಿ ಅನುಷ್ಠಾನಕ್ಕೆ ತರಲು ಸರ್ಕಾರ ತೀರ್ಮಾನಿಸಿದೆ. ಆ ನಿಟ್ಟಿನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಸಾಮಾಜಿಕ ನ್ಯಾಯಪರ ನುಡಿದಂತೆ ನಡೆದಿದೆ ಎಂದು ಶಾಸಕದ್ವಯರು ಹೇಳಿದರು.

ಸರ್ಕಾರಿ ಜಮೀನುಗಳ ಸಂರಕ್ಷಣಾ ಸಮಿತಿ ಅಧ್ಯಕ್ಷರು ಹಾಗೂ ಶಾಸಕ ಕೆ.ಜಿ. ಬೋಪಯ್ಯ ಅವರು ಮಾತನಾಡಿ, ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಉಪ ಯೋಜನೆಗಳಿಗೆ ಸಾಕಷ್ಟು ಅನುದಾನ ಮೀಸಲಿಟ್ಟಿದೆ. ಸಮಾಜ ಕಲ್ಯಾಣ, ಪರಿಶಿಷ್ಟ ಪಂಗಡ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿರುವ ಅಭಿವೃದ್ಧಿ ನಿಗಮಗಳಿಗೆ ಹೆಚ್ಚಿನ ಅನುದಾನ ಹೀಗೆ ಹಲವು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ ಎಂದರು.

ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಮಾತನಾಡಿ, ಬಡತನ ರೇಖೆಗಿಂತ ಕೆಳಗಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ 75 ರಷ್ಟು ಉಚಿತ ವಿದ್ಯುತ್ ಯೂನಿಟ್ ನೀಡಲು ಸರ್ಕಾರ ಮುಂದಾಗಿದೆ. ಡಾ.ಬಿ.ಆರ್. ಅಂಬೇಡ್ಕರ್ ವಿದ್ಯಾರ್ಥಿ ನಿಲಯ ಹಾಗೂ ವಸತಿ ಶಾಲೆಗಳ ನಿರ್ಮಾಣಕ್ಕೆ ಮುಂದಾಗಿದೆ. ಭೂ ಚೇತನ, ಸ್ವಯಂ ಉದ್ಯೋಗ ಯೋಜನೆ ಹಾಗೂ ವಸತಿ ಯೋಜನೆಗೆ ಆದ್ಯತೆ ಹೀಗೆ ಹಲವು ಕಾರ್ಯಕ್ರಮಗಳನ್ನು ಸರ್ಕಾರ ಕೈಗೊಂಡಿದೆ ಎಂದರು.

ನಗರದ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜಿನ ಪ್ರಾಧ್ಯಾಪಕ ಡಾ.ಶ್ರೀಧರ್ ಆರ್.ಹೆಗಡೆ ಅವರು ಮಾತನಾಡಿ, ಇಡೀ ವಿಶ್ವಕ್ಕೆ ರಾಮಾರಾಜ್ಯ ಪರಿಚಯಿಸಿದ ಕೀರ್ತಿ ಮಹರ್ಷಿ ವಾಲ್ಮೀಕಿ ಅವರದ್ದಾಗಿದೆ. ರಾಮಾಯಣ ಮಹಾಕಾವ್ಯ ಬರೆಯುವ ದೇಶದ ಸಂಸ್ಕೃತಿ ಮತ್ತು ಪರಂಪರೆ ಬಗ್ಗೆ ಬೆಳಕು ಚೆಲ್ಲಿದ್ದಾರೆ ಎಂದರು.

ಶ್ರೀರಾಮನನ್ನು ಕುರಿತು ಇಡೀ ಬ್ರಹ್ಮಾಂಡವೇ ಮೆಚ್ಚಿಕೊಳ್ಳುವಂತಹ ರಾಮಾಯಣ ಒಂದು ಅದ್ಭುತ ಗ್ರಂಥವನ್ನು ವಾಲ್ಮೀಕಿ ರಚಿಸಿದರು. ವಿಶ್ವಕ್ಕೆ ರಾಮಾಯಣದಂತಹ ಮಹಾನ್ ಗ್ರಂಥವನ್ನು ನೀಡಿದ ಮಹರ್ಷಿ ವಾಲ್ಮೀಕಿ ಅವರು ಮಾನವ ಕುಲಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಹಾಗೆಯೇ ಮಾನವೀಯತೆಯೇ ಧರ್ಮ ಎಂಬುದನ್ನು ಪ್ರತಿಪಾದಿಸಿದ್ದಾರೆ ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ನಂಜುಡೇಗೌಡ ಅವರು ಮಾತನಾಡಿದರು.

ಸರ್ಕಾರದ ಸವಲತ್ತುಗಳನ್ನು ಅರ್ಹ ಫಲಾನುಭವಿಗಳಿಗೆ ನೀಡಲಾಯಿತು. ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಹಾಗೂ ನಾಟಿ ವೈದ್ಯಕೀಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದವರಿಗೆ ಶಾಲು, ಪ್ರಶಸ್ತಿ ಪತ್ರ ನೀಡಿ ಆತ್ಮೀಯವಾಗಿ ಸನ್ಮಾನಿಸಲಾಯಿತು. ತಿತಿಮತಿಯ ಆದಿವಾಸಿ ಮುಖಂಡರಾದ ಸುಬ್ರು, ಬಸವನಹಳ್ಳಿ ಲ್ಯಾಂಪ್ ಸೊಸೈಟಿ ಅಧ್ಯಕ್ಷ ಆರ್.ಕೆ.ಚಂದ್ರು ಇತರರು ಇದ್ದರು.

ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಸಮನ್ವಯಾಧಿಕಾರಿ ಎಸ್.ಹೊನ್ನೇಗೌಡ ಅವರು ಸ್ವಾಗತಿಸಿದರು. ತಿತಿಮತಿಯ ಏಕಲವ್ಯ ವಸತಿ ಶಾಲೆ ವಿದ್ಯಾರ್ಥಿನಿಯರು ಪ್ರಾರ್ಥಿಸಿದರು, ಬಾಳುಗೋಡು ಏಕಲವ್ಯ ವಸತಿ ಶಾಲೆಯ ಪ್ರಾಂಶುಪಾಲರಾದ ದಿಲನ್ ಮುತ್ತಣ್ಣ ನಿರೂಪಿಸಿದರು, ತಿತಿಮತಿ ಮೋರಾರ್ಜಿ ವಸತಿ ಶಾಲೆಯ ಪ್ರಾಂಶುಪಾಲರಾದ ಷಡಕ್ಷರಿ ವಂದಿಸಿದರು.

ನಾಪೋಕ್ಲುವಿನಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ



ನಾಪೋಕ್ಲು, ಅ.9– ಹೋಬಳಿ ವ್ಯಾಪ್ತಿಯ ವಿವಿಧ ಶಾಲೆಗಳಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಭಾನುವಾರ ಆಚರಿಸಲಾಯಿತು.


ಇಲ್ಲಿನ ಶ್ರೀರಾಮ ಟ್ರಸ್ಟ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿದ್ಯಾಸಂಸ್ಥೆಯ ಅಧ್ಯಕ್ಷ ಬೊಪ್ಪಂಡ ಜಾಲಿ ಬೋಪಯ್ಯ ಅಧ್ಯಕ್ಷತೆ ವಹಿಸಿದ್ದರು. ಪ್ರಾಂಶುಪಾಲರಾದ ಕಲ್ಯಾಟ ಂಡ ಶಾರದಾ ಅಪ್ಪಣ್ಣ, ಶಿಕ್ಷಕಿ ಅರೆಯಡ ಅನಿತಾ ದೇವಯ್ಯ ದಿನದ ಮಹತ್ವದ ಕುರಿತು ಮಾತನಾಡಿದರು. ವೇದಿಕೆಯಲ್ಲಿ ಉಪಾಧ್ಯಕ್ಷ ಕಲಿಯಂಡ ಹ್ಯಾರಿ ಮಂದಣ್ಣ, ಶಿಕ್ಷಕ ವೃಂದ ಉಪಸ್ಥಿತರಿದ್ದರು. ಶಿಕ್ಷಕಿ ಮುಂಡಡ ಕವಿತಾ ಅಯ್ಯಣ್ಣ ಪ್ರಾರ್ಥಿಸಿದರು. ಅಂಬ್ರಟಿ ಭಗವತಿ ಪ್ರಸಾದ್ ನಿರೂಪಿಸಿ ವಂದಿಸಿದರು.

ಕುಶಾಲನಗರದಲ್ಲಿ ಆಟೋ ಚಾಲಕ ಆತ್ಮಹತ್ಯೆ

ಕುಶಾಲನಗರ, ಅ.9– ಸಮೀಪದ ಮುಳ್ಳುಸೋಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಜನತಾ ಕಾಲೋನಿ ನಿವಾಸಿ ಆಟೋ ಚಾಲಕನೋರ್ವ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಭಾನುವಾರ ನಡೆದಿದೆ.

ಜನತಾ ಕಾಲೋನಿ ನಿವಾಸಿ ಕೃಷ್ಣ ಅಲಿಯಾಸ್ ಕಣ್ಣ(40) ಮೃತ ವ್ಯಕ್ತಿ. ಈತ ತನ್ನ ಮನೆಯಲ್ಲಿಯೇ ನೇಣಿಗೆ ಶರಣಾಗಿದ್ದಾನೆ. ಈತ ಆಟೋ ಚಾಲನೆಯೊಂದಿಗೆ ಸೆಂಟ್ರಿಂಗ್ ಕೆಲಸ ಮಾಡುತ್ತಿದ್ದ. ಇವರ ದಾಂಪತ್ಯ ಜೀವನದಲ್ಲಿ ಬಿರುಕು ಉಂಟಾಗಿ ವಿಚ್ಛೇದನ ನೀಡಿದ್ದರು. ಇದರಿಂದ ಜೀವನದಲ್ಲಿ ಜಿಗುಪ್ಸೆಗೊಂಡು ಆತ್ಮಹತ್ಯೆಗೆ ಶರಣಾಗಿರಬಹುದು ಎಂದು ಪೊಲೀಸ್ ಮೂಲಗಳಿಂದ ತಿಳಿದು ಬಂದಿದೆ.

ಬರ್ನಾಡ್ ನಿಧನ



ವಿರಾಜಪೇಟೆ, ಅ.9– ವಿರಾಜಪೇಟೆ ನಗರದ ಜೈನರ ಬೀದಿಯ ನಿವಾಸಿ, ಬ್ರಾಂದಿ ಅಂಗಡಿ ಮಾಲಿಕ ಎಸ್.ಬರ್ನಾಡ್ (92) ಅವರು ಭಾನುವಾರ ಬೆಳಗ್ಗೆ ತಮ್ಮ ನಿವಾಸದಲ್ಲಿ ನಿಧನರಾದರು. ಮೃತರಿಗೆ ಮೂರು ಪುತ್ರರು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸೋಮವಾರ (ಅ.10) ಬೆಳಗ್ಗೆ 10 ಗಂಟೆಗೆ ವಿರಾಜಪೇಟೆ ಸಂತ ಅನ್ನಮ್ಮ ಚರ್ಚ್ ಬಳಿ ನಡೆಯಲಿದೆ ಎಂದು ಕುಟುಂಬಸ್ತರು ತಿಳಿಸಿದ್ದಾರೆ.

ಲಕ್ಷ್ಮಣ ರಾಜೇಅರಸ್



ಕುಶಾಲನಗರ, ಅ.9– ಕೂಡ್ಲೂರು ಗ್ರಾಮದ ನಿವಾಸಿ ತಾಲೂಕು ಪಂಚಾಯಿತಿ ಮಾಜಿ ಸದಸ್ಯರಾದ ಕೂಡಿಗೆ ವಿಎಸ್‌ಎಸ್‌ಎನ್ ನಿರ್ದೇಶಕ ಲಕ್ಷ್ಮಣರಾಜೇ ಅರಸು(68) ಭಾನುವಾರ ಬೆಳಗ್ಗೆ ಅನಾರೋಗ್ಯದಿಂದಾಗಿ ನಿಧನ ಹೊಂದಿದರು.

ಮೃತರು ಪತ್ನಿ, ಓರ್ವ ಪುತ್ರ, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ ಕೂಡ್ಲೂರು ಗ್ರಾಮದ ಕಾವೇರಿ ನದಿ ದಂಡೆಯ ಹಿಂದೂ ರುದ್ರಭೂಮಿಯಲ್ಲಿ ನಡೆಯಿತು.

ಜನರ ಸಂಕಷ್ಟ ಪರಿಹರಿಸುವುದೇ ರಾಮರಾಜ್ಯ ಪರಿಕಲ್ಪನೆ

ಶಾಸಕ ಸಿ.ಪುಟ್ಟರಂಗಶೆಟ್ಟಿ ಅಭಿಮತ



ಚಾಮರಾಜನಗರ, ಅ.9–ಜನರ ಸಂಕಷ್ಟಗಳನ್ನು ಆಲಿಸಿ, ಪರಿಹರಿಸುವುದೇ ರಾಮರಾಜ್ಯದ ಪರಿಕಲ್ಪನೆ ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ಅಭಿಪ್ರಾಯಪಟ್ಟರು.

ನಗರದ ವರನಟ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರಲ್ಲಿಂದು ಜಿಲ್ಲಾಡಳಿತ, ಜಿಪಂ ಹಾಗೂ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ಆಯೋಜಿಸಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಮಾಯಣ, ಮಹಾಭಾರತ ಭಾರತದ ಶ್ರೇಷ್ಠ ಮಹಾಗ್ರಂಥಗಳಾಗಿದ್ದು, ರಾಮಾಯಣ ಸಾಮಾಜಿಕ ನ್ಯಾಯದ ಪರಿಕಲ್ಪನೆಯಿಡಿ ಜಗತ್ಪ್ರಸಿದ್ಧವಾಗಿದೆ. ಮಹಾತ್ಮ ಗಾಂಧೀಜಿ ಸಹ ರಾಮರಾಜ್ಯದ ಪರಿಕಲ್ಪನೆಯಿಂದ ಪ್ರೇರೇಪಿತರಾಗಿದ್ದರು. ಶ್ರೀರಾಮನ ರಾಮರಾಜ್ಯ ಇಂದಿಗೂ ಮಾದರಿಯಾಗಿದೆ. ಸಮುದಾಯದ ಮಕ್ಕಳು ಉತ್ತಮ ಶಿಕ್ಷಣ ಪಡೆದು ಸಮಾಜದ ಮುನ್ನೆಲೆಗೆ ಬರಬೇಕು ಎಂದು ಪುಟ್ಟಂಗಶೆಟ್ಟಿ ಸಲಹೆ ನೀಡಿದರು.

ಕಾರ್ಯಕ್ರಮ ಉದ್ಘಾಟಿಸಿದ ಜಿಲ್ಲಾಧಿಕಾರಿ ಚಾರುಲತಾ ಸೋಮಲ್, ರಾಮಾಯಣ ರಚಿಸುವ ಮೂಲಕ ಮಹರ್ಷಿ ವಾಲ್ಮೀಕಿಯವರು ಜನಮಾನಸದಲ್ಲಿ ಅಜರಾಮರರಾಗಿದ್ದು, ರಾಮಾಯಣ ಚಿರಸ್ಥಾಯಿಯಾಗಿರಲಿದೆ ಎಂದರು.

ಮೈಸೂರು ವಿಶ್ವವಿದ್ಯಾಲಯದ ಜೆನೆಟಿಕ್ಸ್ ಮತ್ತು ಜಿನೋಮಿಕ್ಸ್ ವಿಭಾಗದ ಮುಖ್ಯಸ್ಥೆ ಪ್ರೊ.ಸುತ್ತೂರು ಎಸ್.ಮಾಲಿನಿ ಉಪನ್ಯಾಸ ನೀಡಿ, ರಾಮಾಯಣ, ಮಹಾಭಾರತ ಜಗತ್ತಿನ ಎರಡು ಸಾರ್ವಕಾಲಿಕ ಶ್ರೇಷ್ಠ ಕಲಾಕೃತಿಗಳಾಗಿದ್ದು, ವಾಲ್ಮೀಕಿ ರಾಮಾಯಣದಲ್ಲಿ 26 ಸಾವಿರ ಶ್ಲೋಕಗಳು ಹಾಗೂ 7 ಕಾಂಡಗಳಿವೆ. ರಾಮಾಯಣದಲ್ಲಿ ಆದರ್ಶ ಪುರುಷ, ಮಹಿಳೆ ಸೇರಿದಂತೆ ಕುಟುಂಬದ ಇತರೆ ಸಂಬಂಧಗಳು ಹೇಗೆ ಇತರರಿಗೆ ಮಾದರಿಯಾಗಿರಬೇಕು, ಆದರ್ಶ ನಾಯಕತ್ವ ಗುಣ ಹೇಗಿರಬೇಕೆಂಬುದನ್ನು ಕಟ್ಟಿಕೊಡಲಾಗಿದೆ ಎಂದರು.

ಇದೇ ವೇಳೆ ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಕೊಳ್ಳೇಗಾಲದ ವಿದ್ಯಾರ್ಥಿನಿ ಲಿಖಿತ ಅವರಿಗೆ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ 1 ಲಕ್ಷ ರೂ. ಪ್ರೋತ್ಸಾಹಧನ ಹಾಗೂ ಇತರೆ ವಿದ್ಯಾರ್ಥಿಗಳಿಗೆ ಅಭಿನಂದನಾ ಪತ್ರ ನೀಡಿ ಸನ್ಮಾನಿಸಲಾಯಿತು.

ಇದೇ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಅವರು ವಾಲ್ಮೀಕಿ ಜಯಂತಿ ಅಂಗವಾಗಿ ನೀಡಿರುವ ಸಂದೇಶವನ್ನು ಕಾರ್ಯಕ್ರಮದಲ್ಲಿ ವಾಚಿಸಲಾಯಿತು. ಕಾಡಾ ಅಧ್ಯಕ್ಷ ಜಿ.ನಿಜಗುಣರಾಜು, ನಗರಸಭೆ ಅಧ್ಯಕ್ಷೆ ಆಶಾ ನಟರಾಜು, ಸದಸ್ಯರಾದ ಪ್ರಕಾಶ್, ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಎಸ್‌ಪಿ ಟಿ.ಪಿ.ಶಿವಕುಮಾರ್, ಎಡಿಸಿ ಎಸ್.ಕಾತ್ಯಾಯಿನಿದೇವಿ, ಎಎಸ್‌ಪಿ ಕೆ.ಎಸ್.ಸುಂದರರಾಜು, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಮಂಜುಳಾ, ಮಹರ್ಷಿ ವಾಲ್ಮೀಕಿ ಪರಿಶಿಷ್ಟ ವರ್ಗಗಳ ನಿಗಮದ ಜಿಲ್ಲಾ ವ್ಯವಸ್ಥಾಪಕ ಪ್ರಮೋದ್‌ಕುಮಾರ್, ಮುಖಂಡರಾದ ಕೆಲ್ಲಂಬಳ್ಳಿ ಸೋಮನಾಯಕ, ಚಾ.ಸಿ. ಸೋಮನಾಯಕ, ಮಾಜಿ ನಗರಸಭಾ ಸದಸ್ಯರಾದ ಸುರೇಶ್ ನಾಯಕ, ಕನ್ನಡ ಜಾನಪದ ಪರಿಷತ್ತಿನ ಜಿಲ್ಲಾ ಅಧ್ಯಕ್ಷರಾದ ಸುರೇಶ್‌ನಾಗ್, ರಾಜುನಾಯಕ ಇತರರು ಕಾರ್ಯಕ್ರಮದಲ್ಲಿದ್ದರು.

ಹನೂರಲ್ಲೂ ವಾಲ್ಮೀಕಿ ಮಹರ್ಷಿ ಸ್ಮರಣೆ



ಹನೂರು, ಅ.9–ಮಾನವ ಸಂಬಂಧಗಳು ಹಾಗೂ ಜೀವನ ಮೌಲ್ಯಗಳ ಹೂರಣವನ್ನೇ ರಾಮಾಯಣದ ಮೂಲಕ ಜಗಕೆ ಸಾದರಪಡಿಸಿದ ಆದಿಕವಿ ಮಹರ್ಷಿ ವಾಲ್ಮೀಕಿ ಅವರ ತತ್ವಾದರ್ಶಗಳು ಪ್ರಸ್ತುತ ಸಮಾಜಕ್ಕೆ ಅತ್ಯಗತ್ಯ ಎಂದು ಶಾಸಕ ಆರ್.ನರೇಂದ್ರ ಅಭಿಪ್ರಾಯಪಟ್ಟರು. ಪಟ್ಟಣದ ಲೋಕೋಪಯೋಗಿ ವಸತಿಗೃಹ ಸಭಾಂಗಣದಲ್ಲಿ ತಾಲೂಕು ಆಡಳಿತದಿಂದ ಆಯೋಜಿಸಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ವಾಲ್ಮೀಕಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಬಳಿಕ ಮಾತನಾಡಿದರು.

ಬೇಡನಾಗಿದ್ದ ರತ್ನಕರ, ನಾರದ ಮುನಿಗಳಿಂದ ಪರಿವರ್ತನೆ ಹೊಂದಿ ದೀರ್ಘ ತಪಸ್ಸಿನಿಂದ ರಾಮಾಯಣ ರಚಿಸಿ ಮಾನವ ಕುಲಕ್ಕೆ ಕೊಡುಗೆ ನೀಡಿದ್ದಾರೆ. ವಾಲ್ಮೀಕಿ ಮಹರ್ಷಿ ಬರೆದ ರಾಮಾಯಣ ವಿಶ್ವ ವಿಖ್ಯಾತವಾಗಿದೆ. ಪ್ರಸ್ತುತ ಸಂದರ್ಭದಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ ವಿಶೇಷತೆಯಿಂದ ಕೂಡಿದ್ದು, ಸರ್ಕಾರ ಎಸ್ಟಿ ಸಮುದಾಯಕ್ಕೆ ಮೀಸಲಾತಿ ಹೆಚ್ಚಳಕ್ಕಾಗಿ ಶ್ರೀ ಪ್ರಸನ್ನಾನಂದಾಪುರಿ ಸ್ವಾಮೀಜಿ ಬೆಂಗಳೂರಿನಲ್ಲಿ 241 ದಿನಗಳ ಅನಿರ್ದಿಷ್ಟಾವಧಿ ಧರಣಿ ನಡೆಸಿದ ಪ್ರಯತ್ನಕ್ಕೆ ನ್ಯಾಯ ದೊರಕಿದೆ ಎಂದರು. ಮುಖಂಡ ಪಾಳ್ಯ ಕೃಷ್ಣ ಮಾತನಾಡಿದರು. ಈ ಸಂದರ್ಭದಲ್ಲಿ ಪಪಂ ಅಧ್ಯಕ್ಷೆ ಚಂದ್ರಮ್ಮ, ಉಪಾಧ್ಯಕ್ಷ ಗಿರೀಶ್, ಸದಸ್ಯರು, ತಹಸೀಲ್ದಾರ್ ಆನಂದಯ್ಯ, ತಾಪಂ ಇಓ ಶ್ರೀನಿವಾಸ್, ವಿವಿಧ ಇಲಾಖೆ ಅಧಿಕಾರಿಗಳು, ನಾಯಕ ಸಮುದಾಯದ ವಿವಿಧ ಗ್ರಾಮಗಳ ಮುಖಂಡರು, ಯಜಮಾನರು ಉಪಸ್ಥಿತರಿದ್ದರು.



ದಾವಣಗೆರೆ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲ, ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ನೇತೃತ್ವದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮ್ಮದ್, ಮಾಜಿ ಸಚಿವ ಹೆಚ್.ಎಂ.ರೇವಣ್ಣ, ಮಾಜಿ ಶಾಸಕ ಎಸ್.ಎಸ್.ಮಲ್ಲಿಕಾರ್ಜುನ ಸೇರಿದಂತೆ ಜಿಲ್ಲಾ ಹಾಗೂ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ಸ್ಥಳೀಯ ಮುಖಂಡರಿದ್ದರು.

ಶ್ರೀ ಮಹದೇಶ್ವರಸ್ವಾಮಿ ಸೇವಾ ಸಮಿತಿಯಿಂದ ಬೆಟ್ಟಕ್ಕೆ ಪಾದಯಾತ್ರೆ

ಹನೂರು, ಅ.9– ಶ್ರೀ ಮಹದೇಶ್ವರಸ್ವಾಮಿ ಸೇವಾ ಸಮಿತಿಯಿಂದ ಹಮ್ಮಿಕೊಂಡಿದ್ದ ಮಲೆಮಹದೇಶ್ವರಬೆಟ್ಟ ಪಾದಯಾತ್ರೆಗೆ ಸಾಹಸ್ರಾರು ಭಕ್ತರು ಜೊತೆಯಾದರು.

ರಾಜ್ಯದ ಪ್ರಸಿದ್ಧ ಧಾರ್ಮಿಕ ಯಾತ್ರಾ ಕ್ಷೇತ್ರ ಶ್ರೀ ಮಲೆ ಮಹದೇಶ್ವರಬೆಟ್ಟಕ್ಕೆ ಅಮವಾಸ್ಯೆ, ಶಿವರಾತ್ರಿ, ಯುಗಾದಿ, ದೀಪಾವಳಿ ಸಂದರ್ಭಗಳಲ್ಲಿ ಕನಕಪುರ, ರಾಮನಗರ, ಪಾಂಡವಪುರ, ಮಂಡ್ಯ, ಬೆಂಗಳೂರು ಹಾಗೂ ರಾಜ್ಯದ ಇತರೆ ಜಿಲ್ಲೆಗಳಿಂದ ಹರಕೆಹೊತ್ತ ಲಕ್ಷಾಂತರ ಭಕ್ತರು ನೂರಾರು ಕಿಮೀ ಪಾದಯಾತ್ರೆ ಮೂಲಕ ಮಾದಪ್ಪನ ದರ್ಶನ ಪಡೆಯುತ್ತಾರೆ. ಅದರಂತೆ ಹನೂರು ಪಟ್ಟಣ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಮಾದಪ್ಪನ ಭಕ್ತರು ಸಹ ಪಾದಯಾತ್ರೆ ಮಾಡಿ ತಮ್ಮ ಹರಕೆ ತೀರಿಸುತ್ತಾರೆ.

ಶ್ರೀ ಮಹದೇಶ್ವರ ಸೇವಾ ಸಮಿತಿ ಅಧ್ಯಕ್ಷ ಗಂಗಾಧರ ಮಾತನಾಡಿ, 19 ವರ್ಷಗಳ ಹಿಂದೆ 20 ಮಂದಿ ಮೂಲಕ ಪಾದಯಾತ್ರೆ ಹಮ್ಮಿಕೊಳ್ಳಲಾಗಿತ್ತು. ಇದೀಗ ಸುಮಾರು 2 ಸಾವಿರಕ್ಕೂ ಹೆಚ್ಚು ಭಕ್ತರು ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದರು. ಮಹದೇಶ್ವರಸ್ವಾಮಿ ಭಕ್ತರು ಮಾದಪ್ಪನಿಗೆ 'ಉಘೇ ಉಘೇ ಮಾದಪ್ಪ' ಘೋಷಣೆಗಳನ್ನು ಕೂಗುತ್ತಾ ಪಾದಯಾತ್ರೆ ಆರಂಭಿಸಿದರು. ಈ ಸಂದರ್ಭದಲ್ಲಿ ಸೇವಾ ಸಮಿತಿ ಸದಸ್ಯರಾದ ನಾರಾಯಣ್, ಶಂಕರ್, ಶಶಿ, ನಾಗೇಂದ್ರ, ಶಿವಣ್ಣ, ನಾಗಣ್ಣ, ಜಡೇಸ್ವಾಮಿ ಸೇರಿದಂತೆ ಇತರರಿದ್ದರು.

ಚಾ.ನಗರದಲ್ಲಿ ಡಾ.ರಾಜ್‌ಕುಮಾರ್ ಮ್ಯೂಸಿಯಂ ಸ್ಥಾಪನೆಯಾಗಬೇಕು

ಸರ್ಕಾರಕ್ಕೆ ನಟ ಮಂಡ್ಯ ರಮೇಶ್ ಮನವಿ



ಚಾಮರಾಜನಗರ, ಅ.9–ವರನಟ ಡಾ. ರಾಜ್‌ಕುಮಾರ್ ಅವರ ತವರು ಜಿಲ್ಲೆ ಚಾಮರಾಜನಗರದಲ್ಲಿ ಅವರ ಮ್ಯೂಸಿಯಂ ಸ್ಥಾಪಿಸಲು ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ರಂಗಕರ್ಮಿ, ಚಲನಚಿತ್ರ ನಟ ಮಂಡ್ಯ ರಮೇಶ್ ಮನವಿ ಮಾಡಿದರು.

ನಗರದ ರೋಟರಿ ಭವನದಲ್ಲಿ ಜಿಲ್ಲೆಯ ಬೆಳ್ಳಿಹಬ್ಬದ ಅಂಗವಾಗಿ ರೋಟರಿ ಸಂಸ್ಥೆ, ರಂಗವಾಹಿನಿ ಹಾಗೂ ಡಾ.ಎಸ್.ಪಿ.ಬಾಲಸುಬ್ರಹ್ಮಣ್ಯಂ ಗಾನಗಂಧರ್ವ ಸಾಂಸ್ಕೃತಿಕ ಕಲಾ ವೇದಿಕೆ ಹಮ್ಮಿಕೊಂಡಿದ್ದ 'ಕನ್ನಡ ಚಲನಚಿತ್ರರಂಗಕ್ಕೆ ಚಾಮರಾಜನಗರ ಜಿಲ್ಲೆಯ ಕೊಡುಗೆ' ವಿಶೇಷ ಉಪನ್ಯಾಸ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಚಾಮರಾಜನಗರ ಜಾನಪದ ಸಮೃದ್ಧ ಜಿಲ್ಲೆ. ವೃತ್ತಿ ರಂಗಭೂಮಿಗೆ ತನ್ನದೇ ಆದ ವಿಶೇಷ ಕೊಡುಗೆಯನ್ನು ಚಾಮರಾಜನಗರ ಜಿಲ್ಲೆ ನೀಡಿದೆ ಸಿಂಗಾನಲ್ಲೂರು ಪುಟ್ಟಸ್ವಾಮಯ್ಯನವರು ಆ ಕಾಲಕ್ಕೆ ಪ್ರತಿಭಾವಂತ ರಂಗಭೂಮಿ ಕಲಾವಿದರಾಗಿದ್ದರು. ಪ್ರಪಂಚಕ್ಕೆ ಡಾ.ರಾಜ್‌ಕುಮಾರ್ ಅವರನ್ನು ಕೊಡುಗೆಯಾಗಿ ನೀಡಿದವರು ಸಿಂಗಾನಲ್ಲೂರು ಪುಟ್ಟಸ್ವಾಮಯ್ಯನವರು. ರಾಜ್‌ಕುಮಾರ್ ಅವರು ಎಲ್ಲೆಡೆಯೂ ತಮ್ಮ ತಂದೆಯವರ ಕುರಿತೇ ಹೇಳಿಕೊಳ್ಳುತ್ತಿದ್ದರು. ಇಂಥ ಪುಟ್ಟಸ್ವಾಮಯ್ಯನವರ ತವರು ಚಾಮರಾಜನಗರ ಜಿಲ್ಲೆ ಎಂದರು.

ವರನಟ ಡಾ.ರಾಜ್‌ಕುಮಾರ್ ಕೇವಲ ನಟರಾಗಿರಲಿಲ್ಲ. ನಟನೆ–ಸಂಭಾಷಣೆ ಮೂಲಕ ಕನ್ನಡತನ, ಸೊಬಗನ್ನು ಹೆಚ್ಚಿಸಿದರು. ಅವರು ಪ್ರಪಂಚವೇ ಮೆಚ್ಚುವಂಥ ಕಲಾವಿದರು. ಅವರ ತವರು ಜಿಲ್ಲೆ ಚಾಮರಾಜನಗರದಲ್ಲಿ ಅವರ ಕುರಿತ ಮ್ಯೂಸಿಯಂ ನಿರ್ಮಾಣವಾಗಬೇಕು. ಆ ವಸ್ತು ಸಂಗ್ರಹಾಲಯದಲ್ಲಿ ರಾಜ್‌ಕುಮಾರ್ ಅವರಿಗೆ ಸಂಬಂಧಿಸಿದ ವಸ್ತುಗಳು, ಉಡುಪುಗಳು, ಅವರ ನೆನಪುಗಳು, ಅಪರೂಪದ ಛಾಯಾಚಿತ್ರಗಳು ಇರಬೇಕು. ಎಲ್ಲೆಡೆಯಿಂದಲೂ ಅದನ್ನು ನೋಡಲು ಜನರು ಚಾಮರಾಜನಗರಕ್ಕೆ ಬರುವಂತಾಗಬೇಕು ಎಂದರು.

ಚಲನಚಿತ್ರ ನಿರ್ದೇಶಕ, ಲೇಖಕ ಪ್ರಕಾಶ್ ರಾಜ್ ಮೇಹು ಮಾತನಾಡಿ, ನಮ್ಮ ಸಿನಿಮಾಗಳು ನಮ್ಮ ಪರಿಸರ, ಆಚಾರ–ವಿಚಾರ, ಸಂಸ್ಕೃತಿಯನ್ನು ಬಿಂಬಿಸಬೇಕು. ಇತ್ತೀಚಿಗೆ ಬಿಡುಗಡೆಯಾಗಿರುವ ರಿಷಬ್ ಶೆಟ್ಟಿಯವರ ಕಾಂತಾರ ಸಿನಿಮಾ ಇದಕ್ಕೆ ಉತ್ತಮ ಉದಾಹರಣೆ ಎಂದರಲ್ಲದೆ, ತಮ್ಮ ಮುಂದಿನ ನಿರ್ದೇಶನದ ಚಿತ್ರದಲ್ಲಿ ಚಾಮರಾಜನಗರದ ಭಾಷೆಯನ್ನೇ ಬಳಸಿಕೊಂಡು ಸಿನಿಮಾ ಮಾಡುತ್ತೇನೆ ಎಂದು ಪ್ರಕಾಶ್ ರಾಜ್ ಮೇಹು ತಿಳಿಸಿದರು.

ರಂಗವಾಹಿನಿ ಅಧ್ಯಕ್ಷ ಸಿ.ಎಂ.ನರಸಿಂಹಮೂರ್ತಿ ಮಾತನಾಡಿದರು. ರೋಟರಿ ಕ್ಲಬ್ ಅಧ್ಯಕ್ಷ ಕೆಂಪನಪುರ ಮಹದೇವಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಜೆಎಸ್‌ಎಸ್ ಕಾಲೇಜು ಸಾರ್ವಜನಿಕ ಸಂಪರ್ಕ ಅಧಿಕಾರಿ ಆರ್.ಎಂ. ಸ್ವಾಮಿ, ಸಿಂಹ ಚಿತ್ರಮಂದಿರದ ಮಾಲೀಕ ಎ.ಜಯಸಿಂಹ, ಪಶುವೈದ್ಯಕೀಯ ಇಲಾಖೆ ಸಹಾಯಕ ನಿರ್ದೇಶಕ ಸುಗಂಧರಾಜ್, ಜಿಪಂ ಲೆಕ್ಕಾಧಿಕಾರಿ ಹೆಚ್.ಎಸ್.ಗಂಗಾಧರ್, ರೋಟರಿ ಕಾರ್ಯದರ್ಶಿ ಕಾಗಲವಾಡಿ ಚಂದ್ರು, ಎಸ್‌ಪಿಬಿ ವೇದಿಕೆ ಗೌರವ ಅಧ್ಯಕ್ಷ ಸುರೇಶ್‌ಗೌಡ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಚಿತ್ರ ಕಲಾವಿದ ಮುಡಿಗುಂಡ ಮೂರ್ತಿ ಅವರು ಮಂಡ್ಯ ರಮೇಶ್ ಅವರಿಗೆ ಪೆನ್ಸಿಲ್ ಸ್ಕೆಚ್‌ನಲ್ಲಿ ರಚಿಸಿದ ಚಿತ್ರವನ್ನು ಕೊಡುಗೆಯಾಗಿ ನೀಡಿದರು.

ಅರ್ಜಿ ಆಹ್ವಾನ

ಚಾಮರಾಜನಗರ, ಅ.9–ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ 2022–23ನೇ ಸಾಲಿನಲ್ಲಿ ಜಿಲ್ಲಾ ವ್ಯಾಪ್ತಿಯಲ್ಲಿ ಬೀದಿನಾಟಕ, ಜಾನಪದ ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸಲು ಬೀದಿನಾಟಕ, ಜಾನಪದ ಸಂಗೀತ ಕಲಾ ತಂಡಗಳನ್ನು ಆಯ್ಕೆ ಮಾಡಲು ಅರ್ಜಿ ಆಹ್ವಾನಿಸಲಾಗಿದೆ.

ಜಿಲ್ಲೆಯಿಂದ 3 ಬೀದಿ ನಾಟಕ ಹಾಗೂ 3 ಜಾನಪದ ಸಂಗೀತ ಕಲಾ ತಂಡಗಳನ್ನು ಆಯ್ಕೆ ಮಾಡಲಾಗುತ್ತದೆ. ಪ್ರತಿ ಬೀದಿ ನಾಟಕ ತಂಡದಲ್ಲಿ 8 ಜನ ಕಲಾವಿದರಿರಬೇಕು. ಆಸಕ್ತ ಕಲಾ ತಂಡಗಳು ಅ.15 ರೊಳಗೆ ಅಗತ್ಯ ದಾಖಲೆಗಳೊಂದಿಗೆ ಅರ್ಜಿಯನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರು, ಹಿರಿಯ ಸಹಾಯಕ ನಿರ್ದೇಶಕರ ಕಚೇರಿ ಸಲ್ಲಿಸಲು ಕೋರಲಾಗಿದೆ.

ರೋಟರಿಯಿಂದ ಬ್ಯಾಗ್ ವಿತರಣೆ

ಚಾಮರಾಜನಗರ, ಅ.9– ತಾಲೂಕಿನ ಮುಕ್ಕಡಹಳ್ಳಿ ಸರ್ಕಾರಿ ಆಂಗ್ಲ ಮಾಧ್ಯಮ ಶಾಲಾ ಮಕ್ಕಳಿಗೆ ರೋಟರಿ ಸಂಸ್ಥೆಯಿಂದ ಉಚಿತ ಬ್ಯಾಗ್ ವಿತರಿಸಲಾಯಿತು.

ಬ್ಯಾಗ್ ವಿತರಿಸಿ ರೋಟರಿ ಅಧ್ಯಕ್ಷ ಕೆ.ಎಂ.ಮಹದೇವಸ್ವಾಮಿ, ವಿದ್ಯಾದಾನಕ್ಕಿಂತ ಶ್ರೇಷ್ಠದಾನ ಮತ್ತೊಂದು ಇಲ್ಲ. ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ರೋಟರಿ ಸಂಸ್ಥೆಯಿಂದ ಅನನ್ಯ ಕೊಡುಗೆ ನೀಡಿದ್ದು, ವಿದ್ಯಾರ್ಥಿಗಳು ಇಂತಹ ಅವಕಾಶವನ್ನು ಸದಪಯೋಗ ಪಡಿಸಿಕೊಂಡು ಶಾಲೆ, ಗ್ರಾಮ ಹಾಗೂ ಪೋಷಕರಿಗೆ ಕೀರ್ತಿ ತರಬೇಕು ಎಂದು ಸಲಹೆ ನೀಡಿದರು. ರೋಟರಿ ಸಂಸ್ಥೆಯ ಕಾರ್ಯದರ್ಶಿ ಕಾಗಲವಾಡಿ ಚಂದ್ರು, ಸ್ಥಾಪಕ ಸದಸ್ಯರಾದ ಜಿ.ಆರ್.ಅಶ್ವಥ್ ನಾರಾಯಣ್, ಸಿ.ವಿ.ಶ್ರೀನಿವಾಸಶೆಟ್ಟಿ, ಪ್ರಕಾಶ್, ಚಂದ್ರಪ್ರಭಜೈನ್, ಸಿದ್ದಮಲ್ಲಪ್ಪ, ನಾಗರಾಜು, ಅಂಕಶೆಟ್ಟಿ, ಮುಖ್ಯಶಿಕ್ಷಕ ಲಿಂಗರಾಜಮ್ಮಣಿ, ಎಸ್‌ಡಿಎಂಸಿ ಅಧ್ಯಕ್ಷ ಸುಬ್ರಹ್ಮಣ್ಯ, ಶಾಲಾ ಹಿರಿಯ ವಿದ್ಯಾರ್ಥಿಗಳ ಸಂಘ ಅಧ್ಯಕ್ಷ ಮಂಜುಪ್ರಸಾದ್, ಕಾರ್ಯದರ್ಶಿ ಮಹದೇವಯ್ಯ, ಶಾಲಾ ಮಕ್ಕಳು, ಪೋಷಕರಿದ್ದರು.

ಒಂದನೇ ಪುಟದಿಂದ

ಚಾಮುಂಡೇಶ್ವರಿ ಭವ್ಯ ರಥೋತ್ಸವ



ರಥೋತ್ಸವಕ್ಕೆ ರಾಜವಂಶಸ್ಥ ಯದುವೀರ ಒಡೆಯರ್ ಚಾಲನೆ ನೀಡಿದರು.

ದಳದ ಸಿಬ್ಬಂದಿ ಸಿಡಿಮದ್ದು ಸಿಡಿಸಿ, ನಾಡದೇವಿಗೆ ಗೌರವ ಸಮರ್ಪಿಸಿದರು.

ಜನಜಂಗುಳಿ: ಕೊರೊನಾ ಹಿನ್ನೆಲೆಯಲ್ಲಿ ಎರಡು ವರ್ಷದಿಂದ ಚಾಮುಂಡಿಬೆಟ್ಟದ ದೇವಾಲಯದ ಆವರಣದಲ್ಲಿ ರಥೋತ್ಸವ ಸೀಮಿತಗೊಳಿಸಲಾಗಿತ್ತು. ಚಿಕ್ಕ ರಥದಲ್ಲಿ ದೇವಾಲಯದ ಪ್ರಾಂಗಣದಲ್ಲೇ ಉತ್ಸವ ಮೂರ್ತಿಯ ಮೆರವಣಿಗೆ ನಡೆಸಲಾಗಿತ್ತು. ಭಕ್ತರಿಗೆ ಅವಕಾಶ ನೀಡದೇ ರಥೋತ್ಸವ ಪೂಜಾ ಕೈಂಕರ್ಯ ನಡೆಸಲಾಗಿತ್ತು. ಈ ಬಾರಿ ಅದ್ಧೂರಿಯಾಗಿ ದಸರಾ ಮಹೋತ್ಸವ ನಡೆಸಿದ್ದರಿಂದ ಚಾಮುಂಡಿಬೆಟ್ಟದ ಮಹಾರಥೋತ್ಸವವನ್ನು ಅದ್ಧೂರಿಯಾಗಿ ನಡೆಸಲು ನಿರ್ಧರಿಸಲಾಗಿತ್ತು. ರಥೋತ್ಸವದಲ್ಲಿ ಪಾಲ್ಗೊಳ್ಳಲು ಮೈಸೂರು ಸೇರಿದಂತೆ ವಿವಿಧ ಜಿಲ್ಲೆಗಳಿಂದ ಅಪಾರ ಸಂಖ್ಯೆಯಲ್ಲಿ ಭಕ್ತರು ಆಗಮಿಸಿದ್ದರಿಂದ ಚಾಮುಂಡಿಬೆಟ್ಟದಲ್ಲಿ ಜನಜಾತ್ರೆ ನೆರೆದಿತ್ತು. ರಥೋತ್ಸವ ಸಾಗುವ ರಸ್ತೆಯಲ್ಲಿ, ದೇವಾಲಯದ ಮುಂದೆ ಸೇರಿದಂತೆ ಬೆಟ್ಟದಲ್ಲಿ ಅಪಾರ ಸಂಖ್ಯೆಯ ಭಕ್ತರು ನೆರೆದು ರಥೋತ್ಸವವನ್ನು ಕಣ್ತುಂಬಿಕೊಂಡರು.

ಹಣ್ಣು-ಜವನ ಸಮರ್ಪಣೆ: ರಥೋತ್ಸವದ ವೇಳೆ ಸಂಪ್ರದಾಯದಂತೆ ಭಕ್ತರು ಬಾಳೆಹಣ್ಣು, ಹೂವು, ಜವನವನ್ನು ರಥಕ್ಕೆ ಎಸೆದು ಇಷ್ಟಾರ್ಥ ಸಿದ್ಧಿಗೆ ಪ್ರಾರ್ಥಿಸಿದರು. ದೇವಾಲಯದ ಒಂದು ಸುತ್ತು ರಥ ಎಳೆಯಲು ಒಂದು ಗಂಟೆ ಬೇಕಾಯಿತು. ದಾರಿಯುದ್ದಕ್ಕೂ ಭಕ್ತರು ರಥಕ್ಕೆ ದೂರದಿಂದಲೇ ಕೈ ಮುಗಿದು ಪ್ರಾರ್ಥಿಸುತ್ತಿದ್ದರು. ಭಕ್ತರ ಎಸೆಯುವ ಹೂವು-ಹಣ್ಣು-ಜವನದಿಂದ ದೇವಿ ವಿಗ್ರಹಕ್ಕೆ ಅಲಂಕಾರ ಮಾಡಲಾಗಿದ್ದ ಬಂಗಾರದ ಆಭರಣಗಳಿಗೆ ಧಕ್ಕೆಯಾಗದಂತೆ ಕಟ್ಟೆಚ್ಚರವಹಿಸುವ ನಿಟ್ಟಿನಲ್ಲಿ ಉತ್ಸವ ಮೂರ್ತಿ ಪ್ರತಿಷ್ಠಾಪಿಸಲಾಗಿದ್ದ ಮಂಟಪದ ಸುತ್ತಲೂ ಬಲೆ ಮಾದರಿಯಲ್ಲಿ ಪರದೆ ಬಿಡಲಾಗಿತ್ತು. ಇದರಿಂದ ಭಕ್ತರಿಂದ ತೂರಲ್ಪಡುತ್ತಿದ್ದ ಹೂವು-ಹಣ್ಣು ನೇರವಾಗಿ ಉತ್ಸವ ಮೂರ್ತಿಗೆ ಬಡಿಯುವುದನ್ನು ತಡೆಗಟ್ಟಿದಂತಾಗಿತ್ತು.

ರಾರಾಜಿಸಿದ ಪುನೀತ್ ರಾಜ್‌ಕುಮಾರ್ ಬಾವುಟ: ಯುವ ದಸರಾ ಸೇರಿದಂತೆ ವಿವಿಧ ಕಾರ್ಯಕ್ರಮಗಳಲ್ಲಿ ನಟ ಪುನೀತ್ ರಾಜ್‌ಕುಮಾರ್ ಸ್ಮರಣೆಯಾದಂತೆ ಚಾಮುಂಡಿ ಬೆಟ್ಟದಲ್ಲಿ ನಡೆದ ರಥೋತ್ಸವದಲ್ಲೂ ಪುನೀತ್ ರಾಜ್‌ಕುಮಾರ್ ಚಿತ್ರವುಳ್ಳ ಬಾವುಟ ರಾರಾಜಿಸಿತು. ರಥೋತ್ಸವ ಮುಂದೆ ಮಂಗಳವಾದ್ಯ, ಪೊಲೀಸ್ ಬ್ಯಾಂಡ್ ವಾದನದ ತಂಡದೊಂದಿಗೆ ಸಾಗುತ್ತಿದ್ದ ಯುವಕರ ಗುಂಪೊಂದು ಪುನೀತ್ ರಾಜ್‌ಕುಮಾರ್ ಚಿತ್ರವಿದ್ದ ಕನ್ನಡದ ಧ್ವಜ ಬೀಸುತ್ತಾ ಸಾಗಿ ಗಮನ ಸೆಳೆದರು.

ಒಡೆಯರ್ ಹೆಸರು ನಾಮಕರಣ ಸಂತೋಷ ತಂದಿದೆ

ಮೈಸೂರು-ಬೆಂಗಳೂರು ನಡುವೆ ಸಂಚರಿಸುವ ರೈಲಿಗೆ ಒಡೆಯರ್ ಎಕ್ಸ್‌ಪ್ರೆಸ್ ಎಂದು ನಾಮಕರಣ ಮಾಡಿರುವುದು ಸಂತೋಷ ತಂದಿದೆ. ಚಾಮರಾಜ ಒಡೆಯರ್ ಅವರ ಕಾಲದಲ್ಲೇ ಮೈಸೂರಿಗೆ ರೈಲ್ವೆ ಹಳಿ ನಿರ್ಮಾಣ ಮಾಡಲಾಗಿತ್ತು ಎಂದು ದಾಖಲೆಗಳಲ್ಲಿ ದೃಢಪಟ್ಟಿದೆ. ಹಾಗಾಗಿ ಒಡೆಯರ್ ಹೆಸರು ರೈಲೊಂದಕ್ಕೆ ನಾಮಕರಣ ಮಾಡಿರುವುದು ಸಮಂಜಸವಾಗಿದೆ.
-ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ರಾಜವಂಶಸ್ಥರು.

ಬಿಗಿ ಪೊಲೀಸ್ ಬಂದೋಬಸ್ತ್: ರಥೋತ್ಸವದ ಹಿನ್ನೆಲೆಯಲ್ಲಿ ಚಾಮುಂಡಿಬೆಟ್ಟದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು ರಥದ ಸುತ್ತಲೂ ಕಮಾಂಡೋ ಪಡೆ ಹಗ್ಗವನ್ನಿಡಿದು ರಕ್ಷಾ ಕವಚದಂತೆ ಕಟ್ಟೆಚ್ಚರ ವಹಿಸಿದರು. ಇದರಿಂದ ಚಕ್ರದ ಬಳಿ ಯಾರೂ ನುಸುಳದಂತೆ ಕ್ರಮ ಕೈಗೊಂಡಿದ್ದರಿಂದ ಸರಾಗವಾಗಿ ರಥೋತ್ಸವ ಜರುಗಿತು. ಅಲ್ಲದೆ ರಥ ಸಾಗುವ ಮಾರ್ಗದಲ್ಲಿ ಗುಂಪು ಗೂಡದಂತೆ ಕಟ್ಟೆಚ್ಚರವಹಿಸುವ ನಿಟ್ಟಿನಲ್ಲಿ ಮೌಂಟೆಡ್ ಪೊಲೀಸರನ್ನು ನಿಯೋಜಿಸಲಾಗಿತ್ತು. ಬಸ್ ನಿಲ್ದಾಣ, ಮಹಿಷಾಸುರನ ಪ್ರತಿಮೆ, ದಾಸೋಹ ಭವನ, ದೇವಾಲಯದ ಸುತ್ತಲೂ ಬಿಗಿ ಭದ್ರತೆ ನಿಯೋಜಿಸಲಾಗಿತ್ತು.

ಅ.14ರವರೆಗೆ ಪೂಜೆ: ಚಾಮುಂಡಿಬೆಟ್ಟದಲ್ಲಿ ರಥೋತ್ಸವದ ಅಂಗವಾಗಿ ಅ.14ರವರೆಗೂ ವಿವಿಧ ಪೂಜಾ ಕಾರ್ಯ ಜರುಗಲಿದೆ. ಧಾರ್ಮಿಕ ದತ್ತಿ ಇಲಾಖೆ ಹಾಗೂ ಚಾಮುಂಡೇಶ್ವರಿ ದೇವಾಲಯದ ವತಿಯಿಂದ ವಿವಿಧ ಪೂಜಾ ಕಾರ್ಯ ಆಯೋಜಿಸಲಾಗಿದೆ. ಇಂದು ಬೆಳಗ್ಗೆ ರಥೋತ್ಸವ ಜರುಗಿದ ಬಳಿಕ ಸಂಜೆ ಸಿಂಹ ವಾಹನೋತ್ಸವ, ಹಂಸವಾಹನೋತ್ಸವ, ಮಂಟಪೋತ್ಸವ ಜರುಗಿದವು. ಅ.10ರಂದು ಆಶ್ವಯುಜ ಶುಕ್ಲ ಕೃಷ್ಣಪಾಡ್ಯ ರೇವತಿ ನಕ್ಷತ್ರ ಅಶ್ವರೋಹಣ ಜರುಗಲಿದೆ. ಅ.11ರಂದು ಅಶ್ವಿನಿ ನಕ್ಷತ್ರದಲ್ಲಿ ಬೆಳಗ್ಗೆ ವಸಂತ ಪೂಜೆ ಅವಭೃತ ತೀರ್ಥಸ್ನಾನ, ಮಂಟಪೋತ್ಸವ ಜರುಗಿದರೆ, ಅಂದು ಸಂಜೆ 7ಕ್ಕೆ ದೇವಿಕೆರೆಯಲ್ಲಿ ತೆಪ್ಪೋತ್ಸವ ಹಾಗೂ ಆಂದೋಳಿ ರೋಹಣ, ಧ್ವಜಾರೋಹಣ ಜರುಗಲಿದೆ. ಅ.12ರಂದು ಸಂಜೆ ಪಂಚೋಪಚಾರ ಪೂಜೆ, ಕೈಲಾಸ ವಾಹನೋತ್ಸವ, ಶಯನೋತ್ಸವ ನಡೆಯಲಿದೆ. ಅ.13ರಂದು ಕೃತಿಕಾ ನಕ್ಷತ್ರದಲ್ಲಿ ಮಹಾಭಿಷೇಕ, ಸಿಂಹವಾಹನ, ಮಂಟಪೋತ್ಸವ ನಡೆಯಲಿದೆ. ಅ.14ರಂದು ಕೃಷ್ಣ ಪಂಚಮಿ ರೋಹಿಣಿ ನಕ್ಷತ್ರದಲ್ಲಿ ಸಂಜೆ ಮುಡಿ ಉತ್ಸವ (ಜವಾಹಿರಿ ಉತ್ಸವ) ಮಂಟಪೋತ್ಸವ ಜರುಗಲಿದೆ. ರಥೋತ್ಸವದದಲ್ಲಿ ಶಾಸಕರಾದ ಜಿ.ಟಿ.ದೇವೇಗೌಡ, ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಚಾಮುಂಡಿಬೆಟ್ಟ ಗ್ರಾ.ಪಂ ಅಧ್ಯಕ್ಷ ಭರತ್ ಕೆ.ಕಾಳಯ್ಯ, ಎಡಿಸಿ ಡಾ.ಬಿ.ಎಸ್.ಮಂಜುನಾಥಸ್ವಾಮಿ, ಡಿಸಿಪಿ ಗೀತಾ ಪ್ರಸನ್ನ, ಚಾಮುಂಡಿಬೆಟ್ಟದ ದೇವಾಲಯಗಳ ಆಡಳಿತಾಧಿಕಾರಿ ಗೋವಿಂದ ರಾಜ್, ಮುಜರಾಯಿ ತಹಶೀಲ್ದಾರ್ ಕೃಷ್ಣ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ರಾಜೇಂದ್ರ ಗೌತಮ್ ರಾಜೀನಾಮೆ

ಯಾವುದೇ ನಿರ್ಬಂಧವಿಲ್ಲದೆ ಹೆಚ್ಚು ದೃಢವಾಗಿ ಸಮಾಜದ ಮೇಲಿನ ಹಕ್ಕುಗಳ ರಕ್ಷಣೆ ಮತ್ತು ದೌರ್ಜನ್ಯಗಳ ವಿರುದ್ಧ ಹೋರಾಟವನ್ನು ಮುಂದುವರಿಸುತ್ತೇನೆ ಎಂದು ಟ್ವೀಟಿಸಿದ್ದಾರೆ. ಎಲ್ಲ ಧರ್ಮಗಳನ್ನು ಗೌರವಿಸುತ್ತೇನೆ ಎಂದು ಹೇಳುವ ಕೇಜ್ರಿವಾಲ್ 24 ಗಂಟೆಯೊಳಗೆ ಗೌತಮ್ ಅವರನ್ನು ವಜಾಗೊಳಿಸಬೇಕು ಎಂದು ಬಿಜೆಪಿ ಎಚ್ಚರಿಕೆ ನೀಡಿತ್ತು. ಗೌತಮ್ ಅವರ ರಕ್ಷಣೆ ಕಾಲ್ಪನಿಕವಾಗಿದೆ. ಹಿಂದೂ ಧರ್ಮವನ್ನು ಅವಮಾನಿಸುವ ಹಕ್ಕನ್ನು ಯಾವ ಧರ್ಮವೂ ನೀಡುವುದಿಲ್ಲ. ಕೇಜ್ರಿವಾಲ್ ಅವರ ಸಚಿವರು ಹೇಳಿದ ಮಾತು ಸಂವಿಧಾನ ವಿರೋಧಿ ಮಾತ್ರವಲ್ಲ, ಸಮಾಜದ ಸಾಮರಸ್ಯಕ್ಕೆ ವಿರುದ್ಧವಾಗಿದೆ ಎಂದು ವಾಗ್ದಾಳಿ ನಡೆಸಿತ್ತು

ಸೌರಶಕ್ತಿ ಚಾಲಿತ ಗ್ರಾಮ

ಸಂಪಾದಿಸಲು ಪ್ರಾರಂಭಿಸುತ್ತೇವೆ. ಸ್ವಲ್ಪ ಸಮಯದ ಹಿಂದೆ, ಸರ್ಕಾರವು ನಾಗರಿಕರಿಗೆ ವಿದ್ಯುತ್ ಸರಬರಾಜು ಮಾಡುತ್ತಿತ್ತು ಆದರೆ ಈಗ, ಸೋಲಾರ್ ಪ್ಯಾನಲ್‌ಗಳನ್ನು ಅಳವಡಿಸುವುದರೊಂದಿಗೆ, ನಾಗರಿಕರು ತಮ್ಮ ಸ್ವಂತ ವಿದ್ಯುತ್ ಅನ್ನು ಉತ್ಪಾದಿಸುತ್ತಾರೆ.

ಇಲ್ಲಿಯವರೆಗೆ, ಸರ್ಕಾರವು ವಿದ್ಯುತ್ ಉತ್ಪಾದಿಸುತ್ತಿತ್ತು ಮತ್ತು ಜನರು ವಿದ್ಯುತ್ ಖರೀದಿಸುತ್ತಿದ್ದರು. ಆದರೆ ಕೇಂದ್ರ ಸರ್ಕಾರ ಜನರೇ ವಿದ್ಯುತ್ ಉತ್ಪಾದಕರಾಗಲು ಶ್ರಮಿಸುತ್ತಿದೆ. ಮೆಹ್ಸಾನಾ ಜಿಲ್ಲೆ ಯಾವ ರೀತಿಯ ಸಮಯವನ್ನು ಎದುರಿಸಿದೆ ಎಂದು ತಿಳಿದಿಲ್ಲದ ಅನೇಕ ಯುವಕರು ಇಲ್ಲಿದ್ದಾರೆ. ವಿದ್ಯುಚ್ಛಕ್ತಿ ದೊಡ್ಡ ಸಮಸ್ಯೆಯಾಗಿತ್ತು. ನಮ್ಮ ತಾಯಂದಿರು ಮತ್ತು ಸಹೋದರಿಯರು ನೀರು ತರಲು ಮೂರು ಕಿಲೋಮೀಟರ್ ನಡೆಯಬೇಕಿತ್ತು. ಮೊನ್ನೆಯಷ್ಟೇ ಕಾನೂನು ಸುವ್ಯವಸ್ಥೆ ಹದಗೆಟ್ಟಿತ್ತು, ಅಹಮದಾಬಾದ್‌ನಲ್ಲಿ ಪರಿಸ್ಥಿತಿ ಸರಿಯಿದೆಯೇ ಎಂದು ಮೆಹ್ಸಾನಾದ ಜನರು ತಮ್ಮ ಪರಿಚಯಸ್ಥರಿಗೆ ಕರೆ ಮಾಡಿ ಕೇಳಬೇಕಾಗಿತ್ತು. ಇಂದು ನಮ್ಮ ಮಕ್ಕಳು ಕರ್ಫ್ಯೂ ಎಂಬ ಪದವನ್ನು ಕೇಳಿಲ್ಲ. ನಮ್ಮ ಸರ್ಕಾರಗಳು ಕೃಷಿ ಬೆಳವಣಿಗೆ, ಕೈಗಾರಿಕಾ ಚಟುವಟಿಕೆ ಮತ್ತು ಪ್ರವಾಸೋದ್ಯಮಕ್ಕೆ ಹೆಚ್ಚಿನ ಒತ್ತು ನೀಡಿವೆ. ಜ್ಯೋತಿ ಗ್ರಾಮ ಯೋಜನೆಯು ಉಂಜಾದಿಂದ ಪ್ರಾರಂಭವಾಯಿತು. ಪ್ರಧಾನಿಯಾದ ನಂತರ ಅಲ್ಲಿ 18,000 ಹಳ್ಳಿಗಳು ವಿದ್ಯುತ್ ರಹಿತವಾಗಿವೆ ಎಂದರು.

ರಾಮಾಯಣ ಚಿರಸ್ಥಾಯಿ

ಅದ್ಭುತ ವಾಸ್ತುಶಿಲ್ಪದ ಭಾಗವಾಗಿದ್ದು, ಅದನ್ನು ಮೈಸೂರು ಜನರು ದೇವಾಲಯಕ್ಕೆ ನೀಡುವಂತೆ ಕರೆ ನೀಡಿದರು. ಇದೇ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ (2021–22) ಪೂರ್ಣ ಅಂಕ (625/625) ಗಳಿಸಿದ ನಾಯಕ ಸಮುದಾಯದ ವಿದ್ಯಾರ್ಥಿನಿ ಚಾರುಕೀರ್ತಿಗೆ 1 ಲಕ್ಷ ರೂ. ಚೆಕ್ ವಿತರಿಸಲಾಯಿತು. ಇದಕ್ಕೂ ಮುನ್ನ ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು. ಕಾರ್ಯಕ್ರಮದ ಆರಂಭಕ್ಕೂ ಮುನ್ನ ಗಾಯಕ ರವಿರಾಜ್ ಮತ್ತು ತಂಡದಿಂದ ಸಂಗೀತ ಕಾರ್ಯಕ್ರಮ ನಡೆಯಿತು.

ಹುಣಸೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅಧ್ಯಾಪಕ ಡಾ.ಹರದನಹಳ್ಳಿ ನಂಜುಂಡ ಸ್ವಾಮಿ ಮುಖ್ಯ ಭಾಷಣ ಮಾಡಿದರು. ಕಾರ್ಯಕ್ರಮದಲ್ಲಿ ಶಾಸಕ ತನ್ವೀರ್ ಸೇಠ್, ಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ, ಡಾ.ಡಿ.ತಿಮ್ಮಯ್ಯ, ಮೇಯರ್ ಶಿವಕುಮಾರ್, ಉಪಮೇಯರ್ ಡಾ.ಜಿ.ರೂಪ, ಡಿಸಿ ಡಾ.ಬಗಾದಿ ಗೌತಮ್, ಮೈಲ್ಯಾಕ್ ಅಧ್ಯಕ್ಷ ರಘು ಕೌಟಿಲ್ಯ, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಎಂ.ಶಿವಣ್ಣ ಉಪಸ್ಥಿತರಿದ್ದರು. ಎಸ್ಸಿ/ಎಸ್ಟಿ ಕಲ್ಯಾಣ ಇಲಾಖೆ ಜಿಲ್ಲಾಧಿಕಾರಿ ಪ್ರಭಾ ಸ್ವಾಗತಿಸಿದರು.

ಶಾಸಕ ನಾಗೇಂದ್ರ ಕಚೇರಿಯಲ್ಲಿ ವಾಲ್ಮೀಕಿ ಜಯಂತಿ



ಮೈಸೂರು,ಅ.9(ಎಸ್‌ಬಿಡಿ)– ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿರುವ ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಅವರ ಕಚೇರಿ ಆವರಣದಲ್ಲಿ ಭಾನುವಾರ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು.

ಶ್ರೀ ಮಹರ್ಷಿ ವಾಲ್ಮೀಕಿಯವರ ಫೋಟೋಗೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದ ಶಾಸಕ ಎಲ್.ನಾಗೇಂದ್ರ, ಬೇಡನಾಗಿದ್ದ ಮಹರ್ಷಿ ವಾಲ್ಮೀಕಿ ಅವರು ಪರಿವರ್ತನೆ ಬಳಿಕ 'ರಾಮಾಯಣ' ಮಹಾಕಾವ್ಯ ರಚಿಸಿದರು. 24 ಸಾವಿರ ಶ್ಲೋಕಗಳ ಮೂಲಕ ಮನುಕುಲಕ್ಕೆ ಮೌಲ್ಯಯುತ ಜೀವನದ ಸಂದೇಶ ಸಾರಿದರು. ಸತ್ಯಸಂದ ಶ್ರೀರಾಮ ತನ್ನ ತಂದೆ ಮಾತನ್ನು ಗೌರವಿಸಿದ್ದು, ಅವರ ತ್ಯಾಗ ಮನೋಭಾವ, ಆದರ್ಶ ನಡೆ, ಸೋದರತ್ವದ ಮಹತ್ವ ಸಂಬಂಧಗಳ ಮೌಲ್ಯ ಹೀಗೆ ಜನಜೀವನಕ್ಕೆ ಎಂದೂ ಪ್ರಸ್ತುತವಾಗುವ ವಿಚಾರಗಳನ್ನು ಮಹಾಕಾವ್ಯದಲ್ಲಿ ದಾಖಲಿಸಿದ್ದಾರೆ ಎಂದು ಬಣ್ಣಿಸಿದರು.

ನ್ಯಾಯಮೂರ್ತಿ ನಾಗಮೋಹನ್ ದಾಸ್ ನೇತೃತ್ವದ ಸಮಿತಿಯ ಶಿಫಾರಸ್ಸಿನಂತೆ ಎಸ್‌ಸಿ ವರ್ಗದ ಮೀಸಲಾತಿ ಪ್ರಮಾಣವನ್ನು ಶೇ.15ರಿಂದ 17ಕ್ಕೆ ಹಾಗೂ ಎಸ್‌ಟಿ ಮೀಸಲಾತಿಯನ್ನು ಶೇ.3ರಿಂದ 7ಕ್ಕೆ ಹೆಚ್ಚಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ಮಹತ್ವದ ನಿರ್ಣಯ ತೆಗೆದುಕೊಂಡಿದೆ. ಶೋಷಿತರು, ತಳಸಮುದಾಯದವರನ್ನು ಸಬಲರನ್ನಾಗಿಸಲು ಸರ್ಕಾರ ಕಟಿಬದ್ಧವಾಗಿದೆ ಎಂದು ತಿಳಿಸಿದರು.

ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ ಮಾತನಾಡಿ ಶ್ರೀ ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನನಂದಾ ಮಹಾಸ್ವಾಮಿಗಳ ಸುದೀರ್ಘ 241 ದಿನಗಳ ಹೋರಾಟದ ಫಲವಾಗಿ ಬಿಜೆಪಿ ಸರ್ಕಾರ ಎಸ್‌ಸಿ ಹಾಗೂ ಎಸ್‌ಟಿ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸುವ ನಿರ್ಣಯ ತೆಗೆದುಕೊಂಡಿದೆ. ಇದಕ್ಕಾಗಿ ಶೋಷಿತ ಸಮುದಾಯದ ಪರವಾಗಿ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಈ ಸಂದರ್ಭದಲ್ಲಿ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ಉಮಾಶಂಕರ್, ನಗರಪಾಲಿಕೆ ಸದಸ್ಯರಾದ ಆರ್.ರಂಗಸ್ವಾಮಿ, ಎಂ.ಚಿಕ್ಕವೆಂಕಟು, ಮಾಜಿ ಸದಸ್ಯ ಗುರು ವಿನಾಯಕ, ಮುಖಂಡರಾದ ಎಂ.ಶಿವಪ್ರಕಾಶ್, ನಾಗನಾಯಕ, ಎಂ.ಮಹೇಶ್, ಜೆಸಿಬಿ ರವಿ, ಬಿ.ಜೆ.ನಾರಾಯಣಸ್ವಾಮಿ, ಅರ್ಜುನ್, ರಾಮಣ್ಣ, ಪುನೀತ್ ಗೌಡ, ದಿನೇಶ್ ಗೌಡ, ಲಕ್ಷ ಮಹದೇವಣ್ಣ, ಎಂ.ರವಿಕುಮಾರ್, ರಂಗಸ್ವಾಮಿ, ಜಯಣ್ಣ, ಈ.ಬಸವರಾಜು, ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ನಿರ್ದೇಶಕರಾದ ಸಿ.ಡಿ.ಕುಮಾರ್, ಬಿ.ಕುಮಾರ್, ಕೇಬಲ್ ಕಿಟ್ಟಿ, ಹೋಟೆಲ್ ಹೇಮಂತ್, ಶೇಖರ್, ಮೇಟಗಳ್ಳಿ ರಮೇಶ್, ಎಂ.ಸಿ.ಕುಮಾರಣ್ಣ, ಗಿರೀಶ್, ಕಿರಣ್ ಮತ್ತಿತರರು ಉಪಸ್ಥಿತರಿದ್ದರು.

ಒಡೆಯರ್ ಎಕ್ಸ್‌ಪ್ರೆಸ್ ರೈಲು ನಾಮಕರಣಕ್ಕೆ ಸ್ವಾಗತ

ಪ್ರಯಾಣಿಕರಿಗೆ ಮೈಸೂರು ಪಾಕ್ ವಿತರಿಸಿ, ಸಂಭ್ರಮ



ಮೈಸೂರು, ಅ.9(ಆರ್‌ಕೆಬಿ)– ಸಂಸದ ಪ್ರತಾಪ್‌ಸಿಂಹ ಅವರ ಶ್ರಮದ ಫಲವಾಗಿ ಮೈಸೂರು ಜಂಕ್ಷನ್‌ನಿಂದ ಬೆಂಗಳೂರಿಗೆ ಚಲಿಸುವ ರೈಲು ಗಾಡಿಗೆ ಒಡೆಯರ್ ಎಕ್ಸ್‌ಪ್ರೆಸ್ ಎಂದು ನಾಮಕರಣ ಮಾಡಿರುವುದನ್ನು ಮೈಸೂರು ಒಡೆಯರ್ ಅಭಿಮಾನಿಗಳ ವೇದಿಕೆ ಸ್ವಾಗತಿಸಿದ್ದು, ಈ ಸಂಬಂಧ ಭಾನುವಾರ ಮೈಸೂರು ರೈಲ್ವೆ ನಿಲ್ದಾಣದಲ್ಲಿ ಒಡೆಯರ್ ಎಕ್ಸ್‌ಪ್ರೆಸ್ ರೈಲು ಪ್ರಯಾಣಿಕರಿಗೆ ಮೈಸೂರು ಪಾಕ್ ಸಿಹಿ ವಿತರಿಸಿ ನಾಲ್ವಡಿ ಕೃಷ್ಣರಾಜ ಒಡೆಯರ್ ರವರಿಗೆ ಜೈಕಾರ ಕೂಗಿ ಸಂಭ್ರಮಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಮೈಸೂರು ಒಡೆಯರ್ ಅಭಿಮಾನಿಗಳ ವೇದಿಕೆ ಸಂಚಾಲಕ ಗಿರೀಶ್, ಮೈಸೂರು ಸಂಸ್ಥಾನದ ಅಭಿವೃದ್ಧಿಯ ಹರಿಕಾರ ಒಡೆಯರ್ ರಾಜಕುಟುಂಬದ ಆಡಳಿತ ಕೊಡುಗೆ ಸೇವೆಯನ್ನು ಸ್ಮರಿಸಲು ರೈಲ್ವೆ ಇಲಾಖೆಯು ಒಡೆಯರ್ ಎಕ್ಸ್‌ಪ್ರೆಸ್ ಎಂದು ನಾಮಕರಣ ಮಾಡಿರುವುದು ಸ್ವಾಗತಾರ್ಹ. ಸಾಂಸ್ಕೃತಿಕ ರಾಜಧಾನಿ ಮೈಸೂರು ವಿಶ್ವದೆಲ್ಲೆಡೆ ಗುರುತಿಸಿಕೊಳ್ಳಲು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಶ್ರಮ, ಅಭಿವೃದ್ಧಿ ಯೋಜನೆಗಳು ಅಪಾರ. ಅಂತಹ ಮನೆತನದ ಹೆಸರನ್ನು ಮೈಸೂರು–ಬೆಂಗಳೂರು ರೈಲಿಗೆ ಹೆಸರಿಸುವಲ್ಲಿ ಸಂಸದ ಪ್ರತಾಪ್‌ಸಿಂಹ ಅವರ ಹೋರಾಟ ಕಾರ್ಯಗತವಾಗಿದೆ ಎಂದು ಹೇಳಿದರು.

ಯುವ ಮುಖಂಡ ಅಜಯ್ ಶಾಸ್ತ್ರಿ ಮಾತನಾಡಿ, ಒಡೆಯರ್ ಎಕ್ಸ್‌ಪ್ರೆಸ್ ರೈಲು ಬೆಂಗಳೂರಿನಿಂದ ಚಾಮರಾಜನಗರದವರೆಗೂ ವಿಸ್ತರಿಸಲು ಮುಂದಾದರೆ ಸಾಕಷ್ಟು ಗಡಿನಾಡು ಪ್ರದೇಶದ ನಾಗರಿಕರಿಗೆ, ಪ್ರತಿನಿತ್ಯ ಪ್ರಯಾಣಿಸುವ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ ಎಂದರು.

ಈ ಸಂಧರ್ಭದಲ್ಲಿ ಮೈಸೂರು ನಾಗರಿಕರ ವೇದಿಕೆಯ ಕಾರ್ಯದರ್ಶಿ ಸಂದೇಶ್ ಪವಾರ್, ಸಂಚಾಲಕ ಗಿರೀಶ್, ರಾ.ಪರಮೇಶ್‌ಗೌಡ, ಮುಖಂಡರಾದ ಮಹೇಶ್ ರಾಜೇ ಅರಸ್, ಜಯಸಿಂಹ, ಶರವಣ, ಉಮೇಶ್, ಪ್ರಶಾಂತ್, ಹರೀಶ್, ಸುಚೀಂದ್ರ ಮುರಳಿ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಕಲಾಮಂದಿರದಲ್ಲಿ ನಡೆದ ಜಿಲ್ಲಾ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಮೇಯರ್ ಶಿವಕುಮಾರ್ ಅವರನ್ನು ಜಿಲ್ಲಾ ಹಿರಿಯ ಮುಖಂಡ ಟೆನ್ನಿಸ್ ಗೋಪಿ ನೇತೃತ್ವದಲ್ಲಿ ಸನ್ಮಾನಿಸಲಾಯಿತು. ಈ ವೇಳೆ ರಮ್ಮನಹಳ್ಳಿ ಸೋಮಣ್ಣ, ಹಿನಕಲ್ ಚಂದ್ರು, ವಿಜಯ್ ಕುಮಾರ್ ಹಿನಕಲ್, ನಾಗವಾಲ ವಿನೋದ್, ರವಿಕುಮಾರ್ ಮತ್ತಿತರರಿದ್ದರು.



ಮೈಸೂರಿನ ಸುಣ್ಣದಕೇರಿ ನಾಯಕರ ಸಂಘದ ವತಿಯಿಂದ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಸಂಘದ ಗೌರವಾಧ್ಯಕ್ಷರೂ ಆದ ನಗರಪಾಲಿಕೆ ಸದಸ್ಯ ವಿ. ಲೋಕೇಶ್ ಪಿಯಾ ವಾಲ್ಮೀಕಿ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ ಮಹಿಳೆಯರಿಗೆ ಸೀರೆ ವಿತರಿಸಿದರು. ಈ ವೇಳೆ ಪದಾಧಿಕಾರಿಗಳಾದ ಸತೀಶ್, ಸಿದ್ದಪ್ಪ, ಸತೀಶ, ನಾಗೇಶ್ ನಾಯ್ಕ, ಶೇಖರ ಮತ್ತಿತರರಿದ್ದರು

ಪ್ರವಾಸಿಗರ ಆಕರ್ಷಿಸುತ್ತಿರುವ ಟಾಂಗಾಗಳು



ಮೈಸೂರು, ಅ.9(ಜಿಎ)–ದಸರಾ ಮಹೋತ್ಸವದಿಂದ ಅನೇಕರ ಬಾಳಲಿ ಬೆಳಕು ಮೂಡಿದ್ದು, ಟಾಂಗಾವಾಲಗಳ ಮುಖದಲ್ಲಿ ಸಂತಸ ಮೂಡಿದೆ

ಹತ್ತು ದಿನಗಳ ದಸರಾ ಮಹೋತ್ಸವವು ಹೋಟೆಲ್ ಉದ್ಯಮ ಸೇರಿದಂತೆ ಬೀದಿ ಬದಿ ವ್ಯಾಪಾರಿಗಳಿಂದ ಹಿಡಿದು ಎಲ್ಲಾ ಹಂತದ ವರ್ತಕರಿಗೂ ಹೊಸ ಚೈತನ್ಯ ನೀಡಿದ್ದು, ಅದರಂತೆ ನಗರದ ಎಲ್ಲಾ ಟಾಂಗಾವಾಲಗಳ ಜೇಬು ತುಂಬಿಸಿದೆ.

ಮೈಸೂರು ನಗರಕ್ಕೆ ಬರುವ ಪ್ರತಿಯೊಬ್ಬ ಪ್ರವಾಸಿಗರು ಒಮ್ಮೆಯಾದರೂ ಟಾಂಗಾದಲ್ಲಿ ಮೈಸೂರು ನಗರದ ಸೊಬಗನ್ನು ಕಣ್ತುಂಬಿಕೊಳ್ಳಬೇಕು ಎಂಬ ಆಸೆ ಇರುತ್ತದೆ. ಅದರಲೂ ದಸರಾ ಮಹೋತ್ಸವದ ವೇಳೆಯಲ್ಲಿ ಇಡೀ ನಗರವೇ ವಿದ್ಯುತ್ ದೀಪಾಲಂಕಾರದಿಂದ ಜಗಮಗಿಸುತ್ತಿರುತ್ತದೆ ಇದನ್ನು ನೋಡಲು ಎರಡು ಕಣ್ಣುಗಳು ಸಾಲದು. ಈ ಸಂದರ್ಭದಲ್ಲಿ ಪ್ರವಾಸಿಗರು ಶಾಪಸಂದ್ ಅಥವಾ ಸಾರೋಟನ್ನು ಹತ್ತಿ ನಗರವನ್ನು ವೀಕ್ಷಿಸುತ್ತಾರೆ.

ಕಳೆದ ಎರಡು ವರ್ಷಗಳಿಂದ ಕೊರೊನಾ ಹಿನ್ನೆಲೆ ಸರಳ ದಸರಾ ಆಚರಣೆ ಮಾಡಲಾಗಿತ್ತು ಇದರಿಂದ ನಗರಕ್ಕೆ ಬರುವ ಪ್ರವಾಸಿಗರ ಸಂಖ್ಯೆಯಲ್ಲಿ ಭಾರೀ ಇಳಿಮುಖ ಕಂಡಿದ್ದರ ಪರಿಣಾಮ ಟಾಂಗಾವಾಲಗಳ ಬದುಕು ಮಂಕಾಗಿತ್ತು ಆದರೆ, ಈ ಬಾರಿಯ ಅದ್ಧೂರಿ ದಸರಾ ಆಚರಣೆಯಿಂದ ಎಲ್ಲಾ ಟಾಂಗಾವಾಲಗಳ ಮುಖದಲ್ಲಿ ಸಂತಸ ಮೂಡಿದ್ದು, ದಿನಕ್ಕೆ ಸಾವಿರ ರೂ. ಗಿಂತಲೂ ಹೆಚ್ಚಿನ ಆದಾಯ ಮಾಡುತ್ತಿದ್ದಾರೆ ಎಂದು ಮೈಸೂರು ಶಾಪಸಂದ್ ಟಾಂಗಾವಾಲ ಸಂಘದ ಅಧ್ಯಕ್ಷ ಫೈಯಾಸ್ ಅಹಮ್ಮದ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಸಂಜೆ ನಂತರ ಅರಮನೆಯ ಸುತ್ತ ವಾಹನ ಸಂಚಾರವನ್ನು ಸಂಪೂರ್ಣವಾಗಿ ನಿಲ್ಲಿಸಿರುವುದರಿಂದ ಟಾಂಗಾಗಳು ಸುಗಮವಾಗಿ ಅರಮನೆಯ ಸುತ್ತಲೂ ಪ್ರವಾಸಿಗರನ್ನು ಸುತ್ತಿಸುತ್ತಿದ್ದು, ಪ್ರವಾಸಿಗರು ಭಾರೀ ಮೆಚ್ಚು ವ್ಯಕ್ತಪಡಿಸಿ ಕೆಲವರು ಬಾಡಿಗೆಗಿಂತ ಅಧಿಕ ಹಣವನ್ನು ನೀಡುತ್ತಿದ್ದಾರೆ. ಈ ಬಾರಿ ಪ್ರವಾಸಿಗರ ಸಂಖ್ಯೆ ದುಪ್ಪಟ್ಟಾಗಿದ್ದು, ದಸರಾ ದೀಪಾಲಂಕಾರ ಅವಧಿಯನ್ನು ವಿಸ್ತರಣೆ ಮಾಡಿರುವುದರಿಂದ ಟಾಂಗಾವಾಲಗಳಿಗೆ ಮತ್ತಷ್ಟು ಸಹಕಾರಿಯಾಗಿದೆ ಎಂದರು.



ವಿಶ್ವಮಾನವ ಮೈಸೂರು ವಿವಿ ನೌಕರರ ವೇದಿಕೆ ವತಿಯಿಂದ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಇದೇ ವೇಳೆ ಸ್ವಚ್ಛತಾ ಕಾರ್ಮಿಕರನ್ನು ಅಭಿನಂದಿಸಲಾಯಿತು. ಎಎಸ್ಪಿ ಡಾ.ನಂದಿನಿ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಪ್ರೊ.ಶಿವರಾಜಪ್ಪ, ಉಮೇಶ್, ಡಾ.ಎಚ್.ಪಿ.ಜ್ಯೋತಿ, ಡಾ.ಸಪ್ನಾ, ಡಾ.ಮಾರುತಿ, ದಾಮೋದರ್, ಯೋಗೇಶ್, ಚಿದಾನಂದ್, ಗಣೇಶ್, ಭಾಸ್ಕರ್ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಜೆಡಿಎಸ್ ಕಚೇರಿಯಲ್ಲಿ ಭಾನುವಾರ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಪಕ್ಷದ ನಗರಾಧ್ಯಕ್ಷ ಕೆ.ಟಿ.ಚೆಲುವೇಗೌಡ, ಮಾಜಿ ಮೇಯರ್‌ಗಳಾದ ಆರ್.ಲಿಂಗಪ್ಪ ಎಂ.ಜೆ.ರವಿಕುಮಾರ್, ನಗರ ಪಾಲಿಕೆ ಸದಸ್ಯರಾದ ರಮೇಶ್ ರಮಣಿ, ರಮೇಶ್, ಮಾಜಿ ಸದಸ್ಯರಾದ ಕೆ.ವಿ.ಮಲ್ಲೇಶ್, ಎಂ.ಶಿವಣ್ಣ, ಮುಖಂಡರಾದ ಫಾಲ್ಕನ್ ಬೋರೇಗೌಡ, ಮಂಜುನಾಥ್, ಎಂ.ಎನ್.ರಾಮು, ರಿಜ್ವನ್ ಮತ್ತಿತರರು ಪಾಲ್ಗೊಂಡಿದ್ದರು.



ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಕುಂಬಾರಕೊಪ್ಪಲು ಕಾಲೋನಿಯ ಸಮುದಾಯಭವನದ ಪಕ್ಕದಲ್ಲಿ ನಿರ್ಮಾಣಗೊಳ್ಳುತ್ತಿರುವ ಮನೆಗಳ ಕಾಮಗಾರಿಗೆ ಶಾಸಕ ಎಲ್.ನಾಗೇಂದ್ರ ಭೂಮಿ ಪೂಜೆ ಸಲ್ಲಿಸಿದರು. ಈ ವೇಳೆ ವಾರ್ಡ್ 5ರ ಪಾಲಿಕೆ ಸದಸ್ಯೆ ಉಷಾ ಕುಮಾರ್, ನರಸಿಂಹಮೂರ್ತಿ, ಕುಮಾರಗೌಡ, ಭೈರಪ್ಪ ಪುನೀತ್, ಕೊಳಚೆ ನಿರ್ಮೂಲನಾ ಮಂಡಳಿಯ ಕಾರ್ಯಪಾಲಕ ಇಂಜಿನಿಯರ್ ಹರೀಶ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರಾಮಚಂದ್ರು, ಕಿರಿಯ ಇಂಜಿನಿಯರ್ ಝಾನ್ಸಿ ರಾಯ್ ಇನ್ನಿತರರಿದ್ದರು.



ಮೈಸೂರು ವಕೀಲರ ಸಂಘದಲ್ಲಿ ಭಾನುವಾರ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ, ಕಾರ್ಯದರ್ಶಿ ಎಸ್.ಉಮೇಶ್ ಸೇರಿದಂತೆ ಇತರೆ ಪದಾಧಿಕಾರಿಗಳು ಹಾಗೂ ಸದಸ್ಯರು ಉಪಸ್ಥಿತರಿದ್ದರು.



ಮೈಸೂರಿನ ಚಾಮುಂಡಿಬೆಟ್ಟ ಗ್ರಾಮ ಪಂಚಾಯ್ತಿ ಕಚೇರಿಯಲ್ಲಿ ನಡೆದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆಯಲ್ಲಿ ಗ್ರಾಪಂ ಅಧ್ಯಕ್ಷ ಕೆ.ಭರತ್, ಪಿಡಿಓ ರೂಪೇಶ್ ಕುಮಾರ್, ಸದಸ್ಯರಾದ ನಾಗಮ್ಮ, ಶಾಲೆಯ ಶಿಕ್ಷಕರು ಹಾಗೂ ಸಿಬ್ಬಂದಿ ಭಾಗವಹಿಸಿದ್ದರು.

ಬೊಂಬೆ ಜೋಡಣೆ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ

ದಸರಾ ಬೊಂಬೆ ಕೂರಿಸುವುದರಿಂದ ಏಕಾಗ್ರತೆ ಹೆಚ್ಚುತ್ತದೆ

ಡಾ. ಹನುಮಂತಾಚಾರ್ ಜೋಷಿ ಅಭಿಮತ



ಮೈಸೂರು, ಅ.9(ಜಿಎ)–ನವರಾತ್ರಿಯಲ್ಲಿ ಬೊಂಬೆ ಕೂರಿಸುವುದಕ್ಕೂ ವೈಜ್ಞಾನಿಕ ಕಾರಣವಿದ್ದು, ಇದರಿಂದ ಏಕಾಗ್ರತೆ ಹೆಚ್ಚಾಗುತ್ತದೆ ಎಂದು ಶಾರದ ವಿಲಾಸ್ ಔಷಧ ವಿಜ್ಞಾನ ವಿದ್ಯಾಲಯದ ಪ್ರಾಂಶುಪಾಲ ಡಾ. ಹನುಮಂತಾಚಾರ್ ಜೋಷಿ ಅಭಿಪ್ರಾಯಪಟ್ಟರು.

ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಭಾರತ ವಿಕಾಸ ಪರಿಷದ್ ಮೈಸೂರಿನ ಭಾರದ್ವಜ ಶಾಖೆ ಮತ್ತು ರಾಮ್‌ಸನ್ಸ್ ಕಲಾ ಪ್ರತಿಷ್ಠಾನ ವತಿಯಿಂದ ಏರ್ಪಡಿಸಿದ್ದ ದಸರಾ ಬೊಂಬೆ ಜೋಡಣೆ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ನಗರದ ನಜರ್‌ಬಾದ್‌ನ ಬೊಂಬೆ ಮನೆ ಆವರಣದಲ್ಲಿ ಬಹುಮಾನ ವಿತರಿಸಿ ಮಾತನಾಡುತ್ತಿದ್ದರು.

ನಾನು ಮೂಲತಃ ಉತ್ತರ ಕರ್ನಾಟಕದವನಾಗಿದ್ದು, ಬಾಲ್ಯದಲ್ಲಿ ನಾನು ಕಂಡ ಹಾಗೇ ಆ ಭಾಗದಲ್ಲಿ ಕೆಲವೇ ಕೆಲವು ಮನೆಗಳಲ್ಲಿ ಮಾತ್ರ ನವರಾತ್ರಿ ವೇಳೆ ಬೊಂಬೆಗಳನ್ನು ಕೂರಿಸುತ್ತಿದ್ದರು. ಆದರೆ, ಮೈಸೂರು ಭಾಗದಲ್ಲಿ ಹೆಚ್ಚು ಆಸಕ್ತಿಯಿಂದ ಬೊಂಬೆಗಳನ್ನು ಕೂರಿಸುತ್ತಾರೆ. ಇಂದು ಕೆಲ ಭಾಗಗಳಲ್ಲಿ ಅದು ಕಡಿಮೆ ಆಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ನಮ್ಮ ಅಜ್ಜಿ ಮನೆಯಲ್ಲಿ ಬೊಂಬೆಗಳನ್ನು ಜೋಡಿಸಲು ಮೊಮ್ಮಕ್ಕಳೆಲ್ಲ ಸೇರಿಕೊಳ್ಳುತ್ತಿದ್ದೇವು. ಈ ವೇಳೆ ಅಜ್ಜಿಯೂ ಒಂದೊಂದು ಬೊಂಬೆಗೂ ಕಥೆಗಳನ್ನು ಹೇಳುತ್ತ ಅದರ ಮಹತ್ವವನ್ನು ತಿಳಿಸುತ್ತಿದ್ದರು ಎಂದು ತಮ್ಮ ಬಾಲ್ಯದ ನೆನಪನ್ನು ಮೆಲಕು ಹಾಕಿದರು.

ಬೊಂಬೆ ಜೋಡಣೆಯಿಂದ ನಮ್ಮ ಸಂಸ್ಕೃತಿ ಪರಂಪರೆಯನ್ನು ಸಾರುತ್ತಿದ್ದು, ದೇಶ ಕಟ್ಟಲು ಸಹಕಾರಿಯಾಗಿದೆ. ಆಯುಷ್ ಇಲಾಖೆಯೂ ಮಕ್ಕಳಿಗೆ ಸ್ವತಃ ಬೊಂಬೆಗಳನ್ನು ತಯಾರಿಸುವುದನ್ನು ಹೇಳಿಕೊಡುತ್ತಾರೆ. ಇದರಿಂದ ದೇಹದಲ್ಲಿರುವ ನ್ಯೂರೋ ಟೆಸ್ಟ್ ಮೀಟರ್‌ಗಳು ಕಾರ್ಯ ಆರಂಭಿಸಿ ಕಡಿಮೆ ಏಕಾಗ್ರತೆ ಇರುವ ಮಕ್ಕಳಿಗೆ ಏಕಾಗ್ರತೆ ಹೆಚ್ಚಿಸುವಲ್ಲಿ ಉಪಯುಕ್ತವಾಗುತ್ತಿದೆ ಎಂದು ತಿಳಿಸಿದರು. ದಸರಾ ಬೊಂಬೆ ಜೋಡಣೆ ಸ್ಪರ್ಧೆಯಲ್ಲಿ 4 ವಿಭಾಗಗಳಲ್ಲಿ ವಿಜೇತರನ್ನು ಆಯ್ಕೆ ಮಾಡಿ, ಬಹುಮಾನ ವಿತರಿಸಲಾಯಿತು.

ಸಣ್ಣ ವಿಭಾಗ : ಪ್ರಥಮ–ಅನುಸೂಯ ದೇವಿ, ದ್ವಿತೀಯ–ನಾಗಮಣಿ, ತೃತೀಯ–ಸುಮ

ಮಧ್ಯಮ : ಪ್ರಥಮ– ಬಿ.ಆರ್. ಬಾಲಾಜಿ, ದ್ವಿತೀಯ– ಸಿ.ಶಾಮಲ, ತೃತೀಯ–ಪದ್ಮಜಾ ವಾಸುದೇವನ್


ಬೃಹತ್ : ಪ್ರಥಮ– ಅನ್ನಪೂರ್ಣ ಜಿ.ಕೃಷ್ಣ, ದ್ವಿತೀಯ– ಇಂದ್ರಾಣಿ ಶಂಕರ್, ತೃತೀಯ–ಶ್ರೀದೇವಿ ಶ್ರೀವತ್ಸ.

ಹೆಚ್ಚುವರಿ ಬೃಹತ್: ಪ್ರಥಮ– ರೇವತಿ ರಾಮಸ್ವಾಮಿ, ದ್ವಿತೀಯ–ಗೀತಾ ಶ್ರೀಹರಿ ತೃತೀಯ–ರಾಜೇಶ್ವರಿ ಗಣೇಶನ್ ಬಹುಮಾನಗಳನ್ನು ಪಡೆದುಕೊಂಡರು. ಇದರೊಟ್ಟಿಗೆ 30 ಮಂದಿಗೆ ವಿಶೇಷ ಬಹುಮಾನ ನೀಡಲಾಯಿತು.

ಕಾರ್ಯಕ್ರಮದಲ್ಲಿ ಮಹಾರಾಜ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ ಛೇರ್ಮನ್ ಡಾ.ಮುರಳಿ, ಭಾರತ ವಿಕಾಸ್ ಪರಿಷದ್‌ನ ಡಾ.ಬಿ.ಆರ್. ರಂಗನಾಥ್‌ರಾವ್, ರಾಮ್‌ಸನ್ಸ್ ಪ್ರತಿಷ್ಠಾನ ಅಧ್ಯಕ್ಷ ಆರ್.ಜಿ.ಸಿಂಗ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ವಿವಿಧೆಡೆ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ

ಮಹರ್ಷಿ ವಾಲ್ಮೀಕಿ ತತ್ವಾದರ್ಶ ಮೈಗೂಡಿಸಿಕೊಳ್ಳಿ: ಹರ್ಷವರ್ಧನ್



ನಂಜನಗೂಡು, ಅ.9– ರಾಮಾಯಣದಲ್ಲಿ ರಾಮ ಎಷ್ಟು ಮುಖ್ಯವೋ ರಾವಣನೂ ಅಷ್ಟೇ ಮುಖ್ಯ. ಹೀಗಾಗಿ ಈ ಬಗ್ಗೆ ಸಾಕಷ್ಟು ಆರೋಗ್ಯಕರ ಚರ್ಚೆ ನಡೆಯ ಬೇಕಿದೆ ಎಂದು ಶಾಸಕ ಬಿ.ಹರ್ಷವರ್ಧನ್ ತಿಳಿಸಿದರು.

ನಗರದ ತಾಲೂಕು ಕಚೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ನಡೆದ ಮಹರ್ಷಿ ವಾಲ್ಮೀಕಿ ಜಯಂತಿಯಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಶೋಷಿತ ಸಮುದಾಯಗಳು ಶಿಕ್ಷಣ ಪಡೆಯದೆ ಹೋದಲ್ಲಿ ಕೇವಲ ಮೀಸಲಾತಿ ಹೆಚ್ಚಳದಿಂದ ಎಸ್ಸಿ, ಎಸ್ಟಿ ಸಮುದಾಯಗಳ ಸಮಸ್ಯೆ ಬಗೆಹರಿಯುವುದಿಲ್ಲ. ಎಷ್ಟೇ ಮೀಸಲಾತಿ ಹೆಚ್ಚಳವಾದರೂ ಸಹ ಸಮುದಾಯದ ಸ್ಥಿತಿಗತಿ ಬದಲಾವಣೆ ಅಸಾಧ್ಯ. ಶೋಷಿತ ಸಮುದಾಯಗಳು ಸಾಮಾಜಿಕವಾಗಿ ಮುಂದೆ ಬರಲು ಶಿಕ್ಷಣವೇ ಪ್ರಮುಖ ಅಸ್ತ್ರವೆಂದು ಡಾ.ಬಿ.ಆರ್.ಅಂಬೇಡ್ಕರ್ ಬಲವಾಗಿ ಹೇಳಿದ್ದಾರೆ. ಆದ್ದರಿಂದ ನಿಮ್ಮ ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ನೀಡಿ. ಅಲ್ಲದೆ ಮಹರ್ಷಿ ವಾಲ್ಮೀಕಿ ಅವರ ತತ್ವಾದರ್ಶಗಳನ್ನು ಮೈಗೂಡಿಸಿಕೊಳ್ಳಿ ಎಂದರು.

ಎಸ್ಸಿ, ಎಸ್ಟಿ ಮೀಸಲಾತಿ ಹೆಚ್ಚಿಸುವಂತೆ ಪ್ರಸನ್ನಾನಂದ ಸ್ವಾಮೀಜಿ ಧರಣಿ ನಿರತರಾಗಿದ್ದರು. ಮೀಸಲಾತಿ ಹೆಚ್ಚಳ ಅನುಷ್ಠಾನಗೊಳಿಸುವುದಾಗಿ ಮುಖ್ಯಮಂತ್ರಿಗಳು ಭರವಸೆ ನೀಡಿದ್ದರೂ, ಅವರು ಧರಣಿ ಮುಂದುವರೆಸಿದ್ದರು. ಸ್ವಾಮೀಜಿ ಅವರ ಹೋರಾಟದ ಫಲವಾಗಿ ಮುಖ್ಯಮಂತ್ರಿಗಳು ಸದನದಲ್ಲಿ ಮೀಸಲಾತಿ ಹೆಚ್ಚಿಸಿ, ಸಚಿವ ಸಂಪುಟದ ಅನುಮತಿ ಪಡೆದು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದಾರೆ ಎಂದರಲ್ಲದೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ವಾಲ್ಮೀಕಿ ಜಯಂತಿಯನ್ನು ಆಚರಣೆಗೆ ತಂದು ರಜೆ ಘೋಷಣೆ ಜಾರಿಗೆ ತರಲಾಯಿತು. ಎಸ್ಟಿ ಸಮುದಾಯದ ಅಭಿವೃದ್ಧಿಯಲ್ಲಿ ಬಿಜೆಪಿ ಸರ್ಕಾರ ಸದಾ ಮುಂದಿದೆ ಎಂದರು.

ಕ್ಷೇತ್ರದಲ್ಲಿ ನಾಯಕ ಸಮುದಾಯದ ಏಳಿಗೆಗಾಗಿ 4 ಕೋಟಿ ರೂ. ವೆಚ್ಚದಲ್ಲಿ ವಾಲ್ಮೀಕಿ ಸಮುದಾಯ ಭವನ ನಿರ್ಮಾಣಕ್ಕೆ ಸಂಸದ ಶ್ರೀನಿವಾಸ್ ಪ್ರಸಾದ್ ಮುಂದಾದರು. ಅಲ್ಲದೇ ಗೌರಿಘಟ್ಟದ ಬೀದಿಯ ನಾಯಕ ಸಮುದಾಯ ಭವನ ಪೂರ್ಣಗೊಳಿಸುವಲ್ಲಿ ಇದುವರೆಗೂ ಯಾರೂ ಆಸಕ್ತಿ ತೋರಲಿಲ್ಲ. ನನ್ನ ಅವಧಿಯಲ್ಲಿ ಪೂರ್ಣಗೊಳಿಸಬೇಕೆಂದು ಅನುದಾನ ನೀಡಿದ್ದು, ಶೀಘ್ರ ಕೆಲಸ ಪ್ರಾರಂಭವಾಗಿ ಪೂರ್ಣಗೊಳ್ಳಲಿದೆ. ಸಚಿವ ಶ್ರೀರಾಮುಲು ಅವರನ್ನು ಕರೆಸಿ ವಾಲ್ಮೀಕಿ ಸಮುದಾಯ ಭವನ ಮತ್ತು ನಾಯಕ ಸಮುದಾಯ ಭವನಗಳನ್ನು ಉದ್ಘಾಟಿಸಲಾಗುವುದು ಎಂದರು.

ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ ಮಾತನಾಡಿ, ರಾಮಾಯಣದ ಪಾತ್ರಗಳು ಜನರ ಜೀವನದ ಆದರ್ಶಗಳಾಗಿವೆ. ಬುದ್ಧ, ಬಸವ, ಅಂಬೇಡ್ಕರ್, ವಾಲ್ಮೀಕಿ ಕೇವಲ ಒಂದು ವರ್ಗಕ್ಕೆ ಸೀಮಿತರಾದವರಲ್ಲ ಅವರು ಸಮುದಾಯದ ಆಸ್ತಿ ಎಂದರು.

ಸಮಾರಂಭದಲ್ಲಿ ತಹಸೀಲ್ದಾರ್ ಎಂ.ಶಿವಮೂರ್ತಿ, ನಗರಸಭಾಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ, ಉಪಾಧ್ಯಕ್ಷೆ ನಾಗಮಣಿ, ಮುಖಂಡರಾದ ಕುಂಬ್ರಳ್ಳಿ ಸುಬ್ಬಣ್ಣ, ತಾಪಂ ಮಾಜಿ ಅಧ್ಯಕ್ಷ ಬಿ.ಎಸ್.ಮಹದೇವಪ್ಪ, ಸದಸ್ಯರಾದ ಶಿವಣ್ಣ, ಮಹದೇವ ನಾಯಕ, ರವೀಂದ್ರ, ಕೆ.ಡಿ.ಮಂಜು, ರೈತ ಸಂಘದ ಜಿಲ್ಲಾಧ್ಯಕ್ಷ ವಿದ್ಯಾಸಾಗರ್, ಬಂಗಾರನಾಯಕ, ರಂಗಸ್ವಾಮಿ, ನಾಗೇಂದ್ರ ಸುರೇಶ್‌ನಾಯಕ, ಸಿದ್ದರಾಜು, ಮಂಜುನಾಥ್, ಸುರೇಶ್, ನಾರಾಯಣ, ಮಲ್ಲೇಶ್ ಇನ್ನಿತರರಿದ್ದರು.

ಯುವ ಜನಾಂಗ ವಾಲ್ಮೀಕಿ ಮಾರ್ಗದಲ್ಲಿ ಸಾಗಿ

ಭೇರ್ಯ ಗ್ರಾಮ ಪಂಚಾಯತ್ ಅಧ್ಯಕ್ಷೆ ಜ್ಯೋತಿ



ಭೇರ್ಯ, ಅ.9– ಇಂದಿನ ಯುವ ಜನಾಂಗ ಮಹರ್ಷಿ ವಾಲ್ಮೀಕಿ ಅವರ ಮಾರ್ಗದಲ್ಲಿ ಸಾಗಬೇಕಿದೆ ಎಂದು ಭೇರ್ಯ ಗ್ರಾಪಂ ಅಧ್ಯಕ್ಷೆ ಜ್ಯೋತಿ ತಿಳಿಸಿದರು.

ಗ್ರಾಪಂನಲ್ಲಿ ನಡೆದ ಶ್ರೀಮಹರ್ಷಿ ವಾಲ್ಮೀಕಿ ಜಯಂತಿಯಲ್ಲಿ ವಾಲ್ಮೀಕಿ ಭಾವಚಿತ್ರಕ್ಕೆ ಸದಸ್ಯರೊಂದಿಗೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಇಂತಹ ಮಹಾನ್ ಕವಿಗಳ ಆಚಾರ ವಿಚಾರಗಳು ಹೆಚ್ಚಿನ ರೀತಿಯಲ್ಲಿ ಪಸರಿಸಲು ಯುವಕರು ಮುಂದಾಗಬೇಕು ಎಂದರು. ಸರ್ಕಾರ ಗ್ರಾಪಂ ಅಧ್ಯಕ್ಷರ ಅಧಿಕಾರ ಮೊಟಕುಗೊಳಿಸಿರುವುದನ್ನು ಖಂಡಿಸಿದ ಅವರು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸ್ಥಳೀಯ ಗ್ರಾಪಂಗೆ ಸಂಪೂರ್ಣ ಅಧಿಕಾರ ನೀಡಲಾಗಿದೆ. ಈ ಸಂಬಂಧ ಸದಸ್ಯರೊಡಗೂಡಿ ಹೋರಾಟ ಮಾಡುವುದಾಗಿ ತಿಳಿಸಿದರು.

ಪಿಡಿಓ ಮಂಜುನಾಥ್, ಕಾರ್ಯದರ್ಶಿ ಪ್ರೇಮ್ ಕುಮಾರ್, ಬಿಲ್ ಕಲೆಕ್ಟರ್ ಕುಮಾರ್, ಉಪಾಧ್ಯಕ್ಷ ಬಿ.ಕೆ.ಶಿವಕುಮಾರ್, ಸದಸ್ಯರಾದ ಬಿ.ಕೆ.ಕುಮಾರ್, ಬಿ.ಪಿ.ಪ್ರಕಾಶ್, ಮಂಜಪ್ಪ, ಕೃಷ್ಣೇಗೌಡ, ಕಾಂಗ್ರೆಸ್ ಯುವ ಮುಖಂಡ ಬಿ.ಟಿ.ಮೋಹನ್, ಜೆಡಿಎಸ್ ಯುವ ಮುಖಂಡರಾದ ಟೈಲರ್ ಹರೀಶ್, ರಾಘು, ಸಿಬ್ಬಂದಿಗಳಾದ ಜಯಂತ್, ಜಬ್ಬರ್, ರಮೇಶ್, ಮಹದೇವ್, ನಾಗರಾಜು, ಚಂದು, ಯೋಗೇಶ್, ಇತರರಿದ್ದರು.

ರಾಮಾಯಣ ಬರೆದ ಮಹಾನ್ ದಾರ್ಶನಿಕ ವಾಲ್ಮೀಕಿ

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ.ಎನ್.ರಂಗೂನಾಯಕ್



ತಿ.ನರಸೀಪುರ, ಅ.9– ಇಡೀ ವಿಶ್ವಕ್ಕೆ ರಾಮಾಯಣದಂತಹ ಮಹಾಕಾವ್ಯ ಕೊಟ್ಟ ಮಹಾನ್ ದಾರ್ಶನಿಕ ಮಹರ್ಷಿ ವಾಲ್ಮೀಕಿ ಎಂದು ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ.ಎನ್.ರಂಗೂ ನಾಯಕ್ ತಿಳಿಸಿದರು.

ಪಟ್ಟಣದ ಎಪಿಎಂಸಿ ಯಾರ್ಡ್‌ನಲ್ಲಿ ವರುಣಾ ಬಿಜೆಪಿ ಘಟಕದಿಂದ ಹಮ್ಮಿಕೊಳ್ಳಲಾಗಿದ್ದ ಶ್ರೀಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ವಾಲ್ಮೀಕಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಅವರು ಮಾತನಾಡಿದರು.

ರಾಮಾಯಣದ ಮೂಲಕ ರಾಜಧರ್ಮ, ನೀತಿ ಶಾಸ್ತ್ರವನ್ನು ಜಗತ್ತಿಗೆ ಬೋಧಿಸಿದ ವಾಲ್ಮೀಕಿ ಮಹರ್ಷಿ ಪ್ರಾತಃಸ್ಮರಣೀಯರಾಗಿದ್ದಾರೆ. ಸ್ತ್ರೀ–ಪುರುಷ ಸರಿಸಮಾನತೆಯೊಂದಿಗೆ ಕಲ್ಯಾಣ ರಾಜ್ಯದ ಆಶಯ ಹೊಂದಿದ್ದ ವಾಲ್ಮೀಕಿಯು ರಾಮಾಯಣದಲ್ಲಿ ವಿವಿಧ ಪಾತ್ರಗಳ ಮೂಲಕ ಬದುಕಿನ ಪ್ರತಿ ಹಂತದಲ್ಲೂ ಅನುಸರಿಸಬೇಕಾದ ನೀತಿ ಬೋಧಿಸಿದ್ದಾರೆ. ವಾಲ್ಮೀಕಿಯು ಅಂದು ಕಂಡಿದ್ದ ಕಲ್ಯಾಣ ರಾಜ್ಯದ ಕಲ್ಪನೆ ಈಗಲೂ ಪ್ರಸ್ತುತವಾಗಿದ್ದು, ರಾಮಾಯಣ ರಚಿಸುವ ಮೂಲಕ ಭಾರತೀಯ ಸಂಸ್ಕೃತಿಯ ಶಕ್ತಿಯಾಗಿ ರೂಪುಗೊಂಡಿದ್ದಾರೆ ಎಂದರು.

ಬಿಜೆಪಿ ಸರ್ಕಾರ ಹಿಂದುಳಿದ ಪ.ವರ್ಗದವರ ಹಿತ ಕಾಯುವ ನಿಟ್ಟಿನಲ್ಲಿ ಮೀಸಲಾತಿ ಪ್ರಮಾಣವನ್ನು ಶೇ.3 ರಿಂದ 7ಕ್ಕೆ ಹೆಚ್ಚಿಸಿದೆ. ಅಲ್ಲದೇ ಜನಾಂಗವನ್ನು ಪ.ಪಂಗಡಕ್ಕೆ ಸೇರಿಸುವ ಮೂಲಕ ಮಹತ್ತರ ನಿರ್ಧಾರ ಕೈಗೊಂಡಿದೆಯಲ್ಲದೇ ವಾಲ್ಮೀಕಿ ಜಯಂತಿಗೆ ರಜೆ ಘೋಷಣೆ ಮಾಡಿ ಪಕ್ಷ ಹಿಂದುಳಿದವರ ಬೆನ್ನೆಲುಬಾಗಿ ನಿಂತಿದೆ ಎಂದರು.

ಬಿಜೆಪಿ ಹಿರಿಯ ಮುಖಂಡ ತೋಟದಪ್ಪ ಬಸವರಾಜು ಮಾತನಾಡಿ, ವಾಲ್ಮೀಕಿ ಕವಿ ಮತ್ತು ಮಹರ್ಷಿಗಳ ಪರಂಪರೆಯಲ್ಲಿ ಅತ್ಯಂತ ಶ್ರೇಷ್ಠರು. ವ್ಯಾಧನಾಗಿ ಅಹಿಂಸೆಯಲ್ಲಿ ತೊಡಗಿದ್ದ ವಾಲ್ಮೀಕಿ, ನಾರದ ಮಹರ್ಷಿಗಳ ಸೂಚನೆಯಂತೆ ರಾಮಧ್ಯಾನ ಮಾಡಿ ಮಹರ್ಷಿಯಾದರು. ಬೇಡನೊಬ್ಬನ ಬಾಣದಿಂದ ಕ್ರೌಂಚ ಪಕ್ಷಿಗಳ ಮರಣವನ್ನು ಕಂಡು ಮರುಗಿದ ಅವರ ಕರುಣೆಯ ಹೃದಯ ರಾಮಯಣ ಕಾವ್ಯ ಬರೆಯಲು ಸ್ಫೂರ್ತಿಯಾಯಿತು ಎಂದರು.

ಈ ವೇಳೆ ಪಿಎಸಿಎಸ್ ಮಾಜಿ ಅಧ್ಯಕ್ಷ ನಟರಾಜು, ಪುರಸಭಾ ಸದಸ್ಯ ಚಿಕ್ಕ ಮಹದೇವ, ಆಶ್ರಯ ಸಮಿತಿ ಸದಸ್ಯ ಸ್ಟಾರ್ ಮಲ್ಲೇಶ್, ಎಸ್ಸಿ ಮೋರ್ಚಾ ಜಿಲ್ಲಾ ಉಪಾಧ್ಯಕ್ಷ ಮಿಥುನ್, ಸಾರ್ವಜನಿಕ ಆಸ್ಪತ್ರೆಯ ನಿರ್ದೇಶಕ ಭೈರಾಪುರ ಬಾಲು, ಗ್ರಾಪಂ ಸದಸ್ಯ ಮಹದೇವಸ್ವಾಮಿ, ಮುಖಂಡರಾದ ಕುಮಾರ್, ಕೆಂಚ, ಸೋಮಶೇಖರ್, ಡಿ.ಎಲ್.ಮಹದೇವಪ್ಪ, ಆಲಗೂಡು ಮಂಜು ಇದ್ದರು.

ಮಹಾನ್ ಕಾವ್ಯ ರಚನಾಕಾರ ವಾಲ್ಮೀಕಿ: ಪ್ರೊ.ಮಹದೇವ ನಾಯಕ



ಹೆಚ್.ಡಿ.ಕೋಟೆ, ಅ.9– ರಾಮಾಯಣ ರಚಿಸಿದ ಮಹರ್ಷಿ ವಾಲ್ಮೀಕಿ ಯಾವುದೇ ಒಂದು ಜಾತಿಗೆ ಸೀಮಿತರಲ್ಲ. ಅವರು ಎಲ್ಲಾ ಜಾತಿಗೆ ಸೇರಿದವರಾಗಿದ್ದು, ಸಮಾಜ ಮೆಚ್ಚುವ ಮಹಾನ್ ಕಾವ್ಯ ರಚನಾಕಾರರು ಎಂದು ಮೈಸೂರು ಮೆಡಿಕಲ್ ಕಾಲೇಜಿನ ಲೆಕ್ಕ ಪರಿಶೋಧನಾ ವಿಭಾಗದ ಜಂಟಿ ನಿಯಂತ್ರಕ ಪ್ರೊ.ಮಹದೇವ ನಾಯಕ ತಿಳಿಸಿದರು.

ತಾಲೂಕು ಆಡಳಿತದಿಂದ ಆಯೋಜಿಸಿದ್ದ ಮಹರ್ಷಿ ವಾಲ್ಮೀಕಿ ಜಯಂತಿಯಲ್ಲಿ ಮುಖ್ಯ ಭಾಷಣಕಾರರಾಗಿ ಮಾತನಾಡಿದ ಅವರು, ವಿಶ್ವದ ಅತ್ಯಮೂಲ್ಯ 4 ಗ್ರಂಥಗಳಲ್ಲಿ ಭಾರತದ 2 ಗ್ರಂಥಗಳು(ಮಹಾಭಾರತ, ರಾಮಾಯಣ) ಪ್ರಮುಖ ಸ್ಥಾನ ಪಡೆದಿದೆ. ಭಾರತದ ಸಂಸ್ಕೃತಿ ಮಾತಿನ ಮೂಲಕವೇ ಬೆಳೆದು ಬಂದಿದೆ. ಹಾಗಾಗಿ ಆದರ್ಶಗಳು ಶಿಷ್ಟಾಚಾರಗಳು ಉಳಿದುಕೊಂಡಿವೆ ಎಂದರು.

ರಾಮಾಯಣದಲ್ಲಿ ಶ್ರೀರಾಮ ಆದರ್ಶ ವ್ಯಕ್ತಿಯಾದರೆ, ಲಕ್ಷ್ಮಣ ಆದರ್ಶ ಸಹೋದರ. ಸೀತೆ ಆದರ್ಶ ಮಹಿಳೆ. ಹೀಗೆ ಆದರ್ಶ ವ್ಯಕ್ತಿತ್ವ ರೂಪಿಸುವ ಮಹಾ ಕಾವ್ಯ ರಚಿಸಿದವರು ವಾಲ್ಮೀಕಿ ಮಹರ್ಷಿಗಳು ಎಂದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ ಎಸ್ಸಿ ಎಸ್ಟಿ ಮೀಸಲಾತಿ ವಿಚಾರವಾಗಿ ಪ್ರಸನ್ನಾನಂದಪುರಿ ಸ್ವಾಮೀಜಿಗಳು 242 ದಿನಗಳ ಕಾಲ ನಿರಂತರವಾಗಿ ಹೋರಾಟ ಮಾಡಿದ್ದರಿಂದ ಮೀಸಲಾತಿ ಹೆಚ್ಚಳಕ್ಕೆ ಕಾರಣವಾಯಿತು. ಸರ್ಕಾರ ಸರ್ವಪಕ್ಷದ ಸಭೆಯನ್ನು ಕರೆದು ಮೀಸಲಾತಿ ವಿಚಾರವಾಗಿ ಚರ್ಚಿಸಿ ಹೆಚ್ಚಳ ಮಾಡಿರುವುದಕ್ಕೆ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಮೀಸಲಾತಿ ಹೆಚ್ಚಳ ವಿಚಾರವಾಗಿ ಹಲವು ವರ್ಷಗಳಿಂದ ನಿರಂತರವಾಗಿ ಹೋರಾಟ ಮಾಡಿಕೊಂಡು ಬರಲಾಗಿದೆ. ಅದರಲ್ಲಿ ದಿ.ಮಾಜಿ ಶಾಸಕ ಚಿಕ್ಕಮಾದು, ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ, ವಿಧಾನ ಪರಿಷತ್ ಮಾಜಿ ಸದಸ್ಯ ಸಿದ್ದರಾಜು, ಅಪ್ಪಣ್ಣ ಹಾಗೂ ಇನ್ನು ಪ್ರಮುಖರು ಹೋರಾಟ ಮಾಡಿದ್ದಾರೆ. ಅವರುಗಳಿಗೂ ಈ ಸಂದರ್ಭ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಮುಂದಿನ ದಿನಗಳಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸರ್ಕಾರದ ಮಂತ್ರಿಗಳು ಹಾಗೂ ಪ್ರಮುಖರನ್ನು ಸ್ವಾಮೀಜಿಯವರ ನೇತೃತ್ವದಲ್ಲಿ ಸಮುದಾಯದ ಮುಖಂಡರು ಹಾಗೂ ನಾಯಕರ ಜೊತೆಗೂಡಿ ದೊಡ್ಡ ಮಟ್ಟದಲ್ಲಿ ಸಭೆ ಕರೆದು ಸನ್ಮಾನಿಸಲಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ರತ್ನಾಂಬಿಕೆ, ಗ್ರೇಡ್–2 ತಹಸೀಲ್ದಾರ್ ಸಣ್ಣ ರಾಮಪ್ಪ ಪುರಸಭಾ ಮುಖ್ಯಾಧಿಕಾರಿ ಸುರೇಶ್, ಬಿಇಓ ಉದಯಕುಮಾರ್, ಕೃಷಿ ಅಧಿಕಾರಿ ರಂಗಸ್ವಾಮಿ, ತಾಲೂಕು ನಾಯಕ ಸಮಾಜದ ಅಧ್ಯಕ್ಷ ದೊಡ್ಡ ನಾಯಕ, ಮಾಜಿ ಅಧ್ಯಕ್ಷ ಶಂಭುಲಿಂಗ ನಾಯಕ, ಉಪಾಧ್ಯಕ್ಷ ಜಯಪ್ರಕಾಶ್ ಚಿಕ್ಕಣ್ಣ, ಜಿಪಂ ಮಾಜಿ ಸದಸ್ಯರಾದ ಚಿಕ್ಕವೀರ ನಾಯ್ಕ, ಎಚ್.ಸಿ.ಮಂಜುನಾಥ್, ಮುಖಂಡರಾದ ಪರಶಿವಮೂರ್ತಿ, ಕೃಷ್ಣಸ್ವಾಮಿ, ನಾಗರಾಜ್, ರಾಜನಾಯ್ಕ, ಪುಟ್ಟು ಬಸವ ನಾಯಕ, ಚಂದ್ರಿಕಾ, ದೊರೆಸ್ವಾಮಿ, ಬಸವರಾಜ್, ನಿಂಗನಾಯಕ, ಅಂಕನಾಯಕ, ಸೂರಿ, ಆನಂದ, ಲೋಕೇಶ್, ಯಶ್ವಂತ್, ಸಿದ್ದರಾಮ, ಶಿವಯ್ಯ, ಜವರನಾಯಕ, ಕೃಷ್ಣ, ಶಿವಕುಮಾರ್, ಮಹದೇವ ನಾಯಕ ಇದ್ದರು.

ಜಗತ್ತು ಕಂಡ ಶ್ರೇಷ್ಠ ದಾರ್ಶನಿಕ ವಾಲ್ಮೀಕಿ: ಹೆಚ್‌ಪಿಎಂ



ಹುಣಸೂರು, ಅ.9– ಹಿಂದೂಗಳ ಪವಿತ್ರ ಗ್ರಂಥ ರಾಮಾಯಣ ರಚಿಸುವ ಮೂಲಕ ಜಗತ್ತು ಕಂಡ ಶ್ರೇಷ್ಠ ದಾರ್ಶನಿಕ ಎಂಬ ಗೌರವಕ್ಕೆ ಪಾತ್ರರಾಗಿರುವ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಗೌರವಪೂರ್ವಕವಾಗಿ ಆಚರಿಸುವುದು ನಮ್ಮೆಲ್ಲರ ಪುಣ್ಯ ಎಂದು ಶಾಸಕ ಹೆಚ್.ಪಿ.ಮಂಜುನಾಥ್ ತಿಳಿಸಿದರು.

ನಗರದ ತಾಲೂಕು ಕಚೇರಿಯಲ್ಲಿ ನಾಡಹಬ್ಬಗಳ ಆಚರಣಾ ಸಮಿತಿಯಿಂದ ಏರ್ಪಡಿಸಿದ್ದ ಮಹರ್ಷಿ ವಾಲ್ಮೀಕಿ ಜಯಂತಿಯಲ್ಲಿ ಮಹರ್ಷಿಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಬೇಡನಾಗಿ ಹುಟ್ಟಿದರೂ ಪರಿವರ್ತನೆಯ ಹಾದಿಯಲ್ಲಿ ತಮ್ಮ ಜ್ಞಾನದ ಮೂಲಕ ಜಗತ್ತನ್ನೇ ಗೆದ್ದು ಸುಜ್ಞಾನದ ಮಹಾ ಬೆಳಕನ್ನು ಚೆಲ್ಲಿದ ಮಹಾಮುನಿ ವಾಲ್ಮೀಕಿ ಎಂದರು.


ವಿಧಾನ ಪರಿಷತ್ ಸದಸ್ಯ ಹೆಚ್. ವಿಶ್ವನಾಥ್ ಮಾತನಾಡಿ, ಮಹರ್ಷಿ ವಾಲ್ಮೀಕಿ ರಾಮಾಯಣದಲ್ಲಿ ಪ್ರತಿಪಾದಿಸಿರುವ ಎಲ್ಲಾ ಅಂಶಗಳು ಇಂದಿಗೂ ಪ್ರಸ್ತುತವಾಗಿದೆ ಎಂದರು. ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಡಾ.ಅಶೋಕ್, ತಾಲೂಕು ನಾಯಕರ ಸಂಘದ ಅಧ್ಯಕ್ಷ ಅಣ್ಣಯ್ಯ ನಾಯಕ, ಚೌಡನಾಯ್ಕ, ನಗರಸಭಾ ಅಧ್ಯಕ್ಷೆ ಗೀತಾ, ಉಪಾಧ್ಯಕ್ಷೆ ಆಶಾ, ಮಾಜಿ ಉಪಾಧ್ಯಕ್ಷ ದೇವನಾಯ್ಕ, ತಾಲೂಕು ರೈತ ಸಂಘದ ಅಧ್ಯಕ್ಷ ಚಿಕ್ಕಣ್ಣ, ದಸಂಸ ಜಿಲ್ಲಾ ಸಂಚಾಲಕ ನಿಂಗರಾಜ್ ಮಲ್ಲಾಡಿ, ಎಆರ್ಎಸ್ ಸಮಿತಿ ಸದಸ್ಯ ಪ್ರಭಾಕರ್, ಬಿಳಿಕೆರೆ ಬ್ಲಾಕ್ ಅಧ್ಯಕ್ಷ ದೇವರಾಜ್, ಬ್ಲಾಕ್ ಅಧ್ಯಕ್ಷ ಟಿ.ವಿ.ನಾರಾಯಣ್, ಬಸವರಾಜ್, ಕುಮಾರ್ ಸೇರಿದಂತೆ ಇತರರಿದ್ದರು.

ವಾಲ್ಮೀಕಿ ಆದರ್ಶವೇ ಉತ್ತಮ ಸಂದೇಶ



ಸರಗೂರು, ಅ.9– ವಾಲ್ಮೀಕಿ ಆದರ್ಶವೇ ಒಂದು ಉತ್ತಮ ಸಂದೇಶ ಎಂದು ಮುಖ್ಯಾಧಿಕಾರಿ ಬಿ.ಜಿ.ಸತೀಶ್ ತಿಳಿಸಿದರು.

ಪಟ್ಟಣ ಪಂಚಾಯಿತಿಯಲ್ಲಿ ನಡೆದ ವಾಲ್ಮೀಕಿ ಜಯಂತಿಯಲ್ಲಿ ಮಾತನಾಡಿದ ಅವರು, ಯುವಕರು ವಾಲ್ಮೀಕಿ ಅವರ ಆದರ್ಶಗಳನ್ನು ಮೈಗೂಡಿಸಿಕೊಂಡು ಇತರರಿಗೂ ತಿಳಿಸಬೇಕು ಎಂದರು. ಪಪಂ ಉಪಾಧ್ಯಕ್ಷ ವಿನಾಯಕ ಪ್ರಸಾದ್, ಸದಸ್ಯರಾದ ಶ್ರೀನಿವಾಸ್, ನೂರಾಳಸ್ವಾಮಿ, ಚಲುವಕೃಷ್ಣ, ಹೇಮಾವತಿ, ಉಮಾ, ಚಿಕ್ಕತಾಯಮ್ಮ, ಚೈತ್ರ, ಮುಖಂಡರಾದ ನವೀನ್, ಶ್ರೀನಾಥ್, ರಾಮು, ಎಂ.ನಾಗರಾಜು, ಶ್ಯಾಂಶಿವಾಜಿ, ಸಿಬ್ಬಂದಿಗಳಾದ ಸಂತೋಷ್, ನಾಗರತ್ನಮ್ಮ, ರಾಮು, ಆರಾಧ್ಯ, ಶಿವಪ್ರಸಾದ್, ಅನಿತಾ, ಪಳನಿಸ್ವಾಮಿ, ಸತೀಶ್, ನಾಗೇಶ್ ಇತರರಿದ್ದರು.



ಮೈಸೂರು ತಾಲೂಕಿನ ಕಡಕೊಳ ಗ್ರಾಮದಲ್ಲಿ ಕನ್ನಡ ಗೆಳೆಯರ ಬಳಗದಿಂದ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಈ ವೇಳೆ ದಿ. ಯೂನಿಯನ್ ರೈತ ಸಹಕಾರ ಬ್ಯಾಂಕ್ ಉಪಾಧ್ಯಕ್ಷ ಕುಮಾರಸ್ವಾಮಿ, ಬಳಗದ ಅಧ್ಯಕ್ಷ ವಿಶ್ವನಾಥ್, ಉಪಾಧ್ಯಕ್ಷ ಶಿವಪ್ಪ, ಕಾರ್ಯದರ್ಶಿ ಸ್ವಾಮಿ ನಾಯಕ್, ನಿರ್ದೇಶಕ ನಟರಾಜು, ತಾಪಂ ಮಾಜಿ ಸದಸ್ಯ ಶ್ರೀಕಂಠ, ಗ್ರಾಪಂ ಮಾಜಿ ಉಪಾಧ್ಯಕ್ಷ ರವಿ, ಹಾಪ್‌ಕಾಮ್ಸ್ ಮಾಜಿ ನಿರ್ದೇಶಕ ಪಿ.ಮಹೇಶ್ ಸೇರಿದಂತೆ ಗ್ರಾಮಸ್ಥರಿದ್ದರು.

ರಾಮಾಯಣ, ಮಹಾಭಾರತ ರಚಿಸಿದ ಮಹಾತ್ಮರನ್ನು ಸ್ಮರಿಸಿ

ವಾಲ್ಮೀಕಿ ಜಯಂತಿಯಲ್ಲಿ ಪುರಸಭಾಧ್ಯಕ್ಷ ಎಸ್.ಮದನ್‌ರಾಜ್



ತಿ.ನರಸೀಪುರ, ಅ.9– ದೇಶದ ಸಾಂಸ್ಕೃತಿಕ ಹಿರಿಮೆಯನ್ನು ಜಗತ್ತಿಗೆ ಸಾರಿದ ಅತ್ಯಮೂಲ್ಯ ಕೃತಿಗಳಾದ ರಾಮಾಯಣ ಹಾಗೂ ಮಹಾಭಾರತ ರಚಿಸಿದ ಮಹಾತ್ಮರನ್ನು ಸ್ಮರಿಸಬೇಕಾದದ್ದು ನಮ್ಮೆಲ್ಲರ ಕರ್ತವ್ಯ ಎಂದು ಪುರಸಭಾಧ್ಯಕ್ಷ ಎಸ್.ಮದನ್‌ರಾಜ್ ತಿಳಿಸಿದರು.

ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಪಟ್ಟಣದ ತಾಪಂ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಮಹರ್ಷಿ ವಾಲ್ಮೀಕಿ ಜಯಂತಿಯಲ್ಲಿ ಅವರು ಮಾತನಾಡಿದರು. ವಾಲ್ಮೀಕಿ ಮಹರ್ಷಿಗಳ ಮೂಲದ ಬಗ್ಗೆ ಮಾತನಾಡುವುದಕ್ಕಿಂತ ಅವರು ರಾಮಾಯಣದಲ್ಲಿ ಪ್ರತಿಪಾದಿಸಿರುವ ಉತ್ತಮ ವಿಚಾರಗಳ ಬಗ್ಗೆ ಆಸಕ್ತಿ ವಹಿಸುವ ಜೊತೆಗೆ ಅವುಗಳನ್ನು ಮುಂದಿನ ಪೀಳಿಗೆಗೆ ತಲುಪಿಸಬೇಕಿದೆ ಎಂದ ಅವರು, ವಾಲ್ಮೀಕಿ ಮಹರ್ಷಿ ಅವರನ್ನು ಒಂದು ನಿರ್ದಿಷ್ಟ ವರ್ಗ ಅಥವಾ ಧರ್ಮಕ್ಕೆ ಮಾತ್ರ ಸೀಮಿತವಾಗಿಸಿದರೆ ಅದು ನಾವು ಅವರಿಗೆ ಮಾಡುವ ಅವಮಾನ ಎಂದರು.

ಬೇಡ ಕುಲಕ್ಕೆ ಸೇರಿದ ಮಹರ್ಷಿ ವಾಲ್ಮೀಕಿ ರಾಮಾಯಣ ಎಂಬ ಉತ್ಕೃಷ್ಟ ಮಹಾಕಾವ್ಯವನ್ನೇ ಬರೆದರು. ರಾಮಾಯಣದಲ್ಲಿ 24,253 ಶ್ಲೋಕಗಳಿದ್ದು, 7 ಕಾಂಡಗಳಿವೆ. ಈ ಕೃತಿಯು ಇಡೀ ಪ್ರಪಂಚಕ್ಕೆ ಅನ್ವಯವಾಗುವಂತದ್ದಾಗಿದೆ. ಜಾತಿ, ಮೇಲು–ಕೀಳು ಎಲ್ಲವನ್ನು ನಮ್ಮ ಬೆನ್ನಿಗೆ ಅಂಟಿಸಿಕೊಂಡು ಬಂದಿದ್ದೇವೆ. ಪ್ರತಿಭೆಗೆ ಯಾವುದೂ ಅಡ್ಡಿಯಾಗಬಾರದು. ಆದರೆ, ಅಡ್ಡಿಪಡಿಸಲು, ಕಾಲೆಳೆಯಲು ಜನರು ಸರತಿ ಸಾಲಿನಲ್ಲಿ ನಿಂತಿರುತ್ತಾರೆ. ವ್ಯಕ್ತಿಯೊಬ್ಬನ ಬುದ್ಧಿವಂತಿಕೆ, ಸಾಮರ್ಥ್ಯಕ್ಕೆ ಸರಿಸಮನಾಗಿ ತಲುಪಲು ಸಾಧ್ಯವಾಗದಿದ್ದರೆ ಜನರು ಆತನ ಹುಟ್ಟು, ಜಾತಿ ಬಗ್ಗೆ ಪ್ರಸ್ತಾಪಿಸುತ್ತಾರೆ. ಆತನನ್ನು ಮಾನಸಿಕವಾಗಿ ಕುಗ್ಗಿಸಲು ಯತ್ನಿಸುತ್ತಾರೆ. ಹಾಗಾಗಿ, ವಾಲ್ಮೀಕಿ ಜಯಂತಿ ಸಂಭ್ರಮದ ಜೊತೆಗೆ ಮಾನವ ಪ್ರಜ್ಞೆ ಮೂಡಿಸಬೇಕು ಎಂದರು.

ಮಹರ್ಷಿ ವಾಲ್ಮೀಕಿ ಕುರಿತಂತೆ ಪ್ರಭುಸ್ವಾಮಿ ಸುದೀರ್ಘ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ತಾಪಂ ಇಓ ಸಿ.ಕೃಷ್ಣಕುಮಾರ್, ಬಿಇಓ ಮರಿಸ್ವಾಮಿ, ಪ.ಪಂಗಡಗಳ ಇಲಾಖೆ ಕಲ್ಯಾಣಾಧಿಕಾರಿ ಕೋಮಲ, ತಾಲೂಕು ನಾಯಕ ಸಂಘದ ಅಧ್ಯಕ್ಷ ಬನ್ನೂರು ಚಿಕ್ಕಯ್ಯ, ಕಾರ್ಯದರ್ಶಿ ಶಶಿಧರ್, ಮಾಜಿ ಅಧ್ಯಕ್ಷ ಹೊನ್ನನಾಯಕ, ಚಿನ್ನಸ್ವಾಮಿ, ಎಸ್‌ಸಿ/ ಎಸ್‌ಟಿ ಮೀಸಲಾತಿ ಹೆಚ್ಚಳ ಹೋರಾಟ ಸಮಿತಿ ಕಾರ್ಯದರ್ಶಿ ಆಲಗೂಡು ನಾಗರಾಜು, ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ, ಬಿಎಸ್‌ಪಿ ಪುಟ್ಟಸ್ವಾಮಿ, ಸೋಸಲೆ ನಂಜುಂಡಯ್ಯ, ಪೊಲೀಸ್ ಸಿದ್ದಪ್ಪ, ಮಾಲಂಗಿ ಶಿವಸ್ವಾಮಿ, ನಿಲಸೋಗೆ ಮಹೇಶ್, ಉಪನ್ಯಾಸಕ ಮೂಗೂರು ಕುಮಾರಸ್ವಾಮಿ, ಪುರಸಭೆ ಸದಸ್ಯರಾದ ಸಿಸ್ಟಂ ಸಿದ್ದು, ಬಾದಾಮಿ ಮಂಜು, ಎಲ್.ಮಂಜುನಾಥ್, ಎನ್. ಲೋಕೇಶ್, ಗೋವಿಂದ, ಬೂದಹಳ್ಳಿ ಸಿದ್ದರಾಜು, ಕಿರಗಸೂರು ಪ್ರಸಾದ್ ನಾಯಕ್, ಹೆಮ್ಮಿಗೆ ಹೊನ್ನನಾಯಕ್, ತಿರುಮಕೂಡಲು ವಾಸು, ಕುಮಾರ್, ಗವಿನಾಯಕ್, ಯಡದೊರೆ ಮಹದೇವ ನಾಯಕ, ಕೃಷ್ಣಮೂರ್ತಿ, ಇಂಡವಾಳು ಬಸವರಾಜು, ಮರಡೀಪುರ ನಾಗರಾಜು, ತಲಕಾಡು ಮಹದೇವ ಮತ್ತಿತರರಿದ್ದರು.



ನಂಜನಗೂಡು ತಾಲೂಕಿನ ಹುಲ್ಲಹಳ್ಳಿ ಗ್ರಾಮದಲ್ಲಿ ಕಿಚ್ಚ ಸುದೀಪ್ ಅಭಿಮಾನಿ ಬಳಗದಿಂದ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಈ ವೇಳೆ ತಾಪಂ ಮಾಜಿ ಸದಸ್ಯ ಶಿವಣ್ಣ, ಗ್ರಾಪಂ ಅಧ್ಯಕ್ಷ ಹೆಚ್.ಎನ್.ಮಹೇಶ್, ಸದಸ್ಯ ಶಿವಣ್ಣ, ಶ್ರೀಕಂಠೇಶ್ವರ ಆಗ್ರೋ ಮಾಲೀಕ ಸೋಮಶೇಖರ್, ಕಿಚ್ಚ ಸುದೀಪ್ ಅಭಿಮಾನಿ ಬಳಗದ ಅಧ್ಯಕ್ಷ ಸತೀಶ್, ಉಪಾಧ್ಯಕ್ಷ ನಂಜುಂಡ, ನಾಗರಾಜು ಸೇರಿದಂತೆ ಇತರರಿದ್ದರು.



ಕಂಪಲಾಪುರ ಸಮೀಪದ ದೊಡ್ಡಬೇಲಾಳು ಗ್ರಾಪಂನಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಈ ವೇಳೆ ಪಿಡಿಓ ಜಿ.ರವೀಂದ್ರನಾಥ್, ಉಪಾಧ್ಯಕ್ಷೆ ಗಾಯತ್ರಿ, ವಾಟರ್‌ಮನ್ ರಾಜಶೇಖರ್, ಶಂಕರ ನಾಯಕ್ ಹಾಜರಿದ್ದರು.



ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಸಮೀಪದ ದೊಡ್ಡೇಗೌಡನಕೊಪ್ಪಲು ಗ್ರಾಮದ ಕುರುಬ ಸಮಾಜದ 50ಕ್ಕೂ ಹೆಚ್ಚು ಮುಖಂಡರು ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ ನೇತೃತ್ವದಲ್ಲಿ ಕಾಂಗ್ರೆಸ್ ತೊರೆದು ಜೆಡಿಎಸ್‌ಗೆ ಸೇರ್ಪಡೆಗೊಂಡರು. ಈ ವೇಳೆ ಗ್ರಾಪಂ ಮಾಜಿ ಉಪಾಧ್ಯಕ್ಷ ಮಧು, ಮುಖಂಡರಾದ ಕೃಷ್ಣೇಗೌಡ, ರವಿ, ಬಸವರಾಜ್, ಮಹೇಶ್, ಗಿರೀಶ್ ಪಿಎಲ್‌ಡಿ ಬ್ಯಾಂಕ್ ಮಾಜಿ ನಿರ್ದೇಶಕ ಶಿವಕುಮಾರ್, ಪರಮೇಶ್, ದೇವರಾಜು, ಸುರೇಶ್, ಮಹೇಂದ್ರ, ಗೋಪಾಲ, ಮಂಜು, ದೊಡ್ಡೇಗೌಡ, ರವಿ, ಸಂದೇಶ್ ಸ್ವಾಮಿ, ರಮೇಶ ಇತರರಿದ್ದರು.

ನೈಜೀರಿಯಾದಲ್ಲಿ ಹಡಗು ಮುಳುಗಿ 10 ಸಾವು, 60 ಜನ ನಾಪತ್ತೆ

ಅಬುಜಾ, ಅ.9– ಹಡಗೊಂದು ಮುಳುಗಿ ಅದರಲ್ಲಿ ಪ್ರಯಾಣಿಸುತ್ತಿದ್ದ ಕನಿಷ್ಠ 10 ಜನರು ಸಾವನ್ನಪ್ಪಿದ್ದು, ಸುಮಾರು 60 ಜನರು ನಾಪತ್ತೆಯಾಗಿರುವ ಘಟನೆ ನೈಜೀರಿಯಾದ ಅನಂಬ್ರಾ ರಾಜ್ಯದಲ್ಲಿ ನಡೆದಿದೆ.

ವರದಿಗಳ ಪ್ರಕಾರ ಹಡಗಿನಲ್ಲಿ 85 ಜನರಿದ್ದರು. ಭಾರೀ ಅಲೆಗಳ ನಡುವೆ ಹಡಗು ಮುಳುಗಿದ್ದು, ಅದರಲ್ಲಿದ್ದ 10 ಜನರು ಸಾವನ್ನಪ್ಪಿದ್ದಾರೆ. 60 ಜನ ನಾಪತ್ತೆಯಾಗಿದ್ದು, ಅವರ ರಕ್ಷಣೆಗಾಗಿ ಹುಡುಕಾಟ ನಡೆಸಲಾಗುತ್ತಿದೆ.

ನಿಧನ



ಇವರು ದಿ: 09.10.2022 ರಂದು ದೈವಾಧೀನರಾಗಿದ್ದು ಮೃತರ ಅಂತ್ಯಕ್ರಿಯೆಯನ್ನು ದಿ.10.10.2022 ಸೋಮವಾರ 12 ಗಂಟೆಗೆ ಕಾವೇರಿ ಶಾಲೆ ಪಕ್ಕದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು

ದುಃಖತಪ್ತರು: ಕುಟುಂಬವರ್ಗ

ಚಿಕ್ಕಣ್ಣ (ಬೆಟ್ಟಯ್ಯ)

#11, 4 ನೇ ಕ್ರಾಸ್, 5 ನೇ ಮೇನ್, ಜಯನಗರ, ಮೈಸೂರು.

ಸಾರ್ವಜನಿಕ ಪ್ರಕಟಣೆ

ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಚಿಕ್ಕಹರದನಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ.16/3, 16/4 ಬಗ್ಗೆ ಬಿ.ಕೃಷ್ಣಪ್ಪರವರು ಮುಡಾ ಆಯುಕ್ತರು, ಮತ್ತು ಕಾವೇರಿ ಗೃಹ ನಿರ್ಮಾಣ ಸಹಕಾರ ಸಂಘದ ವಿರುದ್ಧ ಪ್ರಧಾನ ಕಿರಿಯ ಸಿವಿಲ್ ನ್ಯಾಯಧೀಶರವರ ನ್ಯಾಯಾಲಯ, ಮೈಸೂರು ಇಲ್ಲಿನ ಅಸಲು ದಾವಾ ಸಂಖ್ಯೆ: 716/2019 ರಂತೆ ದಾವೆಯನ್ನು ಹೂಡಿರುತ್ತಾರೆ. ಸದರಿ ದಾವೆಯು ಇತ್ಯರ್ಥವಾಗುವವರೆವಿಗೂ ಕಾವೇರಿ ಗೃಹ ನಿರ್ಮಾಣ ಸಹಕಾರ ಸಂಘದಿಂದ ಸಾರ್ವಜನಿಕರು ಯಾವುದೇ ರೀತಿಯ ಸೈಟುಗಳನ್ನು/ನಿವೇಶನಗಳನ್ನು ಕ್ರಯ/ ಖರೀದಿ ಮಾಡಿಕೊಳ್ಳಬಾರದೆಂದು ಈ ಮೂಲಕ ತಿಳಿಯಪಡಿಸಲು ಇಚ್ಛಿಸುತ್ತೇವೆ.

Sd/- Lingarajaa, B.Com, LLB, Advocate, Mundugadore village, Doddapalya post, Srirangapatna Tq, Mo;9535755882

13ನೇ ವರ್ಷದ ಸವಿನೆನಪು



ನಾಗೇಂದ್ರ (ಗುಂಡು)


ಇಂತಿ ದುಃಖತಪ್ತರು: ಮರ್ಕಿ ಮಹದೇವ, ಸರೋಜ & ಕುಟುಂಬವರ್ಗದವರು

ಮೈಸೂರು ಮಿತ್ರ — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು





ಸಾರ್ವಜನಿಕ ಪ್ರಕಟಣೆ

ಮಧೂಸ್ ಟೈರ್ಸ್

(Since 1951)

ಗೋಪಾಲಗೌಡ ಆಸ್ಪತ್ರೆ / ನಜ಼ರ್‌ಬಾದ್‌ನಲ್ಲಿ ನಮ್ಮ ಯಾವುದೇ ಶಾಖೆ (Branch) ಇರುವುದಿಲ್ಲ

